
ಸಂಪುಟ 24 ಸಂಚಿಕೆ 3
ಜನವರಿ 20, 2002 ಬೆಲೆ ರೂ. 3.00

ಐಕ್ಯರಂಗ

ದುಡಿವ ಜನರ ಪ್ರಾಣಮಿತ್ರ




ಸಾರ್ಕ್ ಶೃಂಗಸಭೆ : ಸಹಕಾರ ಮರೀಚಿಕೆಯೇ?



ಸ್ಲಂ ಸುಗ್ರೀವಾಜ್ಞೆ: ಭೂಗಳ್ಳರ ಬಾಯಿಗೆ ಕೊಳಚೆ ಪ್ರದೇಶಗಳು

'ಕಂಪ್ಯೂಟರ್ ಕಲಿತಾಯ್ತು ಜೀವನಾಂಶ ಇಲ್ಲವಾಯ್ತು'

SOFTWERE TO NOWHERE !



ನನ್ನೊಳಗಿನ ಹಾಡು ಕ್ಯೂಬಾ'ಕ್ಕೆ ರಾಜ್ಯ ಪ್ರಶಸ್ತಿಯ ಗರಿ

ಛಿದ್ರಗೊಂಡ ಸೋವಿಯತ್ ಸಾಮ್ರಾಜ್ಯಶಾಹಿ ಮೇಲುಗೈ

ಮಾಸದ ನೆನಪುಗಳು
(ಒಂದು ರಾಜಕೀಯ ಆತ್ಮಕಥನ)



ಜ್ಯೋತಿಬಸು ಆತ್ಮಕಥನ


ಕನ್ನಡಕ್ಕೆ: ವಿಶ್ವಕುಂದಾಪುರ

ಧಾರವಾಹಿ: 86

ಕಳೆದ ಸಂಚಿಕೆಯಲ್ಲಿ ಜಾತ್ಯಾತೀತ ಶಕ್ತಿಗಳಿಗೆ ದೊಡ್ಡ ಹೊಡೆತ ನೀಡಿದ ಉತ್ತರ ಪ್ರದೇಶ ಚುನಾವಣೆ ಫಲಿತಾಂಶ, ಮಧ್ಯ ಪ್ರದೇಶ, ರಾಜಸ್ತಾನ ಮತ್ತು ಹಿಮಾಚಲ ಪ್ರದೇಶದಲ್ಲಿ ಬಿಜೆಪಿ ಹಿನ್ನಡೆ, ನಿರೀಕ್ಷಿಸಿದ ಮಟ್ಟ ತಲುಪದ ರಾಷ್ಟ್ರೀಯ ರಂಗ, ಪ.ಬಂಗಾಳದಲ್ಲಿ ಸತತ ನಾಲ್ಕನೇ ಬಾರಿ ಎಡರಂಗ ಅಧಿಕಾರಕ್ಕೆ ಬಂದ ಬಗ್ಗೆ ಓದಿರುವಿರಿ. ಈ ಸಂಚಿಕೆಯಲ್ಲಿ 1991 ರ ವಿನಾಶಕಾರಿ ಆರ್ಥಿಕ ನೀತಿಗೆ ಜನಪರ ಪರ್ಯಾಯ ನೀತಿ ಘೋಷಣೆ, ಗೋರ್ಬಚೆವ್‌ನಿಂದ ಸಮಾಜವಾದದ ಯಶಸ್ಸುಗಳ ನಿರಾಕರಣೆ, 1989 ಚೀನಾ ವಿದ್ಯಾರ್ಥಿಗಳ ಅಶಾಂತಿ, ಸೋವಿಯತ್ ಒಕ್ಕೂಟದ ವಿಘಟನೆ, ನೇಪಾಳದಲ್ಲಿ ಪ್ರಜಾಪ್ರಭುತ್ವ ಸ್ಥಾಪನೆ ಮತ್ತು ಕಮ್ಯುನಿಸ್ಟರ ಐಕ್ಯತೆ ಬಗ್ಗೆ ಓದಿ....

ಎಡ ಮತ್ತು ಇತರ ಪ್ರಜಾಸತ್ತಾತ್ಮಕ ಶಕ್ತಿಗಳು 1991 ಜುಲೈನಲ್ಲಿ ಒಂದು ಸ್ಪಷ್ಟ ಆರ್ಥಿಕ ಪರ್ಯಾಯವನ್ನು ರೂಪಿಸಿದೆವು. ಒಂದು ಸಮಾವೇಶ ನಡೆಯಿತು. ಪಶ್ಚಿಮ ಬಂಗಾಳ ಸರಕಾರ ಕೂಡ ಒಂದು ಮಾದರಿ ದಾಖಲೆ ಪತ್ರವನ್ನು ಮಂಡಿಸಿತು.

ಅಕ್ರಮ ದಾಸ್ತಾನುಗಾರರು ಹಾಗೂ ಕಾಳಸಂತೆಕೋರರ ವಿರುದ್ಧ ಕ್ರಮ, ಪ್ರಧಾನ ಆಸ್ತಿಗಳ (Capital Assets) ಮೇಲೆ ಹೆಚ್ಚು ತೆರಿಗೆ, ನೇರ ತೆರಿಗೆಗಳನ್ನು ಇಳಿಸುವುದು ಹಾಗೂ ಅನವಶ್ಯಕ ವೆಚ್ಚಗಳನ್ನು ತಗ್ಗಿಸುವುದು - ನಮ್ಮ ಸಿದ್ಧಾಂತ ಇವುಗಳನ್ನು ಆಧರಿಸಿತ್ತು. ಸಾರ್ವಜನಿಕ ಕ್ಷೇತ್ರಕ್ಕೆ ಸೂಕ್ತ ಆದ್ಯತೆ ನೀಡಬೇಕು ಹಾಗೂ ವ್ಯಾಪಕ ಆಮದಿನ ಮೂಲಕ ಶ್ರೀಮಂತರು ಕೊಬ್ಬಲು ಬಿಡಬಾರದು ಎಂದು ನಾವು ಒತ್ತಿಹೇಳಿದೆವು. ಆದರೆ ನಾವು ವಿಶೇಷವಾಗಿ ಭೂಸುಧಾರಣೆಗಳಿಗೆ ಪ್ರಾಧಾನ್ಯ ನೀಡಿದೆವು. 14 ಜೀವನಾವಶ್ಯಕ ಸಾಮಗ್ರಿಗಳನ್ನು ಸರಕಾರಿ ಜಾಲದ ಮೂಲಕ ವಿತರಿಸಬೇಕು ಎಂದೆವು. ಇವೆಲ್ಲ ಕಿವುಡನ ಮುಂದೆ ಕಿನ್ನರಿ ಬಾರಿಸಿದಂತಾಯಿತು ಅಷ್ಟೆ. ನಾವು ನಮ್ಮ ಆರ್ಥಿಕ ಸಾರ್ವಭೌಮತ್ವವನ್ನು ಕಳೆದು ಕೊಳ್ಳುತ್ತಿದ್ದೆವು. ಬಡವರಿಗೆ ಅನಾನುಕೂಲ ಮಾಡಿ ಶ್ರೀಮಂತರನ್ನು ತೃಪ್ತಿ ಪಡಿಸುವುದರಲ್ಲೇ ಸರಕಾರ ಆಸಕ್ತವಾಗಿತ್ತು. ಇದು ಮನಮೋಹನಸಿಂಗ್‌ರ ಹೊಸ ಆರ್ಥಿಕ ನೀತಿಯ ಫಲವಾಗಿತ್ತು.



ಗೋರ್ಬಚೆವ್

ಪೂರ್ವ ಯೂರೋಪ್

1991 ಒಂದು ಮಹತ್ವದ ವರ್ಷ. ಸಮಾಜವಾದಿ ಶಕ್ತಿಗಳು ಮತ್ತು ಕಾರ್ಮಿಕ ಚಳುವಳಿ ಕಠಿಣ ಪರಿಸ್ಥಿತಿಯನ್ನು ಎದುರಿಸುತ್ತಿತ್ತು. ಅಧಿಕಾರದ ಸಮತೋಲನ ಸಾಮ್ರಾಜ್ಯಶಾಹಿಗಳತ್ತ ವಾಲಿದ್ದು ವಾಸ್ತವ ವಿಚಾರವಾಗಿತ್ತು. ನಾವು ಈ ಅಪಾಯವನ್ನು ಮೊದಲೇ ನಿರೀಕ್ಷಿಸಿದ್ದೆವು. 1990 ರ ಮೇ 28-31 ರ ಕೇಂದ್ರ ಸಮಿತಿ ಸಭೆ ಈ ವಿಚಾರವಾಗಿ ಈ ರೀತಿ ಸ್ಪಷ್ಟವಾಗಿ ಹೇಳಿತ್ತು : "ಪರಿಸ್ಥಿತಿಯನ್ನು ಅರ್ಥಮಾಡಿಕೊಳ್ಳುವುದು ಹಾಗೂ ತಿಳಿದುಕೊಳ್ಳುವುದು ಮತ್ತು ನಮ್ಮ ಅನುಭವಗಳಿಂದ ಪಾಠ ಕಲಿಯುವುದು ತುಂಬಾ ಅಗತ್ಯ. ಈ ಹಂತದಲ್ಲಿ ಎಡ ಏಕತೆ ತುಂಬಾ ಮಹತ್ವದ್ದು"

"ಮಾರ್ಕ್ಸ್‌ವಾದ-ಲೆನಿನ್ ವಾದಗಳ ಮೂಲಕ ಮಾತ್ರವೇ ಸಮಾಜವಾದವನ್ನು ವ್ಯಕ್ತಪಡಿಸಬಹುದು. ಇದು ಒಂದು ನೈತಿಕ ಪ್ರಶ್ನೆ ಮಾತ್ರವೇ ಆಗಿರಲಿಲ್ಲ, ಆದರೆ ಇದು ಇತಿಹಾಸದ ಅಗತ್ಯವೂ ಹೌದು ಎಂಬುದನ್ನು ಕಾಲ ನಮಗೆ ಕಲಿಸಿದೆ. ಸಮಾಜವಾದಿ ಶಕ್ತಿಗಳ ಕ್ರೋಢೀಕರಣಕ್ಕೆ ತಾಳಿಕೆಯ ವೈಜ್ಞಾನಿಕ ಕ್ರಮಗಳತ್ತ ನಮ್ಮ ಪ್ರಯತ್ನಗಳನ್ನು ಕೇಂದ್ರೀಕರಿಸಬೇಕು ಎಂದೂ ಸಮಿತಿ ಹೇಳಿತು.

1987 ರಲ್ಲಿ ನಡೆದ ಸಿಪಿಎಸ್‌ಯು 27ನೇ ಮಹಾಧಿವೇಶನ ಮುಂದಿನ ಐದು ವರ್ಷಗಳಲ್ಲಿ ಏನು ನಡೆಯಲಿದೆ ಎಂಬ ಬಗ್ಗೆ ಯಾವುದೇ ಸುಳಿವು ನೀಡಿರಲಿಲ್ಲ, ಆದರೆ 1987 ರ ಅಕ್ಟೋಬರ್‌ನಲ್ಲಿ ಕ್ರಾಂತಿಯ 70ನೇ ವಾರ್ಷಿಕೋತ್ಸವ ಸಮಾರಂಭದಲ್ಲಿ ಮಾತನಾಡಿದ ಗೋರ್ಬಚೆವ್ [illegible] ಅವರು ಕೈಬಿಟ್ಟಿದ್ದರು. ನಂತರ, 1988 ರ ಜೂನ್-ಜುಲೈನಲ್ಲಿ ನಡೆದ ಸಿಪಿಎಸ್‌ಯು ಸಮ್ಮೇಳನದಲ್ಲಿ ಅವರು ಸಮಾಜವಾದದ ಅಗತ್ಯವಿಲ್ಲ ಎಂದೂ ಹೇಳಿದ್ದರು. ಸಮಾಜವಾದದ ಯಶಸ್ಸುಗಳನ್ನು ತಿರಸ್ಕರಿಸಲಾಯಿತು. ಇದು ಅಪಾಯಕಾರಿ ಪ್ರವೃತ್ತಿಯಾಗಿದ್ದು ಚೀನಾದಲ್ಲಿ ಕೂಡ ಅದು ಪ್ರತಿಫಲನಗೊಂಡಿತು.

1989 ರ ಮಧ್ಯಭಾಗದಲ್ಲಿ ಚೀನಾದಲ್ಲಿ ಕಂಡುಬಂದ ವಿದ್ಯಾರ್ಥಿ ಅಶಾಂತಿ ಬಗ್ಗೆ ಬಂಡವಾಳ ಶಾಹಿಗಳು ಅನೇಕ ಪ್ರಶ್ನೆಗಳನ್ನು ಎತ್ತಲಾರಂಭಿಸಿದರು. ಜುಲೈ 15-17 ರ ಕೇಂದ್ರ ಸಮಿತಿ ಸಭೆಯಲ್ಲಿ 'ಚೀನಾದಲ್ಲಿನ ಇತ್ತೀಚಿನ ವಿದ್ಯಮಾನಗಳು' ಶೀರ್ಷಿಕೆಯ ಒಂದು ನಿರ್ಣಯವನ್ನು ಅಂಗೀಕರಿಸಲಾಯಿತು. ಬಂಡವಾಳಶಾಹಿಯ ಉದಾರ ಪ್ರವೃತ್ತಿಗಳ ವಿರುದ್ಧ ಸತತ ಹೋರಾಟ ನಡೆಸುವುದು ಅಗತ್ಯ ಎಂದು ಅದು ಪ್ರತಿಪಾದಿಸಿತು. ವಿದ್ಯಾರ್ಥಿಗಳ 'ಪ್ರತಿಕ್ರಾಂತಿಕಾರಿ' ಅಶಾಂತಿಯ ನಂತರ ಆರಂಭವಾದ ಅಪಪ್ರಚಾರವನ್ನು ಚೀನಾ ಕಮ್ಯುನಿಸ್ಟ್ ಪಕ್ಷ ಪರಿಣಾಮಕಾರಿಯಾಗಿ ಎದುರಿಸಿತು.

1987 ನವೆಂಬರ್ 9 ರಂದು ಬರ್ಲಿನ್ ಗೋಡೆಯನ್ನು ಕೆಡವಿ ಹಾಕಲಾಯಿತು. ವಿಲೀನ ಅಗತ್ಯವಾಗಿದ್ದರೂ ಮಿತ್ರಪಕ್ಷಗಳು ಜರ್ಮನಿಯನ್ನು ಛಿದ್ರಗೊಳಿಸಲು ಯತ್ನಿಸಿದ್ದು ಹಾಗೂ ಹಾಗಾಗಲು ಸ್ಟಾಲಿನ್ ಬಿಡದಿದ್ದುದು ನನಗೆ ನೆನಪಿದೆ. ದೇಶದಲ್ಲಿ ಸಮಾಜವಾದದ ಪ್ರಸ್ತುತತೆಯನ್ನೇ ಮಾಸುವ ರೀತಿಯಲ್ಲಿ ಜರ್ಮನಿ ವಿಲೀನವನ್ನು ಸಾಧಿಸಲಾಯಿತು. ಸಿಪಿಎಸ್‌ಯುನ 26ನೇ ಮಹಾಧಿವೇಶನದ ನಂತರ ಸೋವಿಯತ್ ಒಕ್ಕೂಟದಲ್ಲಿ ಮಾರ್ಕ್ಸ್‌ವಾದ-ಲೆನಿನ್‌ವಾದ ಎನ್ನುವಂಥದ್ದು ಏನೂ ಉಳಿಯಲಿಲ್ಲ.

ಪೆರಿಸ್ಟ್ರೋಯ್ಕ ಕೇವಲ ಆರು ವರ್ಷಗಳಲ್ಲಿ ದೇಶದ ಸತ್ವವನ್ನೇ ನಾಶ ಮಾಡಿತು. ಜಗತ್ತಿನ ಮೇಲೆ ಸಾಮ್ರಾಜ್ಯಶಾಹಿಗಳ ಕೈ ಮೇಲಾಯಿತು.

ರುಮೇನಿಯಾ, ಪೋಲೆಂಡ್, ಜೆಕೊಸ್ಲೋವಿಕಿಯಾ, ಹಂಗೇರಿ ಮತ್ತು ಬಲ್ಗೇರಿಯಾದಲ್ಲಿ ಕೂಡ ಇದೇ ಪರಿಸ್ಥಿತಿ ಇತ್ತು. ಸಿಪಿಎಸ್‌ಯು ಮಹಾಧಿವೇಶನ ಸಮಾಜವಾದದ ಪತನ ಪ್ರಕ್ರಿಯೆಯನ್ನು ತೀವ್ರಗೊಳಿಸಿತು. ತಥಾಕಥಿತ 'ಮಾನವ ಮೌಲ್ಯಗಳು' ಮೇಲುಗೈ ಪಡೆದು ವರ್ಗ ಮೌಲ್ಯಗಳ ಸ್ಥಾನವನ್ನು ಅತಿಕ್ರಮಿಸಿತು. ಅಧಿವೇಶನದಲ್ಲಿ ಕೈಗೊಂಡ ನಿರ್ಣಯಗಳು ವರ್ಗ ಶತ್ರುಗಳ 'ಸೌಹಾರ್ದ' ಸಂಬಂಧಗಳನ್ನು ಪ್ರತಿಪಾದಿಸಿದವು. ಆ ಮೂಲಕ [illegible] ನಾಗರಿಕ ಜಗತ್ತು'ನ್ನು ಅಥವಾ ಕಾರ್ಮಿಕ ಮತ್ತು ಬಂಡವಾಳದ ನಡುವೆ ಯಾವುದೇ ಸಂಘರ್ಷ ಇರುವುದಿಲ್ಲ. ಸಮಾಜವಾದ ಮತ್ತು ಬಂಡವಾಳಶಾಹಿ ನಡುವೆ ದ್ವಂದ್ವಮಾನ ಇರದು! ಇದು ವಾಸ್ತವತೆಯಿಂದ ವಿಮುಖತೆಯಾಗಿದೆ. ಸಾಮ್ರಾಜ್ಯಶಾಹಿಗಳು ಸಹಜವಾಗಿಯೇ ಹಿರಿ ಹಿರಿ ಹಿಗ್ಗಿದರು.

29ನೇ ಮಹಾಧಿವೇಶನದ ಮುನ್ನ ಗೋರ್ಬಚೆವ್ ನೆಪ ಮಾತ್ರಕ್ಕೆ ಅಧ್ಯಕ್ಷರಾಗಿ ಮರಳಿದರು; ವಾಸ್ತವವಾಗಿ ಅಧಿಕಾರಗಳೆಲ್ಲವನ್ನು ಯಲ್ಸಿನ್‌ಗೆ ಹಸ್ತಾಂತರಿಸಲಾಗಿತ್ತು. ಒಂದು ವರ್ಷದೊಳಗೆ ಸೋವಿಯತ್ ಒಕ್ಕೂಟ ಇತಿಹಾಸದ ಭಾಗವಾಯಿತು. ಹಿಂದೆ ಬೆಂಬಲಕ್ಕಾಗಿ ಸೋವಿಯತ್ ಒಕ್ಕೂಟದತ್ತ ನೋಡುತ್ತಿದ್ದ ತೃತೀಯ ಜಗತ್ತಿನ ದೇಶಗಳ ಮೇಲೆ ಇದು ಭಾರಿ ಪರಿಣಾಮ ಬೀರಿತು.

1992 ಜನವರಿ 3 ರಿಂದ 9 ರವರೆಗೆ ನಡೆದ ಸಿಪಿಐ(ಎಂ) 14ನೇ ಮಹಾಧಿವೇಶನ 'ತಪ್ಪು ಅಂದಾಜುಗಳಿಂದ ತಪ್ಪು ನಿರ್ಧಾರಗಳು ಹೊರಬಿದ್ದವು' ಎಂದು ಹೇಳಿತು. "ಸೈದ್ಧಾಂತಿಕ ಪರಿಣಾಮ ಮತ್ತು ಬಂಡವಾಳಶಾಹಿ ಆಕ್ರಮಣದಿಂದ ಉಂಟಾದ ಈ ಪ್ರವೃತ್ತಿಗಳು ಕಮ್ಯುನಿಸ್ಟರನ್ನು ಗಲಿಬಿಲಿಗೊಳಿಸಿದವು' ಎಂದೂ ವಿಶ್ಲೇಷಿಸಿತು. ಕೆಲವು ಸಮಾಜವಾದಿ ದೇಶಗಳಲ್ಲಿನ ಆರ್ಥಿಕ ಸ್ಥಗಿತತೆ ಹಾಗೂ ಕೆಲವು ಬಂಡವಾಳಶಾಹಿ ದೇಶಗಳ ವಿಪುಲ ಬೆಳವಣಿಗೆಯಲ್ಲಿ ಅಡಕವಾಗಿರುವ ಅಪಾಯವನ್ನು ಮಹಾಧಿವೇಶನ ಸರಿಯಾಗಿಯೇ ಎತ್ತಿ ತೋರಿಸಿತು.

"ಇಂಥ ಪರಿಸ್ಥಿತಿಗಳಲ್ಲೇ ಬಲಪಂಥೀಯ ಪರಿಷ್ಕರಣವಾದ ಮೇಲುಗೈ ಪಡೆಯುತ್ತದೆ. ವರ್ಗ ಸಂಘರ್ಷ ಮತ್ತು ಕ್ರಾಂತಿಕಾರಿ ಚಳುವಳಿಗಳ ಮಾರ್ಕ್ಸ್‌ವಾದಿ ಸಿದ್ಧಾಂತ ಇಂತ ಆಮಿಷಗಳಿಂದ ದುರ್ಬಲಗೊಳ್ಳುತ್ತದೆ" ಎಂದೂ ಅದು ಹೇಳಿತು. ಅಂದಿನ ಪರಿಸ್ಥಿತಿ ಕುರಿತು ಇದಕ್ಕಿಂತ ಹೆಚ್ಚು ಸೂಕ್ತವಾದ ವಿಮರ್ಶೆ ಇರುವುದು ಸಾಧ್ಯವಿಲ್ಲ. ಇಂಥ ವಿಷಣ್ಣ ಸನ್ನಿವೇಶದಲ್ಲಿ ನಮ್ಮ ನೆರೆ ದೇಶ ನೇಪಾಳದಿಂದ ಉತ್ತಮ ಸುದ್ದಿ ಬಂತು. 1990 ರ ಫೆಬ್ರವರಿಯಲ್ಲಿ ನೇಪಾಳದ ಜನರು ದೊರೆ ಬೀರೇಂದ್ರರ ರಾಜಶಾಹಿ ವಿರುದ್ಧ ಸಿಡಿದೆದ್ದು ರಾಜಪ್ರಭುತ್ವವನ್ನು ಕೊನೆಗೊಳಿಸಿದರು. 104 ವರ್ಷಗಳ ರಾಜಪ್ರಭುತ್ವದ ನಂತರ ಈ ಬಂಡಾಯ ನಡೆಯಿತು. ರಾಜಮಹೇಂದ್ರದ ಆಡಳಿತ ಕಾಲದಿಂದ 30 ವರ್ಷಗಳಿಂದ ಕಮ್ಯುನಿಸ್ಟ್ ಪಕ್ಷ ಭೂಗತವಾಗಿತ್ತು. ಒಂಬತ್ತು ಬೇರೆ ಬೇರೆ ಕಮ್ಯುನಿಸ್ಟ್ ಸಂಘಟನೆಗಳು ಸಂಯುಕ್ತ-ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ - ಲೆನಿನ್ ವಾದಿ) ದ ಅಡಿ ಸಂಘಟಿತವಾಗಿದ್ದವು. ನೇಪಾಳ ಕಮ್ಯುನಿಸ್ಟ್ ಪಕ್ಷವು ಕೊಲ್ಕತ್ತಾದಲ್ಲಿ ಸ್ಥಾಪನೆಯಾಗಿತ್ತು. ಇಲ್ಲಿಂದಲೇ ನಾವು ಪಕ್ಷದೊಂದಿಗೆ ಸೌಹಾರ್ದ ಸಂಬಂಧಗಳನ್ನು ಇಟ್ಟುಕೊಂಡೆವು. ಪಕ್ಷ ರಚನೆಯಾದಂದಿನಿಂದಲೂ ಅದರ ಜತೆಗಿದ್ದ ಅನೇಕ ಹೋರಾಟಗಳ ಅಧ್ವರ್ಯು ಮನಮೋಹನ ಅಧಿಕಾರಿ ಕಮ್ಯುನಿಸ್ಟ್ ರಂಗದ ನೇತಾರರಾಗಿದ್ದರು.

ಕಮ್ಯುನಿಸ್ಟ್ ರಂಗದ ಜತೆ ಇನ್ನೂ ಇತರ 23 ರಾಜಕೀಯ ಪಕ್ಷಗಳಿದ್ದವು. ನೇಪಾಳದ ಜನತೆ ಪ್ರಜಾಪ್ರಭುತ್ವವನ್ನು ಬಯಸುತ್ತಿದ್ದರು ಎನ್ನುವುದಕ್ಕೆ ಇದು ಸಾಕ್ಷಿಯಾಗಿತ್ತು. 1991 ಮೇ 12 ರಂದು ಚುನಾವಣೆ ನಡೆಯಿತು. 110 ಸ್ಥಾನಗಳಿಸಿದ ನೇಪಾಳ ಕಾಂಗ್ರೆಸ್ ಪ್ರಥಮ ಸ್ಥಾನದಲ್ಲಿತ್ತು. ರಂಗ 69 ಸ್ಥಾನ ಗಳಿಸಿ ಎರಡನೇ ಸ್ಥಾನದಲ್ಲುಳಿಯಿತು. ಸಂಸತ್ತಿನ ಒಟ್ಟು ಸ್ಥಾನ 205. ರಾಜವಂಶಕ್ಕೆ ನಿಷ್ಠೆ ಹೊಂದಿದ್ದ ಪಕ್ಷ ಹೇಳಹೆಸರಿಲ್ಲದೆ ನಿರ್ನಾಮವಾಯಿತು. ಎಡ ಶಕ್ತಿಗಳ ಈ ಮಹತ್ವದ ವಿಜಯವನ್ನು ನಾವು 14ನೇ ಮಹಾಧಿವೇಶನದಲ್ಲಿ ಚರ್ಚಿಸಿದೆವು.

17ನೇರಾಜ್ಯ ಸಮ್ಮೇಳನ

1991 ಡಿಸೆಂಬರ್ 11 ರಿಂದ 15 ರವರೆಗೆ ಸಿಲಿಗುರಿಯಲ್ಲಿ ಪಕ್ಷದ 17ನೇ ರಾಜ್ಯ ಸಮ್ಮೇಳನ ನಡೆಯಿತು. ಸಮ್ಮೇಳನದ ಸ್ಥಳಕ್ಕೆ ಕಾಂ. ಸರೋಜ್ ಮುಖರ್ಜಿಯ ಹೆಸರಿಡಲಾಗಿತ್ತು. ಅಂತರ್‌ರಾಷ್ಟ್ರೀಯ ಪರಿಸ್ಥಿತಿ ಗಂಭೀರವಾಗಿತ್ತು. ಮೂರು ಬಾಲ್ಟಿಕ್ ರಾಷ್ಟ್ರಗಳು ಪ್ರತ್ಯೇಕ ದೇಶಗಳಾಗಿ ಹೊರಹೊಮ್ಮಿದ್ದವು. 11 ಇತರ ಗಣರಾಜ್ಯಗಳು ಸ್ವಾತಂತ್ರ್ಯವನ್ನು ಘೋಷಿಸಿಕೊಂಡವು. ನಮ್ಮ ರಾಜ್ಯ ಸಮ್ಮೇಳನ ಮುಕ್ತಾಯವಾದ ಸ್ವಲ್ಪವೇ ಸಮಯದಲ್ಲಿ ಸೋವಿಯತ್ ಒಕ್ಕೂಟ ಪೂರ್ಣವಾಗಿ ಛಿದ್ರಗೊಂಡಿತು. ಕಮ್ಯುನಿಸಂನ ಜನನವನ್ನು ಕಂಡ ನಾಡಿಗೇ ಈ ಗತಿ ಬಂದಿದ್ದನ್ನು ಕಂಡು ನನಗೆ ಅತೀವ ಖೇದವಾಯಿತು.

ನಾನು ಸೋವಿಯತ್ ಒಕ್ಕೂಟಕ್ಕೆ ಹೋಗಿದ್ದೆ. ಅಲ್ಲಿನ ವ್ಯವಸ್ಥೆ ಕೆಲಸ ಮಾಡುವ ರೀತಿಯನ್ನು ಕಂಡಿದ್ದೆ. ಅವೆಲ್ಲ ಇನ್ನು ಮುಂದೆ ಇರದು ಎನ್ನುವುದು ದೊಡ್ಡ ದುರಂತ. ಆದರೆ ಸೋವಿಯತ್ ಒಕ್ಕೂಟ ಛಿದ್ರವಾಗಿದ್ದು ವಾಸ್ತವ. ಅಲ್ಲಿನ ಜನರ ನಾನಾ ವಿಭಾಗಗಳಲ್ಲಿ ಅತೃಪ್ತಿ ಇದ್ದದ್ದು ಹಾಗೂ ಇದು ಜನಸಮುದಾಯವನ್ನು ಹೇಗೆ ಪ್ರತ್ಯೇಕಿಸಿತು ಎಂಬುದನ್ನು ನಮ್ಮ ರಾಜಕೀಯ-ಸಂಘಟನಾತ್ಮಕ ವರದಿಯಲ್ಲಿ ಗಮನಿಸಿದ್ದೆವು.

(ಮುಂದುವರಿಯುವುದು)

ಗಮನಿಸಿ

ಕಳೆದ ಸಂಚಿಕೆಯಲ್ಲಿ ತ್ರಿಶೂಲದೀಕ್ಷೆ ಲೇಖನದ ಲೇಖಕರು ನಿತ್ಯಾನಂದಸ್ವಾಮಿ.

ಕಂಪ್ಯೂಟರ್ ಕಲಿತಾಯ್ತು ಜೀವನಾಂಶ ಇಲ್ಲವಾಯ್ತು....

ಪಿ.ಸಾಯಿನಾಥ್

ಶಿಕ್ಷಣವೆಂದರೆ ಕಂಪ್ಯೂಟರ್ ಶಿಕ್ಷಣ. ಭವಿಷ್ಯ ಇರುವುದೇ ಮಾಹಿತಿ ತಂತ್ರಜ್ಞಾನ(ಲ್ಲಿ) ಎಂದು ಆಕಾಶಕ್ಕೇರಿದ್ದ ಸ್ಥಿತಿ ಈಗ ನೆಲಕಚ್ಚಿದೆ. ಇಲ್ಲಾದರೂ ಉದ್ಯೋಗ ಸಿಗಬಹುದೆಂಬ ಆಶೆಯಿಂದ ಇದ್ದಬದ್ದ ಆಸ್ತಿಯನ್ನು ಮಾರಿ ಕಂಪ್ಯೂಟರ್ ಶಿಕ್ಷಣಕ್ಕೆ ಪಡೆದು ಉನ್ನತ ಶಿಕ್ಷಣಕ್ಕೆ ಹೋಗಲಾಗದೇ ನರಳಿದವರು ಅನೇಕರು. ಪದವಿ ಪಡೆದರೂ ಮಾಹಿತಿ ತಂತ್ರಜ್ಞಾನದ ಸ್ಪರ್ಧಾ ಓಟದಲ್ಲಿ ಡ್ರಾಪ್‌ಔಟ್ ಆಗಿ ಬದುಕಲು ನೆಲೆ ಇಲ್ಲದೇ ತಹತಹಿಸುತ್ತಿರುವವರು ಸಾವಿರಾರು. ಅಂತಹ ವಾಸ್ತವ ಸ್ಥಿತಿಯ ಅಧ್ಯಯನದ ನೈಜ ಚಿತ್ರದ ಇಲ್ಲಿನ ಲೇಖನದಲ್ಲಿ

ಡಿಸೆಂಬರ್ ತಿಂಗಳ ಮೊದಲ ವಾರದಲ್ಲಿ ಬೆಂಗಳೂರು ಜಿಲ್ಲೆಯ ವರ್ತೂರು ಕ್ಷೇತ್ರ ವ್ಯಾಪ್ತಿಯಲ್ಲಿ ಪಕ್ಷದ ಜಿಲ್ಲಾ ಸಮ್ಮೇಳನದ ಅಂಗವಾಗಿ, ರಾಜಕೀಯ ಪ್ರಚಾರ ಜಾಥಾ ನಡೆಯಿತು. ವರ್ತೂರು ಕ್ಷೇತ್ರದ ಹಳ್ಳಿಗಳಿಗೆ ಜಾಥಾ ಹೋಗಿದ್ದಾಗ, ಅದರಲ್ಲಿ ಭಾಗವಹಿಸಿ, ಬೀದಿ ಬದಿಯ ಸಭೆಗಳಲ್ಲಿ ಭಾಷಣ ಮಾಡಿದ, ನನ್ನ ಮಾತುಗಳನ್ನು ನಮ್ಮ ಟೆಂಪೋ ಬಳಿ ಬಂದು, ಆಲಿಸಿದವರಲ್ಲಿ ಬಹು ಮಂದಿ, ಮೂಲ ಬೆಂಗಳೂರಿನವರಲ್ಲ. ಬದಲಿಗೆ ಉತ್ತರ ಕರ್ನಾಟಕದ ಬಿಳಿ ಟೋಪಿ, ಬಿಳಿ ಜುಬ್ಬ, ಕಚ್ಚೆ ಪಂಚೆ ತೊಟ್ಟಿದ್ದ, ಜನ ವಿಚಾರಿಸಿದಾಗ ಅಲ್ಲಿ ಮಳೆ ಇರಲಿಲ್ಲ, ಬೆಳೆ ಆಗಲಿಲ್ಲ, ಆದ ಬೆಳೆ-ಬಂದ ಬೆಳೆಗೆ ಬೆಲೆಯಿಲ್ಲ, ಕೂಲಿ ಕೆಲಸವು ಇಲ್ಲ... ಆಗಾಗಿ ಬೆಂಗಳೂರಿಗೆ ಬಂದೀವ, ಇಲ್ಲೆ ರಸ್ತೆ ಮಾಡೋದು, ಮನೆ ಕಟ್ಟೊ ಕೆಲಸ ಮಾಡ್ತೀವಿ, ಹೆಂಗೋ ಬದುಕೀವಿ. ನೀವು ಮಾತ್ರ ಚೆಂದಾ ಮಾಡಿ ಮಾತಾಡಿದ್ರಿ... ನಮ್ಮ ಕಷ್ಟಾನಾ ನೀವು ಒದರಿಂದ್ರಿ ಎನ್ನುತ್ತಿದ್ದರು.

ಇತ್ತೀಚೆಗೆ 'ಹಿಂದೂ' ಪತ್ರಿಕೆಯ ಸಾಪ್ತಾಹಿಕ ಪುರವಣಿಯಲ್ಲಿ ಪಿ.ಸಾಯಿನಾಥ್ ಬರೆದ ಲೇಖನ ಓದುವಾಗ, ವರ್ತೂರು ಕ್ಷೇತ್ರದ ಹಳ್ಳಿಗಳಲ್ಲಿ ನನ್ನ ಭಾಷಣ ಕೇಳಿದ ಜನ ಅವರ ಮಾತು ನೆನಪಾದವು. ದೇಶ ಎದುರಿಸುತ್ತಿರುವ ಕೃಷಿ ವಲಯದಲ್ಲಿನ ಸಮಸ್ಯೆ, ಅವರ ಮೇಲೆ ಅವಲಂಬಿತ ಜನರ ಬದುಕನ್ನು ಏರುಪೇರು ಮಾಡುತ್ತದೆ.. ಆಂಧ್ರದ ಅನಂತಪುರ ಜಿಲ್ಲೆಯಲ್ಲಿ, ಮೊದಲ ದರ್ಜೆಯಲ್ಲಿ ಪದವಿ ಪಡೆದು ಯುವಕನೊಬ್ಬ ಹೋಟೆಲ್‌ನಲ್ಲಿ ಸಪ್ಲೆಯರ್ ಆಗಿದ್ದಾನೆ, ಏಕೆಂದರೆ ಆಂಧ್ರದ ಕೃಷಿಯಲ್ಲಿನ ಬಿಕ್ಕಟ್ಟು ಅಲ್ಲಿನ ಶಿಕ್ಷಣದ ಮೇಲೆ ಪರಿಣಾಮ ಬೀರುತ್ತಿದೆ. ಪ್ರತಿಭಾವಂತ ವಿದ್ಯಾರ್ಥಿಗಳು ಶಿಕ್ಷಣವನ್ನು ತ್ಯಜಿಸುತ್ತಿದ್ದಾರೆ ಎನ್ನುತ್ತಾ ತಮ್ಮ ಅಧ್ಯಯನ ವರದಿಯನ್ನು ಸಾಯಿನಾಥ್ ಆ ಲೇಖನದಲ್ಲಿ ನೀಡಿದ್ದಾರೆ.

ರೂಪಾಂತರ
ಕೆ.ಎನ್.ಉಮೇಶ್

ವರ್ತೂರು ಕ್ಷೇತ್ರದ ಹಳ್ಳಿಗಳಲ್ಲಿ ಸಿಕ್ಕಿದ್ದ, ಆ ರೈತರ ಜೊತೆಯಲ್ಲಿಯ ಅವರ ಹೆಂಗಸರು-ಮಕ್ಕಳೆಲ್ಲಾ, ಅಲ್ಲಿಂದ ಇತ್ತ ಗುಳೆ ಬಂದಿದ್ದಾರೆ. ಮಕ್ಕಳ ಶಾಲೆ ಎಂದರೆ, ರೊಟ್ಟಿಗೆ ಕಷ್ಟ-ಶಾಲೆ ಕೇಳಿತೀರಲ್ಲಾ? ಎಂದಿದ್ರು ಅವರು. ಉತ್ತರ ಕರ್ನಾಟಕದ ಬಿಜಾಪುರ, ಗುಲ್ಬರ್ಗಾ, ಬಳ್ಳಾರಿ, ರಾಯಚೂರು, ಕಡೆಗಳಿಂದ ಮಲೆನಾಡು ಪ್ರದೇಶಗಳಿಗೆ... ಶಿವಮೊಗ್ಗ, ಚಿಕ್ಕಮಗಳೂರು ಅಂತಯೆ ಮಂಗಳೂರು ಕಡೆಗೆ... ಕೆಲವು ಸಮಯಗಳಲ್ಲಿ ರಾತ್ರಿ ಕೆಂಪು ಬಸ್ ಅತ್ತಿದ್ದರೆ, ಬಸ್ಸು ತುಂಬಾ ಸಂಸಾರ ಸಮೇತ, ಪಾತ್ರೆ-ಬಟ್ಟೆ, ಸ್ವಲ್ಪ ಜೋಳ ಹೊತ್ತ ಮಂದಿ, ಕೆಲಸಕ್ಕೆ ಕಂಟ್ರಾಕ್ಟರ್ ಮೂಲಕ ಹೋಗುತ್ತಿದ್ದ ದೃಶ್ಯ ನೋಡಿದ ನೆನಪು ಮರುಕಳಿಸುತ್ತದೆ. ಅವರೊಟ್ಟಿಗೆ ಕೂಡ ಶಾಲೆಗೆ ಹೋಗುವ ಮಕ್ಕಳು ಓದು ಅಷ್ಟೆ! ಸೀಸನ್ ಮುಗಿದಾಗ ಮತ್ತೆ ಹಿಂತಿರುಗಿ ಬರುವುದು. ಇತ್ತೀಚಿನ ದಿನಗಳಲ್ಲಿ ಇದು ಮತ್ತಷ್ಟು ಹೆಚ್ಚಿದೆ.

ಹಿಂದೆ ಜನಾನುರಾಗಿ, ಜನಪ್ರಿಯ, ಬಡವರ ಬಂಧು, ದೀನರ ಬಂಧು ಎಂಬ ಬಿರುದಿನೊಂದಿಗೆ, ಮುಖ್ಯಮಂತ್ರಿಗಳ ಹೆಸರುಗಳು ಪತ್ರಿಕೆಗಳಲ್ಲಿ ಬರುತ್ತಿದ್ದವು. ಜನರೂ ಸಹಾ ಹಾಗೆ [illegible] ಬದಲಾಗಿದೆ, ಈಗ I.T ಮುಖ್ಯಮಂತ್ರಿ, I.T. ಕೃಷ್ಣ ಎಂಬ ವ್ಯಾಖ್ಯಾನ ಅದೇ ಸಾಧನೆ ಎಂದು ಬೀಗುವ ಪರ ಆರಂಭವಾಗಿದೆ. ಈ I.T, ಕಂಪ್ಯೂಟರ್ ಹುಚ್ಚು ಎಲ್ಲರನ್ನು ಸನ್ನಿ ರೀತಿ ಹಿಡಿಯಲಾರಂಭಿಸಿದೆ. I.T ಇಂಜನಿಯರಿಂಗ್ ಕೋರ್ಸ್‌ನ ಕಾಲೇಜುಗಳು, ಕಂಪ್ಯೂಟರ್ ವಿಜ್ಞಾನ, ಮಾಹಿತಿ ತಂತ್ರಜ್ಞಾನದ ಪದವಿ ಕೋರ್ಸ್‌ಗಳ ಕಾಲೇಜುಗಳಿಗೆ ನಾಯಿಕೊಡೆಗಳಂತೆ, ಅನುಮತಿ ನೀಡಿದೆ. ಸಾವಿರಾರು - ಲಕ್ಷಾಂತರ ರೂಪಾಯಿಗಳ ದೇಣಿಗೆ-ಶುಲ್ಕದೊಂದಿಗೆ ಈ ಶಿಕ್ಷಣದ ಔತಣ [illegible] ಬಡಿಸಲು ಕಾಲೇಜುಗಳು ತುದಿಗಾಲಲ್ಲಿ ನಿಂತಿವೆ.

ಆದರೆ, ಇಡೀ ರಾಷ್ಟ್ರದ ಬೆನ್ನೆಲುಬಾಗಿರುವ ಕೃಷಿಯಬಿಕ್ಕಟ್ಟು ಎಂತಹ ಪರಿಸ್ಥಿತಿಯನ್ನು ಆಂಧ್ರದ ಅನಂತಪುರ ಹಾಗು ಮೆಹಬೂಬ್ ನಗರದಲ್ಲಿ ಸೃಷ್ಟಿಸಿದೆ ಎಂಬುದಕ್ಕೆ ಕೆಲವು ಹಳ್ಳಿಗಳಲ್ಲಿನ ವಿದ್ಯಾಭ್ಯಾಸದ ಕನವರಿಕೆ ಯಲ್ಲಿ... ಕೊರಗಿರುವ ಯುವಕ-ಯುವತಿಯರ ಕಥೆ ಕೇಳಬೇಕಿದೆ... ಕರ್ನಾಟಕದ ಅನೇಕ ಜಿಲ್ಲೆಗಳ ಪರಿಸ್ಥಿತಿ ಅದಕ್ಕಿಂತ ಏನಾದರೂ ಭಿನ್ನವೇ ಎಂದು ಚಿಂತಿಸಬೇಕಿದೆ.

ಸಾಯಿನಾಥರ ಅಧ್ಯಯನ ಹೇಳುವುದು...

ಅನಂತಪುರ ಜಿಲ್ಲೆಯ ಸಿ.ಕೆ.ಪಳ್ಳಿ ಮಂಡಲದ ಬೀದಿ ಬದಿಯ ಡಾಬಾದಲ್ಲಿ, ಸಿ.ರವೀಂದ್ರ ರೆಡ್ಡಿ, ಸಪ್ಲಯರಾಗಿ ಹಾಗು ಅದೆ ದಾಬಾದಲ್ಲಿರುವ ಒಂದು ಅಂಗಡಿ ನಡೆಸಲು ಸಹಾಯಕನಾಗಿದ್ದಾನೆ. ಈ ರೆಡ್ಡಿ ಬಿ.ಎಸ್ಸಿ (ಕಂಪ್ಯೂಟರ್ ವಿಜ್ಞಾನ)ದಲ್ಲಿ ಪ್ರಥಮ ದರ್ಜೆಯಲ್ಲಿ ತೇರ್ಗಡೆಯಾಗಿರುವ ಯುವಕ. ಕುಟುಂಬದಲ್ಲಿ P.V.K.K. ಪದವಿ ಕಾಲೇಜಿನಲ್ಲಿ, ಪದವಿ ಪಡೆದ ಈತ, ಇಡೀ ಕುಟುಂಬದಲ್ಲಿ 10ನೇ ತರಗತಿ ಮೆಲ್ಪಟ್ಟ ಶಿಕ್ಷಣ ಪಡೆದಿರುವ ಕುಟುಂಬವೆಲ್ಲಾ ಸೇರಿ 25,000 ರೂಪಾಯಿ ತೆತ್ತಿ,

ರವೀಂದ್ರನ ಜೊತೆಯಲ್ಲಿ BSc ಮಾಡಿದ 26 ಮಂದಿಯಲ್ಲಿ ಪಾಸಾದದ್ದು, 6 ಮಂದಿ ಮಾತ್ರ, ಅವರಲ್ಲಿ ರವೀಂದ್ರನದು ಹೆಚ್ಚು ಅಂಕ, ಅವನನ್ನು ಸೇರಿಸಿ ಮೊದಲ ದರ್ಜೆ ಪಡೆದವರು ಇಬ್ಬರು ಮಾತ್ರ. ಇವರಿಗಿಂತ ಕಡಿಮೆ ಅಂಕ ಪಡೆದ ಇತರೆ, ಮೂವರು ಹೊಸೂರಿನಲ್ಲಿ ರೂ.1 ಲಕ್ಷ ದೇಣಿಗೆ ನೀಡಿ MSC ಮಾಡುತ್ತಿದ್ದಾರೆ. ಇವರ ಕೈಯಲ್ಲಿ ಶಿಕ್ಷಣ ಕೊಂಡುಕೊಳ್ಳುವ ಶಕ್ತಿ ಇಲ್ಲ, ಹಾಗಾಗಿ ದಾಬಾದಲ್ಲಿ ಇದ್ದೇನೆ ಎನ್ನುತ್ತಾನೆ ರವೀಂದ್ರ. 90'ರ ನಂತರ ಕೃಷಿಗೆ ನೀಡುತ್ತಿರುವ ಸಾಲ ನಿಂತಿವೆ.

ಬರಗಾಲ ಬೇರೆ, ಏನಾದರೂ ಮಾಡೋಣ ಎಂದು ಬಡ್ಡಿಗೆ ರೂ.45 ಸಾವಿರ ಸಾಲ ಪಡೆದು 3 ಬೋರ್‌ವೆಲ್ ಕೊರೆಸಿದವು, ಯಾವುದರಲ್ಲೂ ನೀರು ಬರಲಿಲ್ಲ, ದಾಬಾವು ಸರಿಯಾಗಿ ನಡೆಯುತ್ತಿಲ್ಲಾ, ಮಾಡಿದ ಸಾಲದ ಬಡ್ಡಿ ಏರುತ್ತಿದೆ.



ಹೋಟೆಲ್‌ನಲ್ಲಿ ಸಪ್ಲೆಯರ್ ಆಗಿ ಕಂಪ್ಯೂಟರ್ ಪದವೀಧರ!

ಪದವಿಗೆ ದಾಖಲಿಸಿದರು. 3 ವರ್ಷ ಅನಂತಪುರದಲ್ಲಿ ಇದ್ದು ವ್ಯಾಸಾಂಗ ಮಾಡಲು ಧನ ಸಹಾಯ ಮಾಡಿದರು. ಕೃಷಿ ಇತ್ತೀಚೆಗೆ ಕೈ ಹತ್ತುತ್ತಿಲ್ಲ. ಹಾಗಾಗಿ ದಾಬಾ ಪ್ರಾರಂಭಿಸಿದ್ದಾರೆ. ರವೀಂದ್ರನಿಗೆ ಇನ್ನು ಹೆಚ್ಚು ಸ್ನಾತಕೋತ್ತರ ಪದವಿ (MCA) ಓದಬೇಕೆಂಬ ಕಾಲೇಜಿಗೆ ಸೇರಲು ಯತ್ನಿಸಿದಾಗ, ಅವರು ಕೇಳಿದ್ದು ರೂ.1.2 ಲಕ್ಷ ದೇಣಿಗೆ, ಹಾಗು ವಾರ್ಷಿಕ ರೂ.50,000 ಶುಲ್ಕ, ಕೊಡಲು ಹಣವಿಲ್ಲದೆ ಸೇರಲಾಗಲಿಲ್ಲ. ಅನಂತಪುರದಲ್ಲಿ MCA ಕೋಚಿಂಗ್ ಕೋರ್ಸ್ ಸೇರೋಣವೆಂದರೆ, 6 ತಿಂಗಳ ಕೋರ್ಸ್‌ಗೆ ಅವರು ಕೇಳಿದ್ದು, ರೂ.25,000 ಒಂದೆಡೆ ಕೃಷಿ ಆಗುತ್ತಿಲ್ಲ. ದಾಬಾವು ನಷ್ಟದಲ್ಲಿದೆ, ಬದುಕುವುದೇ ಕಷ್ಟ. ಮಾಡಿರುವ ಸಾಲವೇ ತೀರಿಲ್ಲ, ತೀರಿಸಲಾಗದೆ, ಜಮೀನು-ದಾಬಾವನ್ನೆ ಮಾರಬೇಕಾಗಿ ಬರಬಹುದು.. ಅಂತಹದರಲ್ಲಿ MCAಗೆ ಹಣ ಎಲ್ಲಿಂದ ತರುವುದು? ಎಂಬ ಪ್ರಶ್ನೆ ರವೀಂದ್ರ ಹಾಗು ಮನೆಯವರದು.

ನಮ್ಮ ಮಗನೇನೋ ತುಂಬಾ ಬುದ್ಧಿವಂತ, ಕುಟುಂಬದಲ್ಲಿ ಇವನಷ್ಟು ಓದಿರೋರು ಯಾರೂ ಇಲ್ಲ! ಆದರೆ ಏನು ಮಾಡೋದು ದುಡ್ಡಿಲ್ಲ. ಇದಕ್ಕೆ ಇಷ್ಟು ಓದಿಸಿ, ಕೆಲಸನೂ ಸಿಗಲಿಲ್ಲ... ದಾಬಾದಲ್ಲಿ ಅವನೆ ಕೆಲಸ ಮಾಡೋದರಿಂದ ಕೆಲಸಗಾರನಿಗೆ ಕೂಲಿ ತಪ್ಪಿದೆ ಅಷ್ಟೆ ಎನ್ನುತ್ತಾರೆ, ಅವರ ಚಿಕ್ಕಪ್ಪ.

ಕೃಷಿಯಲ್ಲಿನ ಬಿಕ್ಕಟ್ಟು ಇಡೀ ಶಿಕ್ಷಣಕ್ಕೆ ಒಂದೆಡೆ ಮಾರಕವಾಗಿದೆ. ಕೃಷಿಯ ಬಿಕ್ಕಟ್ಟಿಗೆ - ಶಿಕ್ಷಣದ ವ್ಯಾಪಾರಕ್ಕೆ ಬಲಿಯಾದವರನೇಕರಲ್ಲಿ ರವೀಂದ್ರ ಒಂದೇ ಒಂದು ಉತ್ತಮ ಉದಾಹರಣೆ ದಿವಾಳಿಯಾಗುತ್ತಿರುವ ರೈತರು, ತಮ್ಮ ಮಕ್ಕಳ ಶಾಲೆ ಬಿಡಿಸಿ ದುಡಿಮೆಗೆ ಹಚ್ಚಿದ್ದಾರೆ. ಕೂಲಿಕಾರರಂತೂ, ತಮ್ಮ ಬದುಕಿನ ಪಯಣ-ಚೂರು ಗಂಜಿಗಾಗಿ ಊರೂ-ಊರೂ ಅಲೆಯುವ ಬದುಕಿಗೆ ಶಾಲೆ ಬಿಡಿಸಿ ತಮ್ಮ ಮಕ್ಕಳನ್ನು ಜೊತೆಗೆ ಸೇರಿಸಿ ಕೊಂಡಿದ್ದಾರೆ. ಸಾಮಾನ್ಯವಾಗಿ ಶಾಲೆ ತ್ಯಜಿಸುವ ಮಕ್ಕಳ ವಾರ್ಷಿಕ ಸಂಖ್ಯೆಯನ್ನು ಇದು

ಪುಟ 7 ಕ್ಕೆ

ಎಡಪಂಥೀಯರನ್ನು ಟೀಕಿಸುವುದರಿಂದ ಜ್ಯೋತಿಷ್ಯ ವಿಜ್ಞಾನವಾಗುವುದಿಲ್ಲ

ವೈಜ್ಞಾನಿಕ ಮನೋಭಾವವನ್ನು ಬೆಳೆಸುವುದು ಪ್ರತಿಯೊಬ್ಬ ನಾಗರಿಕನ ಕರ್ತವ್ಯವೆಂದು ಭಾರತದ ಸಂವಿಧಾನವೇ ನಿರ್ದೇಶನ ನೀಡಿರುವಾಗ ಜ್ಯೋತಿಷ್ಯದಂತಹ ಅವೈಜ್ಞಾನಿಕ ವಿಷಯವನ್ನು ಕೆಲವು ಸ್ಥಾಪಿತ ಹಿತಾಸಕ್ತಿಗಳು ದೇಶದ ಮೇಲೆ ವಿಜ್ಞಾನದ ಹೆಸರಿನಲ್ಲಿ ಹೇರಲು ಪ್ರಯತ್ನಿಸುತ್ತಿರುವುದು ಖಂಡನೀಯ. ಎಡಪಂಥೀಯರು ಜ್ಯೋತಿಷ್ಯವನ್ನು ವಿಜ್ಞಾನವೆಂದು ಒಪ್ಪಲು ಸಿದ್ಧರಿಲ್ಲವೆಂಬ ಕಾರಣಕ್ಕಾಗಿ ಹಾರ್ನಳ್ಳಿ ರಾಮಸ್ವಾಮಿಯವರಂತಹ ವ್ಯಕ್ತಿಗಳು ಎಡಪಂಥೀಯರ ಮೇಲೆ ವಿಷಪೂರಿತ ದಾಳಿ ನಡೆಸಿರುವುದು ಅವರ ಅಜ್ಞಾನವನ್ನು ತೋರಿಸುತ್ತದೆ. ಯಾವುದೇ ಒಂದು ವಿಷಯವನ್ನು ವಿಜ್ಞಾನವೆಂದು ವಿಶ್ವವಿದ್ಯಾಲಯದಲ್ಲಿ ಕಲಿಸಬೇಕಾದರೆ ಅದು ವಿಜ್ಞಾನದ ಒರೆಗಲ್ಲಿಗೆ ಹಚ್ಚಲ್ಪಟ್ಟು ನಿಸ್ಸಂದೇಹವಾಗಿ ತೇರ್ಗಡೆ ಆಗಬೇಕು. ಅದನ್ನು ಸಮರ್ಥಿಸಲು ಸಾಧ್ಯವಾಗದ ಹಾರ್ನಳ್ಳಿಯವರು ಎಡ ಬುದ್ಧಿಜೀವಿಗಳು 1942 ರಲ್ಲಿ ದೇಶದ ವಿರುದ್ಧವೇ ಕಾರ್ಯವೆಸಗಿದರು ಎಂಬ ಶುದ್ಧ ಸುಳ್ಳನ್ನು ಹೇಳಿಕೊಂಡು ಚರಿತ್ರೆಯ ಕುರಿತು ತಮ್ಮ ಅಜ್ಞಾನವನ್ನು ಪ್ರದರ್ಶಿಸಿದ್ದಾರೆ. ಉಡುಪಿಯಲ್ಲಿ ಜರುಗಿದ ಜ್ಯೋತಿಷ್ಯ ಸಮ್ಮೇಳನದ ವೇದಿಕೆಯನ್ನು ಕಮ್ಯುನಿಸ್ಟ್ ವಿರೋಧಿ ಪ್ರಚಾರಕ್ಕಾಗಿ ಬಳಸಿ ಕೊಂಡಿರುವುದು ಶ್ರೀಮಾನ್ ಹಾರ್ನಳ್ಳಿಯವರಂತಹ ಹಿರಿಯ ಕಾಂಗ್ರೆಸ್ ನಾಯಕರ ವ್ಯಕ್ತಿತ್ವಕ್ಕೆ ಶೋಭಿಸುವಂತಹದ್ದಲ್ಲ.

ಭಾರತದ ಸ್ವಾತಂತ್ರ್ಯ ಚಳುವಳಿಯಲ್ಲಿ ಈ ದೇಶದ ಕಮ್ಯುನಿಸ್ಟರು ಮಾಡಿದ ತ್ಯಾಗ ಬಲಿದಾನಗಳು ಅಪಾರ. ಭಾರತದ ರಾಷ್ಟ್ರೀಯ ಚಳುವಳಿಯು ಪೂರ್ಣ ಸ್ವಾತಂತ್ರ್ಯ [illegible] ಹೋರಾಟ ಮಾಡುವಂತೆ ನಿರಂತರವಾಗಿ ಕಮ್ಯುನಿಸ್ಟರು ಒತ್ತಡ ಹೇರಿದ ಪರಿಣಾಮವಾಗಿಯೇ ಆತನಕ ಡೋಮಿನಿಯನ್ ಸ್ಥಾನಮಾನಕ್ಕೆ ಮಾತ್ರ ಒತ್ತಾಯಿಸುತ್ತಿದ್ದ ಭಾರತ ರಾಷ್ಟ್ರೀಯ ಕಾಂಗ್ರೆಸ್ ಪೂರ್ಣ ಸ್ವಾತಂತ್ರ್ಯದ ನಿರ್ಣಯವನ್ನು ಅಂಗೀಕರಿಸುವಂತಾ ಯಿತು. ಸ್ವಾತಂತ್ರ್ಯ ಹೋರಾಟದಲ್ಲಿ ತಮ್ಮ ಜೀವನದ ಬಹುಭಾಗವನ್ನು ಕಾರಾಗೃಹದಲ್ಲಿ ಕಳೆದ ಅಸಂಖ್ಯ ಕಮ್ಯುನಿಸ್ಟ್ ಮುಂದಾಳುಗಳು ಈ ದೇಶದ ಸ್ವಾತಂತ್ರ್ಯ ಚಳುವಳಿಗೆ ಸ್ಫೂರ್ತಿ ನೀಡಿದ್ದಾರೆ.

ಚರಿತ್ರೆಯನ್ನು ತಿದ್ದಲು ಬಯಸುವ ಸಂಘ ಪರಿವಾರದ ಪ್ರಯತ್ನಗಳಿಗೆ ಬೆಂಬಲ ನೀಡುತ್ತಿರುವ ರಾಮಸ್ವಾಮಿಯವರ ಪ್ರಯತ್ನ ಹಾಸ್ಯಾಸ್ಪದ. ಚರಿತ್ರೆಯ ಕೋಮುವಾದೀಕರಣ ಮತ್ತು ಕೇಸರೀಕರಣಗಳು ಮುಂದಿನ ಪೀಳಿಗೆಗೆ ಘೋರ ಅನ್ಯಾಯವನ್ನು ಮಾಡಿ ದಂತಾಗುತ್ತದೆ. ಇಂತಹ ಪ್ರಯತ್ನಗಳನ್ನು ತಕ್ಷಣ ಕೈ ಬಿಡಬೇಕು.

ಕೆ.ಆರ್.ಶ್ರೀಯಾನ್
[illegible]

ಅಕ್ಕಿ ಆಲೂರ

ಹಲವು ಇಲ್ಲಗಳ ಸರ್ಕಾರಿ ಐಟಿಐನಲ್ಲಿ ಬೇಕುಗಳಿಗಾಗಿ ವಿದ್ಯಾರ್ಥಿಗಳ ಮುಷ್ಕರ

ಈ ತಾಂತ್ರಿಕ ಕಾಲೇಜಿನಲ್ಲಿ 'ಇಲ್ಲ'ಗಳ ಪಟ್ಟಿ ಮಾಡುತ್ತಾ ಹೋದರೆ ಕೊನೆಗೆ ಕಾಲೇಜೇ ಎಲ್ಲಿ ಎಂದು ಕೇಳಬೇಕಾಗಿ ಬರುತ್ತದೆ. ಇಂತಹ ಅವ್ಯವಸ್ಥೆ, ಅರಾಜಕತೆ ವಿರುದ್ಧ ವಿದ್ಯಾರ್ಥಿಗಳು ನಡೆಸಿದ ಚಳುವಳಿ ವೃತ್ತಾಂತ ಇಲ್ಲಿದೆ. ಪಟ್ಟು ಬಿಡದ ಹೋರಾಟದಿಂದ ಸಾಧಿಸಿದ ಗೆಲುವಿನ ವಿವರಗಳು

ಕನಿಷ್ಠ ಮೂಲಭೂತ ಸೌಲಭ್ಯಗಳು ಇಲ್ಲದ್ದನ್ನು ಖಂಡಿಸಿ, ಉಪನ್ಯಾಸಕರ ನಿಯೋಜನೆ ರದ್ದುಗೊಳಿಸಲು ಒತ್ತಾಯಿಸಿ, ಆಡಳಿತ ವೈಫಲ್ಯ ವಿರೋಧಿಸಿ ಭಾರತ ವಿದ್ಯಾರ್ಥಿ ಫೆಡರೇಷನ್(ಎಸ್‌ಎಫ್‌ಐ) ಹಾನಗಲ್ ತಾಲೂಕು ಸಮಿತಿ ನೇತೃತ್ವದಲ್ಲಿ ಅಕ್ಕಿ ಆಲೂರು ನಗರದ ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಯ ವಿದ್ಯಾರ್ಥಿಗಳು ಡಿಸೆಂಬರ್ 20 ರಿಂದ 27 ರ ವರೆಗೆ ಐತಿಹಾಸಿಕ ಅನಿರ್ದಿಷ್ಟ ಧರಣಿ ಸತ್ಯಾಗ್ರಹ ನಡೆಸಿದರು. ಈ ಅನಿರ್ದಿಷ್ಟ ಧರಣಿ ಸತ್ಯಾಗ್ರಹದಲ್ಲಿ ಸಂಪೂರ್ಣ ಬೇಡಿಕೆ ಈಡೇರಿಸಿಕೊಳ್ಳುವ ಮೂಲಕ ತಾಲೂಕಿನ ಜನತೆಯ ಗಮನ, ಕಣ್ಣುಗಳು ಆ ಹೋರಾಟದತ್ತ ಮಾಧ್ಯಮಗಳಿಗೆ ಸುದ್ದಿ ಸುಗ್ಗಿಯಾದರೆ ಆಡಳಿತ ಪಕ್ಷದವರಿಗೆ ನಿದ್ದೆಗೆಡಿಸಿದ ಹೋರಾಟ ಇದು.

1997 ರಲ್ಲಿ ಆರಂಭಗೊಂಡ ಸರ್ಕಾರಿ ಐಟಿಐ ಎರಡು ಟ್ರೇಡ್(ಫಿಟರ್, ಎಲೆಕ್ಟ್ರಿಷಿಯನ್) ಗಳನ್ನು ಹೊಂದಿದ್ದು, 80 ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿದ್ದಾರೆ. ವಿಶೇಷವೆಂದರೆ ಅಲ್ಲಿಯ ಎರಡು ವರ್ಷದ ಫಲಿತಾಂಶ ರಾಜ್ಯಕ್ಕೆ ಪ್ರಥಮವಾಗಿದ್ದು ನೂರಕ್ಕು ನೂರು ಫಲಿತಾಂಶ ಬಂದಿದೆ. 19 ಸಿಬ್ಬಂದಿ ಹೊಂದಬೇಕಾದ ಐಟಿಐ ಹಾಲಿ ಬೋಧಕರ ಕೊರತೆ ಅನುಭವಿಸುತ್ತಿರುವಾಗಲೂ ಇಂಜನಿಯರಿಂಗ್ ಡ್ರಾಯಿಂಗ್ ಉಪನ್ಯಾಸಕರನ್ನು ಬೇರೆ ಜಿಲ್ಲೆಗೆ



ನಿಯೋಜನೆಗೊಳಿಸಿದ್ದು ವಿದ್ಯಾರ್ಥಿಗಳ ತೀವ್ರ ಆಕ್ರೋಶ, ಪ್ರತಿಭಟನೆಗೆ ಕಾರಣವಾಯಿತು. ಹಾಲಿ ಪ್ರಾಚಾರ್ಯರು ಎರಡು ಸರ್ಕಾರಿ ಐಟಿಐ ಕಾಲೇಜುಗಳ ಉಸ್ತುವಾರಿ ಹೊತ್ತಿದ್ದಾರೆ. ಮೂಲಭೂತ ಸೌಲಭ್ಯಗಳಾದ ಮುಖ್ಯವಾಗಿ ಕುಡಿಯುವ ನೀರು, ಆಟದ ಸಾಮಗ್ರಿ, ಸ್ಟಾಂಡ್ ಕಟ್ಟಡ ವಿಶ್ರಾಂತಿ ಕೊಠಡಿ ಎನ್.ಎಸ್.ಎಸ್.

ಸೌಲಭ್ಯವಾಗಲಿ, ನಿಚಣಿಕೆಯ ಸೌಲಭ್ಯವಾಗಲಿ ಇಲ್ಲ. ವಿದ್ಯಾರ್ಥಿಗಳಿಗೆ ಕೈ ತೊಳೆಯಲು ಸೋಪ್ಪಿನ ವ್ಯವಸ್ಥೆ ಹಾಗೂ ಸ್ವಚ್ಛತೆಯಾಗಲಿ ಇರಲಿಲ್ಲ.

ಈ ಬಾಡಿಗೆ ಕಟ್ಟಡ ಪರಿಸ್ಥಿತಿಯಂತೂ ಚಿಂತಾಜನಕ. ದವಸ ದಾನ್ಯಗಳನ್ನು ತುಂಬುವ 'ಗುಡಾವಣ' ಪಾರಿವಾಳಗಳ ವಾಸಸ್ಥಾನ, ಗುಬ್ಬಚ್ಚಿಗಳ ತವರು ಮನೆ. ಇಡಿ ಗುಡಾವಣೆ ಹಕ್ಕಿಗಳ ಹಿಕ್ಕೆಗಳ ತಾಣ. ಬೇಸಿಗೆಯಲ್ಲಿ ದಗದಗಿಸುವ ಉರಿ. ಮಳೆಗಾಲದಲ್ಲಿ ಮಳೆಯ (ತಗಡೆಗೆ ನೀರಿನ ರಬಸಕ್ಕೆ) ಜೆಂಕಾರದ ನಾದ. ಇಲ್ಲಿ ಕಸಗೂಡಿಸಲು ಯಾರಿಗೂ ಆಸಕ್ತಿ ಇಲ್ಲಾ. ಗೂಡಿಸುವ ಅವಶ್ಯಕತೆ ಇಲ್ಲ ಎಂಬಂತಿತ್ತು ಅವರ ವರ್ತನೆ. ಪ್ರಾರಂಭದಲ್ಲಿ ಹಾಜರಿ ಹಾಕಿ ದಿನವಿಡಿ ಮಾಯವಾಗುವ ಪ್ರಿನ್ಸಿಪಾಲ. ಲಕ್ಷಾಂತರೂ ಬೆಲೆ ಬಾಳುವ ಲೇಥ್ (LETH)ಯಂತ್ರ, ಜನರೇಟರ್ ಇದ್ದರೂ ಇಂಧನ ಆಯಿಲ್ ಸರಬರಾಜು ಇಲ್ಲದೇ ಬಿದ್ದಿದೆ. ಸಮಾಜ ವಿಜ್ಞಾನ ವಿಷಯದ ಬೋದಕರೂ ಇಲ್ಲಾ. ಎನ್.ಎಸ್.ಎಸ್. ಬಯಸಿ ವಿದ್ಯಾರ್ಥಿಗಳು ಮಾಡಿದ ಮನವಿ, ಇಲಾಖೆಯು ಸಂತ ಕಟಡ ಕಟಿಸಲು

ತರೆಯಲು ಆದೇಶಿಸಿದ್ದರೂ ಇಲ್ಲಿ ಜಾಗ ಕೊಡುವವರೇ ಇಲ್ಲಾ. ಸಿಬ್ಬಂದಿ ಇಲ್ಲಾ, ಸ್ವಂತ ಕಟ್ಟಡವಿಲ್ಲ ಎಂದು ಆದೇಶವನ್ನು ವಾಪಸ್ ಕಳುಹಿಸಿದ ಮಹಾಶಯ ಈ ಪ್ರಿನ್ಸಿಪಾಲ್. ಸಾಂಸ್ಕೃತಿಕ ಚಟುವಟಿಕೆಯಂತೂ ದೂರದ ಮಾತು. ದ್ವಿತಿಯ ದರ್ಜೆ ಗುಮಾಸ್ತರಲ್ಲಿ ಇರಬೇಕಾದ ಹಲವಾರು ದಾಖಲೆಗಳು ತಿಳಿಯದಂತೆ ಪ್ರಿನ್ಸಿಪಾಲ್ ಪೆಟ್ಟಿಗೆ ಸೇರಿದೆ. ಹಾಗೂ ಇಲಾಖೆ ಜೊತೆ ಅವರದ್ದೆ ವ್ಯವಹಾರ. ಈ ಪ್ರಿನ್ಸಿಪಾಲರ ಅವಿವೇಕಿ ತನದ ಮಾತುಕಗಳು ತುಣಕು ಇಲ್ಲವೆ.

ಕನಿಷ್ಟ ಮೂಲಭೂತ ಸೌಲಭ್ಯಗಳು ಇಲ್ಲದ್ದನ್ನು ಖಂಡಿಸಿ, ಉಪನ್ಯಾಸಕರ ನಿಯೋಜನೆ ರದ್ದುಗೊಳಿಸಲು ಒತ್ತಾಯಿಸಿ, ಆಡಳಿತ ವೈಫಲ್ಯ ವಿರೋಧಿಸಿ ಭಾರತ ವಿದ್ಯಾರ್ಥಿ ಫೆಡರೇಷನ್(ಎಸ್‌ಎಫ್‌ಐ) ಹಾನಗಲ್ ತಾಲೂಕು ಸಮಿತಿ ನೇತೃತ್ವದಲ್ಲಿ ಅಕ್ಕಿ ಆಲೂರು ನಗರದ ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಯ ವಿದ್ಯಾರ್ಥಿಗಳು ಡಿಸೆಂಬರ್ 20 ರಿಂದ 27 ರ ವರೆಗೆ ಐತಿಹಾಸಿಕ ಅನಿರ್ದಿಷ್ಟ ಧರಣಿ ಸತ್ಯಾಗ್ರಹ ನಡೆಸಿದರು. ಈ ಅನಿರ್ದಿಷ್ಟ ಧರಣಿ ಸತ್ಯಾಗ್ರಹದಿಂದ ಸಂಪೂರ್ಣ ಬೇಡಿಕೆ ಈಡೇರಿಸಿಕೊಳ್ಳುವ ಮೂಲಕ ತಾಲೂಕಿನ ಜನತೆಯ ಗಮನ, ಕಣ್ಣುಗಳು ಆ ಹೋರಾಟದತ್ತ ಮಾಧ್ಯಮಗಳಿಗೆ ಸುದ್ದಿ ಸುಗ್ಗಿಯಾದರೆ ಆಡಳಿತ ಪಕ್ಷದವರಿಗೆ ನಿದ್ದೆಗೆಡಿಸಿದ ಹೋರಾಟ ಇದು.

ಬಿಸ್ಲೇರಿಗೆ ಸಲಹೆ : ಕುಡಿಯಲು ವಿದ್ಯಾರ್ಥಿಗಳು ನೀರು ಕೇಳಿದರೆ (ಪ್ರಿನ್ಸಿಪಾಲರನ್ನು) ಬಿಸ್ಲೇರಿ ತಂದು-ಕುಡಿಯಿರಿ, ಮತ್ತು ಬಾಟಲ್‌ಗಳನ್ನು ಹೊರಗಡೆಯೇ ಇಡಬೇಕು ಒಳಗಡೆ ತರಕೂಡದೂ ಎಂಬ ಆದೇಶ. ಆಟಿಕೆ ಸಾಮಾಗ್ರಿ ಕೇಳಿದರೆ ವೃತ್ತಿಕೊರ್ಸ್‌ನ್ನಲ್ಲಿ ಇದಕ್ಕೆ ಅವಕಾಶವಿಲ್ಲ. ಮೈದಾನ, ಮಾಸ್ಟು ಇಲ್ಲ ಎಂಬ ಉತ್ತರ.

ಸಹಿ ಬೇಕಾದರೆ ಗುತ್ತಲ ಐಟಿಐಗೆ ಬನ್ನಿ.

ವಿದ್ಯಾರ್ಥಿಗಳಿಗೆ ಏನಾದರೂ ಪ್ರಿನ್ಸಿಪಾಲರ ಸಹಿ ಬೇಕಾದರೆ "ಹಾವೇರಿ ತಾಲೂಕ ಗುತ್ತಾಲ ಐಟಿಐಗೆ ಬನ್ನಿ ಇಲ್ಲದಿದ್ದರೆ ಮಾಡುವುದಿಲ್ಲ" ಎಂಬ ಸೊಕ್ಕಿನ ಮಾತು ಪ್ರಿನ್ಸಿಪಾಲನದ್ದು. ಇದರಿಂದ ಪ್ರಿನ್ಸಿಪಾಲ ಸಹಿ ಇಲ್ಲದ ಕಾರಣ ಹಲವು ವಿದ್ಯಾರ್ಥಿಗಳು ಹಾಸ್ಟಲ್ ಸೌಲಭ್ಯ ಕಳೆದುಕೊಳ್ಳಬೇಕಾಯಿತು.

ಸೌಲಭ್ಯ ಕೇಳಿದರೆ ಪೊಲಿಸ್ ಕಂಪ್ಲೆಂಟ್ :

ವಿದ್ಯಾರ್ಥಿಗಳು ತಮ್ಮಗೆ ಬೇಕಾದ ಸೌಲಭ್ಯ ಕೇಳಿದರೆ, ಕ್ರಿಕೆಟ್ ಸ್ಟಂಪ್ಸ್ ಕೊಡಲು ಹೋದರೆ ಸ್ಟಂಪ್ಸ್ ತೆಗೆದುಕೊಂಡು ಹೊಡೆಯಲು ಬಂದರೆಂದು ಸುಳ್ಳು ದೂರು ನೀಡಿದ್ದಾರೆ ಈ ಪ್ರಿನ್ಸಿಪಾಲ್. ಪೊಲೀಸರು ಬಂದು ವಿಚಾರಿಸಿ ಎಲ್ಲಾ ಸುಳ್ಳೆಂದೂ ಕೊನೆಗೆ ಅವರೇ ಆತ ಲೂಜ್ ಗಿರಾಕಿ ಎಂದು ಹೇಳುತ್ತಿದ್ದಾರೆ.

ಪ್ರಿನ್ಸಿಪಾಲರ ನೀತಿಯಿಂದ ಬೆಸತ್ತ ವಿದ್ಯಾರ್ಥಿಗಳು ಉಪನ್ಯಾಸಕರ ನಿಯೋಜನೆ ತಹಸಿಲ್ದಾರರಿಗೆ ಮನವಿ ಸಲ್ಲಿಸಿದರೂ ಪ್ರಯೋಜನವಾಗದಿದ್ದಾಗ ಎಸ್.ಎಫ್.ಐ ಆಫೀಸ್‌ಗೆ ದೌಡಾಯಿಸಿಯೇ ಬಿಟ್ಟರು. ಎಸ್.ಎಫ್.ಐ ಹೋರಾಟದ ಕಹಳೆ ಊದಿಸಿತು. ಡಿ.18 ರಂದು ಸಂಬಂಧಪಟ್ಟ ಇಲಾಖೆಗೆ ಮನವಿ ಸಲ್ಲಿಸಲಾಗಿತ್ತು. 20 ರಂದು ಹೋರಾಟಕ್ಕೆ ಸಿದ್ದತೆ. ಅಕ್ಕಿ ಆಲೂರಿನ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ನಡೆಸಿ ನಾಡಕಛೇರಿ ಮೂಲಕ ಸರ್ಕಾರಕ್ಕೆ ಮನವಿ ಸಲ್ಲಿಸಿದರು. ಅಂದೆ ಅನಿರ್ಧಿಷ್ಟ ಧರಣಿ ಸತ್ಯಾಗ್ರಹಕ್ಕೆ ಚಾಲನೆ ನೀಡಿತು.

ಡಿ. 20 ರಿಂದ ಆರಂಭಗೊಂಡಿತು. ಅನಿರ್ಧಿಷ್ಟ ಧರಣಿ ಸತ್ಯಾಗ್ರಹ. 21 ರಂದು ಬೆಂಗಳೂರ ನಿರ್ದೇಶಕರಿಂದ ಫೋನ್. ಸಂಯೋಜನೆ ಆದೇಶ ವಾಪಸ್ ಪಡೆದಿದ್ದೇವೆ ಎಂಬ ಉತ್ತರ ಬಂತು. ಲಿಖಿತ ಉತ್ತರಕ್ಕೆ ಪಟ್ಟು ಹಿಡಿದರು. 3ನೇ ದಿನದ ಧರಣಿ ಸತ್ಯಾಗ್ರಹಕ್ಕೆ ದಂಡಾಧಿಕಾರಿಗಳ ಆಗಮನ. ಮಾತುಕತೆ ವಿಫಲ. ಅವರ ಶರತ್ತು ತಿರಸ್ಕರಿಸಿದ ಮುಷ್ಕರ ನಿರತ ವಿದ್ಯಾರ್ಥಿಗಳು 4ನೇ ದಿನದ ಧರಣಿ ಸತ್ಯಾಗ್ರಹ ರವಿವಾರವಾದರೂ ಮುಂದುವರೆಯಿತು.

ಫ್ಯಾಕ್ಸ್ ಸಂದೇಶ - ಜಯ

ಐದನೇ ದಿನದ ಧರಣಿ ಸತ್ಯಾಗ್ರಹ ಕಾವು ಏರುತ್ತಿದಂತೆ ಉಪನ್ಯಾಸಕರ ನಿಯೋಜನೆ ಆದೇಶ ವಾಪಸ್ ಪಡೆದ ಫ್ಯಾಕ್ಸ್ ಸಂದೇಶ ಬೆಂಗಳೂರಿಂದ. ತರಬೇತಿ ಇಲಾಖೆ ವಿದ್ಯಾರ್ಥಿ ಮುಖಂಡರ ಕೈಸೇರಿತು. ವಿದ್ಯಾರ್ಥಿಗಳ ಪ್ರಮುಖ ಬೇಡಿಕೆಗೆ ಪ್ರಥಮ ಹಂತದ ಜಯ ದೊರೆಯಿತು. ಜಯದ ಹುರುಪು ವಿದ್ಯಾರ್ಥಿಗಳು 6ನೇ ದಿನದ ಮುಷ್ಕರಕ್ಕೆ ಕ್ರಿಸ್ ಮಸ್ ಇದ್ದರೂ ಮುಂದುವರಿಸುವ ನಿರ್ಧಾರ. ಆರನೇದಿನದ ಮುಷ್ಕರಕ್ಕೆ ಸಿಪಿಐ ಬೆಟ್ಟಿ.

ಇಲಾಖೆ ಮತ್ತು ಪ್ರಿನ್ಸಿಪಾಲರ ಬೇಜವಾಬ್ದಾರಿ ಖಂಡಿಸಿ ಏಳನೆದಿನದ ಧರಣಿ ಸತ್ಯಾಗ್ರಹ ವಿನೂತನ ರೀತಿಯಲ್ಲಿ. ಪ್ರಿನ್ಸಿಪಾಲ ಮತ್ತು ಇಲಾಖೆಯ ಎರಡು ಮುಖಗಳ ಪ್ರತಿಕೃತಿಯನ್ನು ನೇತು ಹಾಕಿ ಸುಡುವ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತು. ಮಾಧ್ಯಮಗಳಲ್ಲಿ ಒಳ್ಳೆ ಪ್ರಚಾರವೂ ಬಂತು.

ಎಂಟನೇ ದಿನಕ್ಕೆ ಸಂಪೂರ್ಣ ಬೇಡಿಕೆ ಈಡೇರಿಕೆಗೆ ಭರವಸೆ - ಮುಷ್ಕರ ವಾಪಸ್.

ಮುಷ್ಕರ ಎಂಟನೆ ದಿನಕ್ಕೆ ಕಾಲಿಡುತ್ತಿದ್ದಂತೆ ಜಿಲ್ಲಾ ಪೊಲಿಸ್ ಉಪ ವರಿಷ್ಠಾಧಿಕಾರಿ ಚಂದ್ರಕಾಂತ ಸಮ್ಮುಖದಲ್ಲಿ ವಿದ್ಯಾರ್ಥಿಗಳು, ಪ್ರಿನ್ಸಿಪಾಲರು, ಹಾಗೂ ಊರಿನ ಪ್ರಮುಖರ ಸಭೆ ನಡೆದು ಒಂದು ತಿಂಗಳೊಳಗಾಗಿ ಬೇಡಿಕೆ ಈಡೇರಿಸುವ ಎಲ್ಲಾ ಪ್ರಮುಖರ ಸಹಿ ಲಿಖಿತ ಭರವಸೆಯೊಂದಿಗೆ ಮುಷ್ಕರ ವಾಪಸ್ ಪಡೆಯಲಾಯಿತು.

ಚಳುವಳಿ ನೇತೃತ್ವವನ್ನು ಎಸ್.ಎಫ್.ಐ. ಜಿಲ್ಲಾ ಸಂಚಾಲಕ ವಿಜಯಕುಮಾರ್ ದೊಡ್ಡಮನಿ, ಗಂಗಯ್ಯ ಕುಲಕರ್ಣಿ, ಆರ್. ನಾರಾಯಣ ಕಾಳೆ, ಶಿವರಾಯ್ ದೇಸಾಯಿ, ಗೀತಾತಳವಾರ, ರಮೇಶ್ ತಳವಾರ, ಅಣ್ಣಪ್ಪ ಚಿಕ್ಕರಾವರ. ಸ್ಥಳೀಯ ವಿದ್ಯಾರ್ಥಿಗಳ ಪರವಾಗಿ ಸೋಮಸಾಗರ, ರಮೇಶ್ ಒಡೆಯರ ಹಾಗೂ ಅರಿಶಿಣಗುಪ್ಪ, ನಾಗನೂರ, ದೇವರಾಜ ಮುಂತಾದವರು ವಹಿಸಿದ್ದರು. ಪ್ರತಿದಿನ ಸಂಸ್ಥೆಯ ಎಲ್ಲಾ ವಿದ್ಯಾರ್ಥಿಗಳು ಮುಷ್ಕರದಲ್ಲಿ ಭಾಗಿಯಾಗಿದ್ದರು.

ಸ್ಲಂ ಸುಗ್ರೀವಾಜ್ಞೆ: ಭೂಗಳ್ಳರಬಾಯಿಗೆ ಕೊಳಚೆಪ್ರದೇಶಗಳು !

ಭೂಗಳ್ಳರಿಗೆ, ಲಂಚಖೋರ ದರ್ಪದ ಅಧಿಕಾರಿಗಳಿಗೆ ಆಳುವವರ ಆಡಂಬೋಲಕ್ಕೆ ಆಹಾರ ಒದಗಿಸಿ ಅಲ್ಲಿಯ ಜನರನ್ನೇ ಎತ್ತಂಗಡಿ ಮಾಡುವ ಸುಗ್ರೀವಾಜ್ಞೆಯತ್ತ ಗಮನ ಸೆಳೆದಿರುವ ವರದಿ.

ಸಯ್ಯದ್ ಮುಜೀಬ್

ಸ್ಲಂಗಳ ಅಭಿವೃದಿಗಾಗಿ ಜಾರಿಗೆ ತಂದಿದ್ದ ಕಾಯ್ದೆ"ಕರ್ನಾಟಕ ಕೊಳಚೆ ಪ್ರದೇಶಗಳ(ಮೇಲ್ಪಾಟು ಮತ್ತು ನಿರ್ಮೂಲನ) ಅಧಿನಿಯಮ 1973" ರಲ್ಲಿಯೇ ಜನ ಪರವಾದಂತಹ ಅಂಶಗಳ ಕೊರತೆಯಿತ್ತು. ಸ್ಲಂಗಳ ಸಮಗ್ರ ಭಿವೃದ್ಧಿಗೆ ಪೂರಕವಾದಂತಹ ಕಾಯ್ದೆಯ ತಿದ್ದಪಡಿಮಾಡಲು ಜನಪರ ಸಂಘಟನೆಗಳು ಒತ್ತಾಯಿಸುತ್ತಿರುವಾಗಲೇ, 1973 ರ ಕಾಯ್ದೆಯಲ್ಲಿದ್ದ ಅತ್ಯಲ್ಪ ಜನಪರತೆಯನ್ನು ಜನರ ಆಶಯಗಳಿಗೆ ತದ್ವಿರುದ್ಧವಾಗಿ ಕಾಯ್ದೆ ತಿದ್ದುಪಡಿಯನ್ನು ಸುಗ್ರಿವಾಜ್ಞೆ ಮೂಲಕ ತರಲು ಸರ್ಕಾರ ಹೊರಟಿದೆ. ಕೊಳಚೆ ನಿರ್ಮೂಲನ ಮಂಡಲಿಯಲ್ಲಿನ ಜನ ಪ್ರತಿನಿಧಿಗಳ ಸಂಖ್ಯೆ 9 ರಿಂದ 5ಕ್ಕೆ ಇಳಿಸಿದೆ. ಕಾರ್ಯದರ್ಶಿ ಹುದ್ದೆಯನ್ನು ಆಯುಕ್ತರಾಗಿ ಮೇಲ್ದರ್ಜೆಗೆ ಏರಿಸಿದೆ. ಅಷ್ಟೆ ಅಲ್ಲದೆ ಅವರ ಮಂಡಳಿ ತೀರ್ಮಾನ ಜಾರಿಗೊಳಿಸಿದೆ. ತಡೆ ಹಿಡಿಯಲು ಅಥವಾ ಬದಲಿಸುವ ಅಧಿಕಾರ ಅವರಿಗೆ ನೀಡಿದೆ. ಸ್ಲಂಗಳ ನಿರ್ಮೂಲನೆ ಉತ್ತಮೀಕರಣ ಹಾಗೂ ಪುನರ್ ಅಭಿವೃದ್ಧಿಯ ಹೆಸರಿನಲ್ಲಿ ನಗರಗಳಲ್ಲಿನ ಸ್ಲಂಗಳ ಭೂಮಿಯನ್ನು ಭೂಗಳ್ಳರೊಂದಿಗೆ ಪಡೆದುಕೊಳ್ಳಲು ಅನುಕೂಲಕರವಾದ ಕೊಳಗೇರಿಗಳ ಕರಾಳ ಶಾಸನ ಆಗುತ್ತಿದ್ದು. ಕೊಳಚೆ ನಿರ್ಮೂಲನ ಕಾಯ್ದೆ 2001 ಸುಗ್ರೀವಾಜ್ಞೆಯ ವಿರೋಧಿ ಹೋರಾಟ ಬೆಳೆದುಬರಬೇಕಾಗಿದೆ.

ನಗರ ಪಟ್ಟಣಗಳು ವೇಗವಾಗಿಯೇ ಬೆಳೆಯುತ್ತಿವೆ. ಜನಸಂಖ್ಯೆಯು ಸಹ ಬೆಳೆಯುತ್ತಿದೆ. ಇದಕ್ಕೆ ಅಗತ್ಯ ಕೆಲಸಮಾಡುವ ಹಮಾಲಿ- ಕಟ್ಟಡ- ಚಾಲಕರು- ಕಾರ್ಮಿಕರು-ನೌಕರರು ಸಹ ಬೆಳೆಯುತ್ತಿದ್ದಾರೆ. ಆದರೆ ನೌಕರರಿಗೆ- ಕಾರ್ಮಿಕರಿಗೆ - ಜೀವನ ಸಾಗಿಸಲು ಅಗತ್ಯ ಆಧಾರಿತ ಕನಿಷ್ಟ ಕೂಲಿ ದೊರೆಯುತ್ತಿಲ್ಲ. ಹಾಗಾಗಿ ಶ್ರಮಜೀವಿಗಳು ತಮ್ಮ ವಾಸಕ್ಕೆ ಸಿಕ್ಕ ಕಡೆಗಳಲ್ಲಿ ಗೂಡಿನಂತಹ ಗುಡಿಸಲು ಮನೆಗಳನ್ನು ಕಿಚ ಕಿಂಡಿಯಾದ ಕಡೆಗಳಲ್ಲಿ ವಾಸಿಸುತ್ತಾರೆ. ಇಂತಹ ಕಡೆಗಳಲ್ಲಿ ಕನಿಷ್ಟ ಮೂಲಭೂತವಾದ ಸೌಕರ್ಯ ಅಗತ್ಯಗಳಾದ ಕುಡಿಯುವ ನೀರು, ಶೌಚಾಲಯ, ಚರಂಡಿ, ಬೀದಿದೀಪ ಮುಂತಾದವುಗಳಂತೆ ವಂಚಿತರಾಗುತ್ತಾರೆ. ಹೀಗೆ ಸೃಷ್ಟಿಯಾಗುತ್ತದೆ ಸ್ಲಂಗಳು.

ದುಡಿವ ಜನ ಕಸಕ್ಕಿಂತ ಕಡೆ

ಬಂಡವಾಳಶಾಹಿ ವ್ಯವಸ್ಥೆಯಲ್ಲಿ ದುಡಿಯುವ ಜನರನ್ನು ಕಸಕ್ಕಿಂತ ಕಡೆಯದಾಗಿ ಕಾಣಲಾಗುತ್ತದೆ. ದುಡಿಯುವ ಜನರಿಲ್ಲದೆ ಉತ್ಪಾದನೆ ಸಾಧ್ಯವಿಲ್ಲ. ಆದರೆ ದುಡಿಮೆಗೆ ತಕ್ಕ ಪ್ರತಿಫಲ ನೀಡದ ಕಾರಣವೇ ದುಡಿಯುವ ಬಹುಜನರು ಸ್ಲಂಗಳಲ್ಲಿ ವಾಸಿಸುತ್ತಾರೆ. ಸ್ಲಂಗಳ ಜನರಿಗೆ ಸಮಸ್ಯೆಗಳು ಹಲವಾರು. ಸ್ಲಂಗಳಲ್ಲಿ ಕಟ್ಟಡ ಕಾರ್ಮಿಕರು, ಹಮಾಲಿಗಳು, ಕುಲುಮೆ, ಕಾರ್ಮಿಕರು, ಬೀಡಿಕಾರ್ಮಿಕರು, ಪೌರ ಕಾರ್ಮಿಕರು, ಚಾಲಕರು, ಕ್ಲೀನರ್‌ಗಳು, ತಲೆಮೇಲೆ ಬುಟ್ಟಿ ಹೊತ್ತು ತಳ್ಳುವಂಗಡಿ, ಹೂ ಹಣ್ಣು ಮಾರುವವರು, ಪುಟ್‌ಪಾತ್ ವ್ಯಾಪಾರಿಗಳು ವಾಸಿಸುತ್ತಿರುತ್ತಾರೆ. ಇವರಿಗೆ ನಾಗರಿಕ ಅಗತ್ಯಗಳ ತೊಂದರೆ ಒಂದೆಡೆಯಾದರೆ ಕಡಮೆ ಕೂಲಿ, ಅರೆ ಉದ್ಯೋಗ, ಹೆಚ್ಚುತ್ತಿರುವ ನಿರುದ್ಯೋಗ ಹೆಚ್ಚುತ್ತಿರುವ ಆಹಾರ ಧಾನ್ಯಗಳ ಬೆಲೆ ಇದರಿಂದ ಸ್ಲಂ ಜನರ ಬದುಕು ಬರ್ಬರವಾಗುತ್ತಿದೆ.

ಕಾಯ್ದೆ ಅಂಗಿಕಾರ - ಕೆಲವು ಕೊರತೆಗಳು

ಸ್ಲಂಗಳ ಅಭಿವೃದ್ಧಿಗಾಗಿ ಕರ್ನಾಟಕ ಸರ್ಕಾರವು ಕೊಳಚೆ ಪ್ರದೇಶಗಳ (ಮೇಲ್ಪಾಟು ಮತ್ತು ನಿರ್ಮೂಲನ) ಅಧಿನಿಯಮ-1973 ರಲ್ಲಿ ರೂಪಿಸಿತು. 1974 ರಲ್ಲಿ ರಾಷ್ಟ್ರಪತಿಯಿಂದ ಅಂಕಿತ ಪಡೆದು 1975 ರಲ್ಲಿ ನಮ್ಮ ರಾಜ್ಯದಲ್ಲಿ ಈ ಕಾಯ್ದೆಯು ಆಚರಣೆಗೆ ಬಂದಿತು. ಭಾರತದ ಸಂವಿಧಾನದ ರಾಜ್ಯ ನಿರ್ದೇಶಕತ್ವ 47ನೇ ವಿಧಿಯು ಆದೇಶದ ಅನ್ವಯ ಸಾರ್ವಜನಿಕ ಆರೋಗ್ಯ ಪಾಲನೆ ರಾಜ್ಯ ಸರ್ಕಾರದ್ದು. ಈ ನಿಟ್ಟಿನಲ್ಲಿ ಮನುಷ್ಯರು ವಾಸಿಸಲು ಯೋಗ್ಯವಲ್ಲದ ಕೊಳಚೆ ಪ್ರದೇಶಗಳ ಹೆಚ್ಚಳ ಕಲುಷಿತ ವಾತಾವರಣದಿಂದ ಆರೋಗ್ಯ ಹದಗೆಟ್ಟ ಪರಿಸರದಲ್ಲಿ ವಾಸಿಸುತ್ತಿರುವ ಜನರ ಜೀವನಕ್ಕೆ ಹಾನಿ ಸಂಭವಿಸುವ ಸಾಧ್ಯತೆಗಳನ್ನು ಪರಿಗಣಿಸಿದ ಸರ್ಕಾರವು ಈ ಇಡೀ ಕಾಯ್ದೆಯಲ್ಲಿ ಸ್ಲಂಗಳ ಜನರ ನೈರ್ಮಲ್ಯ ಆರೋಗ್ಯ ಕಾಪಾಡುವ ಸೀಮಿತ ಚೌಕಟ್ಟಿನಲ್ಲಿ ತರಲಾಯಿತೇ ವಿನಹ ಸ್ಲಂ ಜನಗಳ ಇಡೀ ಬದುಕನ್ನು ರೂಪಿಸುವ ಕಾಯ್ದೆಯಾಗಿ ಬದುಕುವ ಹಕ್ಕನ್ನು ಸಂರಕ್ಷಿಸುವ ದೃಷ್ಟಿಕೋನದ ಕೊರತೆ ಇತ್ತು.

ಆದರೆ ಈ 1973 ಕಾಯ್ದೆಯಲ್ಲಿ ಸ್ಲಂಗಳನ್ನು ಕಾನೂನು ವ್ಯಾಪ್ತಿಗೆ ತಂದು ಘೋಷಿಸಿ ಜನರಿಗೆ ವಾಸಿಸುವ ಹಕ್ಕು ಕೊಡುವಂತಾಗಲು ಕೊಳಗೇರಿಗಳ ಹೆಚ್ಚಳವಾಗದಂತೆ ಆ ಪ್ರದೇಶದ ಉತ್ತಮ ಪಡಿಸುವ ನಾಗರಿಕ ಸೌಲಭ್ಯಗಳಾದ ಕುಡಿಯುವ ನೀರು, ಚರಂಡಿ-ಬೀದಿದೀಪ, ರಸ್ತೆಗಳನ್ನು ಒದಗಿಸಿ ಅಷ್ಟೇ ಅಲ್ಲದೇ ಕೊಳಗೇರಿಗಳ ಜನರ ವಸತಿಗಾಗಿ ಭೂಸ್ವಾದೀನಪಡಿಸುವ ಮತ್ತು ಖರೀದಿಸುವ ಹಕ್ಕನ್ನು ಹೊಂದಿತ್ತು. ಈ ಕಾಯ್ದೆಯ 33ನೇ ಕಲಂನ ಪ್ರಕಾರ ಕೊಳಚೆ ನಿರ್ಮೂಲನ ಮಂಡಳಿಯೊಂದು ಇದ್ದು ಅದರಲ್ಲಿ 15 ಜನ ಸದಸ್ಯರಿರುತ್ತಾರೆ. ಅದರಲ್ಲಿ ಅಧ್ಯಕ್ಷರು, 5 ಜನ ಅಧಿಕಾರಿಗಳು 9 ಜನ ಅಧಿಕಾರೇತರ ಸದಸ್ಯರು ಇರಬೇಕು. ಕೊಳಚೆ ನಿರ್ಮೂಲನ ಕಾಯ್ದೆ 1973 ರ ಅಡಿಯಲ್ಲಿ ಮಂಡಳಿಯ ಕಾರ್ಯದರ್ಶಿ ಈ ಕಾಯ್ದೆಯ ಅನ್ವಯ ಮಂಡಳಿ ತೀರ್ಮಾನ ಜಾರಿಗೆ ಕೆಲಸ ಮಾಡುವ ಅವಶ್ಯಕತೆ ಇತ್ತು.

ಜಾರಿಯಾಗದ ಅಂಶಗಳು

ಈ ಕಾಯ್ದೆಯು ಅನುಷ್ಠಾನಕ್ಕೆ ಬಂದು 26 ವರ್ಷಗಳು ಕಳೆದಿವೆ. ಆದರೂ ರಾಜ್ಯದ ಶೇ 60 ರಷ್ಟು ಕೊಳಗೇರಿಗಳು ಅಧಿಕೃತವಾಗಿ ಘೋಷಣೆಯಾಗಿಲ್ಲ ಸರ್ಕಾರಿ ಕಡತದಲ್ಲಿ ದಾಖಲಾಗದೇ ಉಳಿದಿರುವುದು ಒಂದೆಡೆಯಾದರೆ ಘೋಷಣೆಯಾಗಿರುವ ಶೇ 40 ರಲ್ಲಿರುವ ಸ್ಲಂಗಳಲ್ಲಿ ಉತ್ತಮೀಕರಣದ ಕೆಲಸಅಷ್ಟಕ್ಕೇ ಅಷ್ಟೆ. ಘೋಷಣೆಯಾಗಿರುವ ಸ್ಲಂಗಳ ಸರ್ಕಾರಿ ಭೂ ಒಡೆತನದಲ್ಲಿ ಸ್ವಲ್ಪ ಕೆಲಸ ನಡೆದಿದೆ. ಖಾಸಗಿ ವೃತ್ತಿಗಳಿಗೆ ಭೂ ಒಡೆತನಕ್ಕೆ ಸೇರಿದ ಸ್ಲಂಗಳಲ್ಲಿ ನೋಟಿಸ್ ನೀಡಿದ ಕೂಡಲೇ ನ್ಯಾಯಾಲಯದಿಂದ ತಡೆಯಾಜ್ಞೆ ತಂದು ಅಭಿವೃದ್ಧಿಯನ್ನು ಸ್ಥಗಿತಗೊಳಿಸಲಾಗಿದೆ. ಈ ಕಾಯ್ದೆಯ ಕಲಂ 17 ಪ್ರಕಾರ ಸ್ಲಂಗಳ ಪುನರ್‌ಅಭಿವೃದ್ಧಿ, ಪುನರ್‌ವಸತಿ ಭೂಸ್ವಾದೀನ-ಅಧಿಕಾರ ಇದ್ದಾಗ ಇದುವರೆಗೂ ರಾಜ್ಯದಲ್ಲಿ 31 ಸ್ಲಂಗಳನ್ನು ಮಾತ್ರ ಘೋಷಣೆಯಾಗಿದೆ. ಅವುಗಳಲ್ಲಿ ಕೆಲವು ಸ್ಲಂಗಳಲ್ಲಿ ಮಾತ್ರ ವಸತಿಯನ್ನು ಕಲ್ಪಿಸಲಾಗಿದೆ. ಕಲಂ 26 ಎ ಪ್ರಕಾರ ಖಾಸಗಿ ಭೂಮಿಯನ್ನು ಖರೀದಿಸಲು ಅವಕಾಶ ವಿದ್ದರೂ ಇದುವರೆಗೂ ಎಲ್ಲಿಯೂ ಜಾರಿಗೊಳಿಸಿಲ್ಲ. ಕೊಳಚೆ ನಿರ್ಮೂಲನ ಮಂಡಳಿ ರಚನೆಯ ಉದ್ದೇಶ ಒಳ್ಳೆಯದಾದರೂ ಈ ಮಂಡಳಿಗೆ ಸದಸ್ಯರನ್ನು ನೇಮಿಸುವಾಗ ತಮ್ಮ ಪಕ್ಷದ ಕಾರ್ಯಕರ್ತರನ್ನು ನೇಮಿಸುವ ಮೂಲಕ ರಾಜಕೀಯ ಹಸ್ತಕ್ಷೇಪಕ್ಕೆ ದಾರಿ ಮಾಡಿಕೊಡಲಾಗುತ್ತದೆ. ಕೊಳಗೇರಿ ಜನರಿಗೆ ಮಂಡಳಿಯಲ್ಲಿ ಅವಕಾಶವೇ ಇಲ್ಲದಂತೆ ಆಗಿದೆ.

ಈ ಮೇಲಿನ ಕೊರತೆಗಳನ್ನು ನೀಗಿಸಿಕೊಂಡು ಸ್ಲಂಜನಗಳ ಕಾಯಿದೆಗೆ ಸೂಕ್ತವಾದ ಜನಪರ ತಿದ್ದುಪಡಿ ತರುವಂತೆ ಜನಪರ ಸಂಘಟನೆಗಳು ಒತ್ತಾಯಿಸುತ್ತಿರುವಾಗಲೇ ಸರ್ಕಾರ ಈಗ ಕೊಳಗೇರಿ ವಾಸಿಗಳಿಗೆ ಕರಾಳವಾಗಿರುವ ಶಾಸನವನ್ನು ಸುಗ್ರೀವಾಜ್ಞೆಯ ಮೂಲಕ ದಿ. 17.12.2001 ರಂದು ತಿದ್ದುಪಡಿ ಮಾಡಿ ಜಾರಿಗೆ ತರಲು ಹೊರಟಿದೆ.



ಈಗಾಗಲೇ ಸುಗ್ರೀವಾಜ್ಞೆಗೆ ರಾಜ್ಯಪಾಲರ ಅಂಕಿತ ದೊರೆತಿದೆ. ಈ ತಿದ್ದುಪಡಿಯು ಜನಪರ ತಿದ್ದುಪಡಿಯಾಗದೆ ಜನವಿರೋಧಿ ಎಂಬುದೇ ಆತಂಕಕಾರಿಯಾದ ವಿಷಯ. ಸಂವಿಧಾನದ 74ನೇ ತಿದ್ದುಪಡಿ ಆಶಯಕ್ಕೆ ಮತ್ತ ಅಧಿಕಾರ ವಿಕೇಂದ್ರೀಕರಣ ನೀತಿಗೆ ವಿರುದ್ಧವಾದ ಅಪ್ರಜಾಸತ್ತಾತ್ಮಕವಾದ ಸುಗ್ರೀವಾಜ್ಞೆ ಇದಾಗಿದೆ.

ಒಕ್ಕಲೆಬ್ಬಿಸುವ ಹುನ್ನಾರ:

ಕೊಳಗೇರಿಗಳು ನಗರದ ಕೇಂದ್ರಭಾಗದಲ್ಲಿ ಇರುವುದು ಅನೇಕ ಇವೆ. ಅದರ ಭೂಮಿಯ ಬೆಲೆ ಕೋಟ್ಯಾಂತರ ರೂಪಾಯಿಯಾಗಿರುತ್ತದೆ. ಅದನ್ನು ದೃಷ್ಟಿಯಲ್ಲಿ ಇಟ್ಟುಕೊಂಡು ಅದನ್ನು ಕಬಳಿಸುವ ಬಹುರಾಷ್ಟ್ರೀಯ ಕಂಪನಿಗಳು, ಗುತ್ತೇದಾರರು, ಕಪ್ಪು ಹಣದಶ್ರೀಮಂತರಿಗೆ ನೀಡುವ ಹುನ್ನಾರದಿಂದ ತಿದ್ದುಪಡಿ ಸುಗ್ರೀವಾಜ್ಞೆಯನ್ನು ತರಲಾಗುತ್ತಿದೆ ಎಂಬ ಮಾತು ವ್ಯಾಪಕವಾಗಿ ಕೇಳಿಬರುತ್ತಿದೆ. ಪುನರ್‌ವಸತಿ ಮತ್ತು ಪುನರ್ ಅಭಿವೃದ್ಧಿಗಳ ನೆಪಒಡ್ಡಿ ಹಾಲಿ ಇರುವ ಸ್ಲಂಗಳನ್ನು ನಾಶ ಮಾಡಿ ಹೊಸ ಬಡಾವಣೆ ನಿರ್ಮಿಸುತ್ತೇವೆ ಎಂದು ಹೇಳಿ ಮತ್ತೆ ಆ ಬಡಾವಣೆಯಲ್ಲಿ ಈ ಹಿಂದೆ ಇದ್ದ ಮೂಲನಿವಾಸಿಗಳಿಗೆ ಮನೆ ನೀಡುವ ಯಾವುದೇ ಖಾತರಿ ಇಲ್ಲದಂತೆ ಆಗಿದೆ. ಇದು ಮತ್ತೆ ಆಳುವ ಪಕ್ಷದ ಕಾರ್ಯಕರ್ತರಿಗೆ ಅಧಿಕಾರಿಗಳಿಗೆ, ಮಧ್ಯವರ್ತಿಗಳಿಗೆ ಹಣ ಮಾಡಿಕೊಳ್ಳಲು ಸಹಕಾರಿಯಾಗಿದೆ.

ಸರ್ಕಾರಿ ಪ್ರೀತಿ?

ಹಾಲಿ ಕರ್ನಾಟಕ ರಾಜ್ಯ ಸರ್ಕಾರ ಬೆಂಗಳೂರು ಒಳಗೊಂಡಂತೆ 22 ಪ್ರಥಮ ದರ್ಜೆ ನಗರಗಳ ಒಟ್ಟು 985 ಕೊಳಗೇರಿಗಳನ್ನು ತಕ್ಷಣ ಅಭಿವೃದ್ಧಿ ಪಡಿಸಲು 274.01 ಕೋಟಿ ರೂ. ಯೋಜನೆಯನ್ನು ಸಿದ್ದಪಡಿಸಿದೆ. ಇದೇನಿದು ಸರ್ಕಾರಕ್ಕೆ ತೀವ್ರ ಪ್ರೀತಿ ಸ್ಲಂ ಜನರ ಬಗ್ಗೆ ಎಂದಿರೇನು? ಜಾಗತಿಕ ಬಂಡವಾಳ ಆಕರ್ಷಿಸುವ ದೃಷ್ಟಿ ಯಿಂದ ಅಷ್ಟೇ ಈ ಕ್ರಮ. ಇದಕ್ಕೆ ಸರ್ಕಾರ ಹುಡ್ಕೊದಿಂದ ಸಾಲವಾಗಿ ಹಣ ತರುತ್ತಿದೆ. ಬಡ್ಡಿ ಸಮೇತರಾಗಿ ತೀರಿಸಬೇಕಾದ ಹೊಣೆ - ಕೊಳಗೇರಿ ನಿವಾಸಿಗಳಂತೆ.

ಬರುವ ಹಣ ಸರಿಯಾಗಿ ವಿನಿಯೋಗವಾಗುವಂತೆ ಕ್ರಮವಹಿಸಬೇಕೆಂಬುದು ಒಂದೆಡೆಯಾದರೆ ತಿದ್ದುಪಡಿ ಸುಗ್ರೀವಾಜ್ಞೆ ಅಪ್ರಜಾಸತ್ತಾತ್ಮಕ ನೀತಿಯ ವಿರುದ್ಧ ಹೋರಾಟ ನಡೆಸುವುದು ಅತ್ಯಂತ ಜರೂರು.

ಕೊಳಚೆ ನಿರ್ಮೂಲ ಮಂಡಳಿ: ಅಧಿಕಾರಿಗಳ ಕಪಿಮುಷ್ಟಿಗೆ

ಕಲಂ 37(2) ಪ್ರಕಾರ ಇದೆ ಮುಖ್ಯ ಕಾರ್ಯನಿರ್ವಹಣಾಧಿಕಾರಿಯಾಗಿ ಕೆಲಸ ನಿರ್ವಹಿಸಬೇಕಿದ್ದ ಕಾರ್ಯದರ್ಶಿಗೆ ಏಕವ್ಯಕ್ತಿಯ, ಏಕಸ್ವಾಮ್ಯದ ಅಧಿಕಾರವನ್ನು ನೀಡಿರುವ ಹೊಸ ತಿದ್ದುಪಡಿ. ಸುಗ್ರೀವಾಜ್ಞೆಯು ಕಾರ್ಯದರ್ಶಿಯ ಹುದ್ದೆಗೆ ಬದಲಾಗಿ ಆಯುಕ್ತರಾಗಿ ಮಾರ್ಪಡಿಸಿದೆ. ಅಷ್ಟೇ ಅಲ್ಲದೆ ಮಂಡಳಿ ತೆಗೆದುಕೊಳ್ಳುವ ತೀರ್ಮಾನಗಳನ್ನು ಜಾರಿಗೊಳಿಸದೆ ತಡೆಹಿಡಿಯುವ, ಅಥವಾ ಬದಲಿಸುವ ಹೆಚ್ಚಿನ ಅಧಿಕಾರ ನೀಡಿದೆ. ಬಾಕಿ ವಸೂಲಿ, ಅಧಿಕಾರಿಗಳಿಗೆ ಹೆಚ್ಚಿನ ಅಧಿಕಾರ ನೀಡಲಾಗಿದೆ. ಈಗಿರುವ ಅಧಿಕಾರವನ್ನು ಬಳಸಿ ಸಾಕಷ್ಟು ತೊಂದರೆ ಉಂಟು ಮಾಡುವ ಅಧಿಕಾರಿಗಳು ಹೆಚ್ಚಿನ ಅಧಿಕಾರ ನೀಡಿದರೆ ಅನಾಹುತವನ್ನು ಊಹಿಸಲು ಅಸಾಧ್ಯ. ಕೊಳಚೆ ನಿರ್ಮೂಲನ ಮಂಡಳಿ ಈ ಹಿಂದೆ ಇದ್ದ ಪ್ರತಿನಿಧಿ ಸದಸ್ಯರ ಸಂಖ್ಯೆಯು 5 ಕ್ಕೆ ಇಳಿಸಿದೆ, ಅಧಿಕಾರಿಗಳ ಸಂಖ್ಯೆಯನ್ನು 9 ಕ್ಕೆ ಏರಿಸಿದೆ. ಕೊಳಗೇರಿಗಳ ನಿರ್ಮೂಲನೆಗೆ ತೀರ್ಮಾನಿಸುವ ಅಧಿಕಾರಗಳಿದ್ದ ಮೇಲುಗೈ ಅಂದರೆ ಎ.ಸಿ.ಯಲ್ಲಿ ಬದುಕು ಸಾಗಿಸುವ ಅಧಿಕಾರಿಗಳು ಕೊಳಗೇರಿಗಳ ಸಮಸ್ಯೆಗಳಿಗೆ ಪರಿಹಾರ ನಿರ್ಣಾಯಕ ಪಾತ್ರ ಹೀಗಿದೆ ವಿಕೇಂದ್ರೀಕರಣ!

ತುಮಕೂರು

ಸ್ಲಂ ಸುಗ್ರೀವಾಜ್ಞೆಯ ವಿರುದ್ಧ ಸಮರಕ್ಕೆ ಸಜ್ಜು

ಸಿಐಟಿಯು, ಡಿಎಸ್‌ಎಸ್, ಡಿಎಸ್‌ಎಫ್ ಕೊಳಗೇರಿ ನಿವಾಸಿಗಳ ಹಿತರಕ್ಷಣಾ ಸಮಿತಿ ಜಂಟಿಯಾಗಿ 25.12.2001 ರಂದು ವಿಚಾರಸಂಕಿರಣ ನಡೆಸಿದೆ.

ನಂತರ ನಗರದ 26 ಸ್ಲಂಗಳಲ್ಲಿ ನಿರಂತರವಾಗಿ ಬೀದಿ ಬದಿ ಜಾಗೃತಿ ಸಭೆಗಳನ್ನು ನಡೆಸಿ ಸ್ಲಂಗಳನ್ನು ಒಕ್ಕಲೆಬ್ಬಿಸುವ ಸರ್ಕಾರದ ಹುನ್ನಾರವನ್ನು ತಿಳಿಹೇಳಿ, ಹೋರಾಟಕ್ಕೆ ಅಣಿಗೊಳಿಸಲಾಗುತ್ತಿದೆ. ಇದೇ 19 ರಂದು ಬೃಹತ್ ಪ್ರತಿಭಟನಾ ರ್‍ಯಾಲಿ ಸಿದ್ಧವಾಗುತ್ತಿದೆ.

ಸಾರ್ಕ್ ಶೃಂಗಸಭೆ ಮತ್ತು



ಪರಸ್ಪರ ಸಹಕಾರ ಬೆಸೆಂ

ಹರ್ಕಿಶನ್ ಸಿಂಗ್ ಸುಜಿ

ಭಾರತ, ಪಾಕಿಸ್ತಾನ, ಬಾಂಗ್ಲಾದಂತಹ ಒಟ್ಟು ನೆರೆಹೊರೆಯ ಏಳು ದೇಶಗಳುಳ್ಳ 'ಸಾರ್ಕ್' ಪರಸ್ಪರ ಸೌಹಾರ್ದತೆ, ಸಹಕಾರ ಬಲಗೊಳಿಸಬಲ್ಲ ವೇದಿಕೆ. ಆದರೆ ಇದರ ಪೂರ್ಣ ಸತ್ವ ಮತ್ತು ಸಾಧ್ಯತೆಗಳನ್ನು ಬಳಸುತ್ತಿಲ್ಲ. ಈಗ ನೆರೆಹೊರೆಯಲ್ಲಿ ದ್ವೇಷ ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ ಸಾರ್ಕ್‌ನ್ನು ಸಮರ್ಥವಾಗಿ ಬಳಸಬೇಕಿದೆ. ಕಠ್ಮಂಡುವಿನಲ್ಲಿ ಇತ್ತೀಚೆಗೆ ನಡೆದ ಸಾರ್ಕ್ ಸಮ್ಮೇಳನ ಮತ್ತು ನಂತರದ ಬೆಳವಣಿಗೆಗಳ ಬಗ್ಗೆ ವಿವರಿಸಿದ ಲೇಖನ

ಇತ್ತೀಚೆಗೆ ನೇಪಾಳದ ರಾಜಧಾನಿ ಕಠ್ಮಂಡುವಿನಲ್ಲಿ ಸೇರಿದ ದಕ್ಷಿಣ ಏಷ್ಯಾ ಪ್ರಾದೇಶಿಕ ಸಹಕಾರ ಸಂಘ (SAARC-ಸಾರ್ಕ್)ದ 11ನೇ ಶೃಂಗಸಭೆ ಒಂದು ಘೋಷಣೆಯನ್ನು ಅಂಗೀಕರಿಸಿದೆ.ಇದರಿಂದ ನಿಜವಾಗಿಯೂ ಈ ಪ್ರದೇಶದಲ್ಲಿ ಸಹಕಾರದ ಹೊಸಯುಗವನ್ನು ಆರಂಭಿಸುವುದು ಸಾಧ್ಯವಿದೆ. ಆದರೆ ಮೂಲಭೂತ ಸಂಗತಿಯೆಂದರೆ ಇದನ್ನು ಪ್ರಾಮಾಣಿಕವಾಗಿ ಅನುಷ್ಠಾನಕ್ಕೆ ತರಬೇಕಷ್ಟೆ. ಇದಕ್ಕಾಗಿ ಈ ಪ್ರದೇಶದ ಎಲ್ಲಾ ಎಡ ಮತ್ತು ಪ್ರಜಾಪ್ರಭುತ್ವವಾದಿ ಶಕ್ತಿಗಳು ಒತ್ತಡ ಹಾಕಬೇಕಾಗಿದೆ.

ಹೀಗೆ ಹೇಳಲು ಒಳ್ಳೆಯ ಕಾರಣಗಳಿವೆ. ಎರಡನೇ ಮಹಾಯುದ್ಧದ ನಂತರ ಯುದ್ಧದಿಂದ ತತ್ತರಿಸಿದ ಹಲವು ದೇಶಗಳ ಅನುಭವವೇನೆಂದರೆ ಅದರಿಂದ ಹೊರಬರಬೇಕಾದರೆ ಅಥವಾ ಸಮೃದ್ಧಿ ಹೊಂದಬೇಕಾದರೆ ನೆರೆದೇಶಗಳೊಂದಿಗೆ ಸಹಕಾರವಿಲ್ಲದೆ ಸಾಧ್ಯವಿಲ್ಲ ಎಂಬುದು. ಇದನ್ನು ಮೊದಲು ಆರಂಭಿಸಿದವರು ಪಶ್ಚಿಮ ಯುರೋಪಿನ ದೇಶಗಳು. ಅವರು 'ಯುರೋಪಿಯನ್ ಆರ್ಥಿಕ ಸಮುದಾಯ' ಅಥವಾ ಇಇಸಿ ರಚಿಸಿಕೊಂಡರು. ಅದು ನಂತರ 'ಯುರೋಪಿಯನ್ ಸಂಘ' ವಾಯಿತು. ಈಗ ಈ ಹೆಚ್ಚಿನ ದೇಶಗಳು ಒಂದೇ ನಾಣ್ಯವನ್ನು ಹೊಂದುವಂತಾಗಿದೆ.

ಇಂತಹ ಇನ್ನೊಂದು ಉದಾಹರಣೆಯೆಂದರೆ ದಕ್ಷಿಣ ಪೂರ್ವ ಏಶ್ಯನ್ ದೇಶಗಳ ಸಂಘ (ASEAN-ಆಸಿಯನ್). ಇದು ಈ ಪ್ರದೇಶದ ದೇಶಗಳ ಅಭಿವೃದ್ಧಿಯಲ್ಲಿ ಗಮನಾರ್ಹ ಪಾತ್ರವಹಿಸಿತು. ಇದೇ ರೀತಿ ಆಫ್ರಿಕನ್ ಐಕ್ಯತೆಯ ಸಂಘಟನೆ (ಏಆಎ) ಕೊಲ್ಲಿ ಸಹಕಾರ ಮಂಡಳಿ (GCC) ಇತ್ಯಾದಿ ಪ್ರಾದೇಶಿಕ ಸಹಕಾರದ ಇತರ ಉದಾಹರಣೆಗಳು. ಇವುಗಳಲ್ಲಿ ಇತ್ತೀಚಿನದೆಂದರೆ ಅಮೆರಿಕಾ, ಕೆನಡಾ ಮತ್ತು ಮೆಕ್ಸಿಕೋದ ನಾಫ್ಟಾ(NAFTA -ಉತ್ತರ ಅಮೆರಿಕ ಮುಕ್ತ ವ್ಯಾಪಾರ ಪ್ರದೇಶ). ಆದರೆ ಇಲ್ಲಿ ಅಮೆರಿಕಾದ ಪ್ರಾಬಲ್ಯ ಹೆಚ್ಚು.

ಈ ಪ್ರಾದೇಶಿಕ ಸಹಕಾರ ಸಂಘಟನೆಗಳ ಒಂದು ಮೂಲಭೂತ ಅಂಶವೆಂದರೆ ಈ ಸಂಘಟನೆಗಳ ಸ್ಥಾಪಕ ದೇಶಗಳ ನಡುವೆ ಗಂಭೀರ ಭಿನ್ನಾಭಿಪ್ರಾಯ ಬಂದರೆ ಅದು ಈ ಸಂಘಟನೆಗಳ ಕೆಲಸವನ್ನು ತಟ್ಟಲಿಲ್ಲ. ಪ್ರಾದೇಶಿಕ ಸಹಕಾರಕ್ಕೆ ಅದು ಅಡ್ಡಿಯಾಗಲು ಬಿಡಲಿಲ್ಲ. ಇಂಡೋನೇಶ್ಯಾ ಮತ್ತು ಮಲೇಶ್ಯಾಗಳ ನಡುವೆ ವಿಶ್ವ ವ್ಯವಹಾರಗಳ ಬಗ್ಗೆ ಭಿನ್ನಮತ ಇತ್ತು. ಆದರೂ ಅವರು ಪರಸ್ಪರ ಹಿತಾಸಕ್ತಿಯ ವಿಷಯಗಳಲ್ಲಿ ಒಟ್ಟು ಗೂಡಿ ಸಹಕರಿಸಿದವು. ಕೊನೆಗೆ ತಮ್ಮ ಗಡಿ ವಿವಾದಗಳನ್ನೂ ಪರಿಹರಿಸಿಕೊಂಡವು. ಹೀಗೆ ಈ ಬಹುರಾಷ್ಟ್ರೀಯ ಸಂಘಟನೆಗಳು ದ್ವಿಪಕ್ಷೀಯ ವಿವಾದಗಳಿಗೆ ಅವಕಾಶ ನೀಡದಿದ್ದರೂ, ಆ ವಿವಾದಗಳ ಮೈತ್ರಿಯುತ ಇತ್ಯರ್ಥಕ್ಕೆ ಆಧಾರವನ್ನು ಕಲ್ಪಿಸಿಕೊಡುತ್ತವೆ. ಇದು ಸಾರ್ಕ್ ದೇಶಗಳಿಗೆ ಉಪಯುಕ್ತ, ಅದರಲ್ಲೂ ಭಾರತ ಮತ್ತು ಪಾಕಿಸ್ತಾನಗಳಿಗೆ.

ಸಾರ್ಕ್‌ನ ಮಹತ್ವ

ಇಂತಹ ಒಂದು ಅಂತರ್‌ರಾಷ್ಟ್ರೀಯ ಸನ್ನಿವೇಶದಲ್ಲಿ ದಕ್ಷಿಣ ಏಶ್ಯಾದ ಏಳು ದೇಶಗಳು ಪ್ರಾದೇಶಿಕ ಸಹಕಾರಕ್ಕಾಗಿ ಜತೆಗೂಡಿದಾಗ ಸಾರ್ಕ್ ಅಸ್ತಿತ್ವಕ್ಕೆ ಬಂದು ಈ ಪ್ರದೇಶದ ಜನಗಳ ಒಂದು ಆಕಾಂಕ್ಷೆ ಈಡೇರಿತು. ಈ ಬಗ್ಗೆ ಮುತುವರ್ಜಿ ವಹಿಸಿದ್ದು ಆಗಿನ ಬಾಂಗ್ಲಾದೇಶದ ಅಧ್ಯಕ್ಷ ಜನರಲ್ ಹೆಚ್.ಎಂ.ಇರ್ಷದ್. ಬಾಂಗ್ಲಾದೇಶ, ಭೂತಾನ್, ಭಾರತ, ಮಾಲ್ದೀವ್ಸ್, ನೇಪಾಳ, ಪಾಕಿಸ್ತಾನ ಮತ್ತು ಶ್ರೀಲಂಕಾ ಇವೇ ಆ ಏಳು ದೇಶಗಳು. ಒಂದೊಮ್ಮೆ ನಜೀಬುಲ್ಲಾ ನೇತೃತ್ವದಲ್ಲಿದ್ದ ಅಫಘಾನಿಸ್ತಾನವೂ ಇದರ ಸದಸ್ಯತ್ವಕ್ಕೆ ಅರ್ಜಿ ಹಾಕಿತ್ತು. ಅದನ್ನು ತಿರಸ್ಕರಿಸಲಾಯಿತು. ಇರಲಿ, ಅದೊಂದು ಬೇರೆ ಕಥೆ.

ಸಾರ್ಕ್‌ನಲ್ಲಿ ಹಲವು ಸಾಧ್ಯತೆಗಳಿವೆ. ಅದೊಂದು ಪ್ರಾದೇಶಿಕ ಸಹಕಾರದ ಸಮರ್ಥ ಘಟಕವಾಗಿ ವಿಶ್ವದ ಶಾಂತಿ, ಸಮೃದ್ಧಿಯಲ್ಲಿ ದೊಡ್ಡ ಪಾತ್ರ ವಹಿಸಬಲ್ಲದು. ವಿಶ್ವದ ಕಾಲುಭಾಗ ಜನಸಂಖ್ಯೆ ಈ ಪ್ರದೇಶದಲ್ಲಿದೆ. ಅಪಾರ ಮಾನವ ಸಂಪನ್ಮೂಲ ಇಲ್ಲಿದೆ. ನಮ್ಮ ಲಕ್ಷಾಂತರ ವಿಜ್ಞಾನಿಗಳು, ಮಧ್ಯಪೂರ್ವ ಮತ್ತಿತರ ಕಡೆಗಳಲ್ಲಿ ದುಡಿಯುತ್ತಿದ್ದಾರೆ. ಅಲ್ಲದೆ ಈ ಪ್ರದೇಶ ವಿಪುಲ ಪ್ರಾಕೃತಿಕ ಸಂಪನ್ಮೂಲಗಳನ್ನು ಹೊಂದಿದೆ. ಖನಿಜಗಳು, ಕೃಷಿ ಮತ್ತು ಅರಣ್ಯ ಉತ್ಪನ್ನಗಳು ಇತ್ಯಾದಿಗಳಿಗೆ ಬೇರೆಯವರ ಮೇಲೆ ಅವಲಂಬಿಸುವ ಅಗತ್ಯವಿಲ್ಲ.



ಇದು ಬಹಳ ಮಹತ್ವದ್ದು. ಏಕೆಂದರೆ ಇಷ್ಟೆಲ್ಲಾ ನೈಸರ್ಗಿಕ ಮಾನವ ಸಂಪನ್ಮೂಗಳಿದ್ದರೂ ಈ ಪ್ರದೇಶದ ದೇಶಗಳು ವಿಪರೀತ ಬಡತನದ ದವಡೆಯಲ್ಲಿವೆ. ಭಾರತವನ್ನು ಬಡ ಜನಗಳಿರುವ ಶ್ರೀಮಂತ ದೇಶ ಎನ್ನಲಾಗುತ್ತದೆ. ಇದನ್ನು ಈ ಇಡೀ ಪ್ರದೇಶದ ಬಗ್ಗೆಯೂ ಹೇಳಬಹುದು. ಸಹರಾ ಮರುಭೂಮಿಯ ಕೆಳಗೂ ಆಫ್ರಿಕನ್ ದೇಶಗಳನ್ನು ಬಿಟ್ಟರೆ ಬಹುಶಃ ಅತಿ ಕೆಳಗಿನ ಮಾನವ ಅಭಿವೃದ್ಧಿ ಸೂಚ್ಯಂತ ಹೊಂದಿರುವುದು ಈ ಪ್ರದೇಶವೇ! ನಾವು ವಿಶ್ವದಲ್ಲೇ ಅತಿ ಹೆಚ್ಚು ಸಂಖ್ಯೆಯ ನಿರಕ್ಷರಿಗಳನ್ನು ಹೊಂಧಿದ್ದೇವೆ. ಆರೋಗ್ಯ ವ್ಯವಸ್ಥೆ ಮತ್ತು ನೈರ್ಮಲ್ಯದಲ್ಲಿ ನಮ್ಮದು ಶೋಚನೀಯ ದಾಖಲೆ, ಜತೆಗೆ ಅತ್ಯಂತ ವ್ಯಾಪಕವಾಗಿರುವ ವಸತಿ ಹೀನತೆ, ಎಷ್ಟೆಂದರೆ ಸ್ವಾತಂತ್ರ್ಯದ ನಂತರ ಅರ್ಧ ಶತಮಾನ ಕಳೆದರೂ ದಕ್ಷಿಣ ಏಶ್ಯಾದ ದೇಶಗಳು ತಮ್ಮ ಜನರಿಗೆ ಕುಡಿಯಲು ಯೋಗ್ಯವಾದ ನೀರನ್ನು ಒದಗಿಸಲಾಗಿಲ್ಲ.

ಸಹಕಾರದ ಅಭಾವವೂ ಕಾರಣ

ಈ ಸಮಸ್ಯೆಯ ಮೂಲ ಇರುವುದು ಸಂಪನ್ಮೂಲದ ಅಭಾವದಲ್ಲಲ್ಲ. ಒಂದೆಡೆ ನಾವು ನಮ್ಮ ಸಂಪನ್ಮೂಲಗಳನ್ನು ವಿವೇಕಯುತವಾಗಿ, ಸಮಾನತಾ ಪೂರ್ವಕವಾಗಿ ಬಳಸುವಲ್ಲಿ ವಿಫಲರಾಗಿದ್ದೇವೆ. ಜತೆಗೆ ದಕ್ಷಿಣ ಏಶ್ಯಾದ ಹಲವು ದೇಶಗಳು ಭಯೋತ್ಪಾದನೆಯ/ಆಂತರಿಕ ಭಿನ್ನಾಭಿಪ್ರಾಯದ ಪಿಡುಗನ್ನು ಎದುರಿಸುತ್ತಿದೆ. ಆದರೆ ಪ್ರಾದೇಶಿಕ ಸಹಕಾರದ ಶೋಚನೀಯ ಪರಿಸ್ಥಿತಿಯೂ ಇದಕ್ಕೆ ಒಂದು ಕಾರಣ. ಏಕೆಂದರೆ ಇಂತಹ ಸಹಕಾರ ಇದ್ದಿದ್ದರೆ ಹಣಕಾಸು ಸಂಪನ್ಮೂಲಗಳ ತೊಂದರೆಯನ್ನು ಮೀರಿ ನಿಲ್ಲಲು ಸಾಧ್ಯವಾಗುತ್ತಿತ್ತು.

ಈಗಲೂ ಇರುವ ಶೋಚನೀಯ ಸ್ಥಿತಿಯೆಂದರೆ ಸಾರ್ಕ್ ಅನ್ನು ಚೈತನ್ಯಶೀಲ ಸಂಘಟನೆಯಾಗಿ ಮಾಡುವಲ್ಲಿ ನಾವು ವಿಫಲರಾಗಿದ್ದೇವೆ. ಇಎ, ಆಸಿಯನ್, OAU ಪ್ರತಿವರ್ಷ ತಮ್ಮ ಸಭೆ ನಡೆಸಿದರೆ, ಸಾರ್ಕ್ 16 ವರ್ಷಗಳಲ್ಲಿ ನಡೆಸಿದ್ದು 11 ಸಭೆಗಳನ್ನಷ್ಟೇ ಇತ್ತೀಚಿನ ಶೃಂಗಸಭೆಯೂ ಎರಡು ವರ್ಷಗಳ ನಂತರ ನಡೆದಿದೆ.

ಸಾರ್ಕ್ ರಚನೆಯಾದ ನಂತರ ಒಂದೆಡೆ ಆರ್ಥಿಕ ಮತ್ತು ತಾಂತ್ರಿಕರಂಗಗಳಲ್ಲಿ ಸಹಕಾರಕ್ಕೆ, ಇನ್ನೊಂದೆಡೆ ಸಾಂಸ್ಕೃತಿಕ ರಂಗದಲ್ಲಿ ಸಹಕಾರಕ್ಕೆ ಹಲವು ಸಮಿತಿಗಳನ್ನು, ಆಯೋಗಗಳನ್ನು ರಚಿಸಲಾಗಿದೆ. ಆದರೆ ಅವು ಎಂದೂ ಪೂರ್ಣ ಪ್ರಮಾಣದಲ್ಲಿ ಕೆಲಸ ಮಾಡಿಲ್ಲ. ಒಂದು ಉದಾಹರಣೆಯೆಂದರೆ 1992 ರಲ್ಲಿ ಢಾಕಾ ಶೃಂಗಸಭೆಯಲ್ಲಿ ದಕ್ಷಿಣ ಏಶ್ಯಾ ಬಡತನದ ಮೇಲಿನ ಆಯೋಗವನ್ನು ರಚಿಸಲಾಯಿತು. ಆದರೆ ವಿಶ್ವದ 50 ಕೋಟಿ ಬಡವರು ಈ ಪ್ರದೇಶದಲ್ಲಿದ್ದರೂ ಈ ಆಯೋಗದ ಕೆಲಸ ಆರಂಭವಾಗಲೇ ಇಲ್ಲ. ಅದೇ ರೀತಿ ಒಂದು ಹಂತದಲ್ಲಿ 'ದಕ್ಷಿಣ ಏಶ್ಯಾ ವಿಶೇಷ ವ್ಯಾಪಾರ ಒಪ್ಪಂದ' (SAPTA) ಏರ್ಪಟ್ಟಿತು. ಆಗಿನ ನಿರ್ಧಾರವೆಂದರೆ ಅಂತಿಮವಾಗಿ ಒಂದು 'ದಕ್ಷಿಣ ಏಶ್ಯಾ ಮುಕ್ತ ವ್ಯಾಪಾರ ಪ್ರದೇಶ' (SAFTA) ತಲುಪುವುದು. ಆದರೆ ಈ ಕನಸು ಇನ್ನೂ ಈಡೇರಿಲ್ಲ. ಆದ್ದರಿಂದ 'ದಕ್ಷಿಣ ಏಶ್ಯಾ ಆರ್ಥಿಕ ಸಂಘ'ಈ ಅಂತಿಮ ಗುರಿಯನ್ನು ಎಂದು ತಲುಪುತ್ತೇವೋ ಯಾರಿಗೂ ಗೊತ್ತಿಲ್ಲ.


ನಿಜ ಸಂಗತಿ ಒಪ್ಪಿಕೊಳ್ಳುವುದಾದರೆ ಈ ಶೋಚನೀಯ ಸ್ಥಿತಿಗೆ ಭಾರತ ಮತ್ತು ಪಾಕಿಸ್ತಾನಗಳೆರಡೂ ಜವಾಬ್ದಾರಿ ಹೊರಬೇಕು. ಇವು ಈ ಪ್ರದೇಶದ ಎರಡು ದೊಡ್ಡ ದೇಶಗಳಷ್ಟೇ ಅಲ್ಲ. ಈ ಎರಡು ದೇಶಗಳ ದ್ವಿಪಕ್ಷೀಯ ವಿವಾದಗಳು ತೀವ್ರಗೊಂಡಾಗಲೆಲ್ಲಾ ಸಾರ್ಕ್ ಶೃಂಗ ಅದಕ್ಕೆ ಮೊದಲ ಬಲಿಯಾಯಿತು. ಇದು ಬಹುದೇಶಿಯ ವೇದಿಕೆಗಳ ನೀತಿಗಳಿಗೆ ವಿರುದ್ಧವಾದದ್ದು, ಅದರಲ್ಲೂ ಪ್ರಾದೇಶಿಕ ಸಹಕಾರದ ವೇದಿಕೆಗಳ ನೀತಿಗಳಿಗೆ.

ಸ್ವಾಗತಾರ್ಹ ಘೋಷಣೆ

ಆದರೂ 11ನೇ ಸಾರ್ಕ್ ಶೃಂಗಸಭೆ ಯಾವುದೇ ಪರಸ್ಪರ ದೂಷಣೆಗಳಿಲ್ಲದೆ ಯಶಸ್ವಿಯಾಗಿ ಕೊನೆಗೊಂಡಿರುವುದು ಸಂತೋಷಕರ ಸಂಗತಿ. ಅದು ಅಂಗೀಕರಿಸಿದ ಘೋಷಣೆ ಈ ದೇಶಗಳ ನಡುವೆ ವಿವಿಧ ರಂಗಗಳಲ್ಲಿ ಭವಿಷ್ಯದಲ್ಲಿ ಸಹಕಾರಕ್ಕೆ ಆಧಾರವಾಗಬಲ್ಲದು. ಶೃಂಗಸಭೆ ನಡೆಯುವ ಮೊದಲು ವಿಶೇಷವಾಗಿ ಡಿಸೆಂಬರ್ 13 ರಂದು ಭಾರತೀಯ ಸಂಸತ್ತಿನ ಮೇಲೆ ಧಾಳಿಯಿಂದಾಗಿ ಸಭೆಯ ಫಲಿತಾಂಶದ ಬಗ್ಗೆ ಸಂದೇಶಗಳಿದ್ದವು. ಆದರೆ ಎಲ್ಲವೂ ಚೆನ್ನಾಗಿ ನಡೆಯಿತು. ಕಠ್ಮಂಡುನಲ್ಲಿ ಯಾರು ಏನು ಹೇಳಿದರು ಎಂಬುದರ ವಿವರಕ್ಕೆ ಹೋಗದೆ ಹೇಳುವುದಾದರೆ ನಾವು ಈ ಘೋಷಣೆ ದನಿಯನ್ನು ಸ್ವಾಗತಿಸದಿರಲು ಸಾಧ್ಯವಿಲ್ಲ.

ಈ ಪ್ರದೇಶಗಳ ಜನರ ಸಮಸ್ಯೆಗಳನ್ನು ಪರಿಹರಿಸಿಕೊಳ್ಳುವ ಜಂಟಿ ಪ್ರಯತ್ನದಲ್ಲಿ ಏಳೂ ಸಾರ್ಕ್ ದೇಶಗಳು ಸಮಾನ ಮತ್ತು ಸಾರ್ವಭೌಮ ಭಾಗೀದಾರರು ಎಂಬ ನೀತಿಯನ್ನು ಈ ಘೋಷಣೆ ಪುನರುಚ್ಚರಿಸಿದೆ.

...ಂತರ



...ಂಬೇಕಾಗಿದೆ

...ವುದೇ ಒಂದು ದೇಶದ ಆಂತರಿಕ
...ವಣಿಗೆಗಳನ್ನು ಉಪಯೋಗಿಸಿಕೊಂಡು
...ರ್ಕ್ ಪ್ರಕ್ರಿಯೆಯನ್ನು
...ವ್ಯಸ್ತಗೊಳಿಸುವುದನ್ನು ಒಪ್ಪಲು ಸಾಧ್ಯವಿಲ್ಲ
...ದು ಅದು ಹೇಳಿದೆ. ಸಾರ್ಕ್ ಮೂಲಕ
...ದೇಶಿಕ ಸಹಕಾರಕ್ಕೆ ಬದ್ಧತೆಯನ್ನು
...ರುಚ್ಚರಿಸುತ್ತಾ ಈ ಘೋಷಣೆ ಸಾರ್ಕ್‌ನ
...ಯ ಧೋರಣೆಗಳ ಈಡೇರಿಕೆಗಾಗಿ ಎಲ್ಲರೂ
... ಕಾರ್ಯತಂತ್ರ ರೂಪಿಸಲು ಪ್ರತಿವರ್ಷ
...ಗಸಮ್ಮೇಳನ ನಡೆಸುವ ಮಹತ್ವವನ್ನು ಒತ್ತಿ
...ಳಿದೆ. ಪ್ರಾದೇಶಿಕ ಸಹಕಾರದ ಫಲಗಳನ್ನು
...ನಾತ್ಮಕವಾಗಿ ಹಂಚಿಕೊಳ್ಳಲು
...ರುತ್ನಿಸಲಾಗುವುದು.
... ಪ್ರತಿಯೊಂದು ಸದಸ್ಯ ದೇಶದಲ್ಲಿ ಒಂದು
...ಷ್ಟ ಸಾಮಾಜಿಕ, ಆರ್ಥಿಕ ಬೆಳವಣಿಗೆ
...ಸಿ ಉಳಿಸಿಕೊಳ್ಳಲು ಪ್ರಯತ್ನಿಸಲಾಗುವುದು
...ದು ಘೋಷಣೆ ಸಾರಿದೆ. ಎಲ್ಲರ
...ಸಕ್ತಿಗಳ ಪ್ರಶ್ನೆಗಳ ಮೇಲೆ ಅಂತರ್‍ರಾಷ್ಟ್ರೀಯ
...ವಿಕೆಗಳಲ್ಲಿ ಒಂದು ಸಮಾನ ನಿಲುವು
...ಪಿಸಲು ಪ್ರಯತ್ನಿಸಲಾಗುವುದು ಎಂದೂ
... ಹೇಳಿದೆ. ಇದಕ್ಕೆ ಕೊಟ್ಟಿರುವ
...ಹರಣೆಯೆಂದರೆ ದೋಹಾದ ಡಬ್ಲುಟಿಓ
...ಯ ಮೊದಲು ಸಾರ್ಕ್ ವಾಣಿಜ್ಯ
...ತ್ರಿಗಳ ಸಭೆ. ಇದರಿಂದ ದೋಹಾದಲ್ಲಿ
...ದು ಸಮಾನ ನಿಲುವು ವಿಕಾಸಗೊಳಿಸಲು
...ಳಷ್ಟು ನೆರವೇನೂ ಸಿಗದಿದ್ದರೂ ಈ
...ರುತ್ನವೇ ಗಮನಾರ್ಹ.
...ವ್ಯಾಪಾರ-ಉದ್ದಿಮೆ, ವಿಜ್ಞಾನ-ತಂತ್ರಜ್ಞಾನ,
...-ತರಬೇತಿ, ಪ್ರವಾಸೋದ್ಯಮ,
...ಮಾಜಿಕ-ಸಾಂಸ್ಕೃತಿಕ ರಂಗಗಳಲ್ಲಿ, ಈ
...ಶದಲ್ಲಿ ಮಹಿಳೆಯರ ಮತ್ತು ಮಕ್ಕಳ
...ಗಳ ಮೇಲೆ, ಎಲ್ಲರೂ ಮುಖ್ಯವಾಗಿ
...ತನ ನಿವಾರಣೆಯಲ್ಲಿ ಸಹಕಾರ ಬೆಳೆಸುವ
...ರ್ಧರವನ್ನು ಘೋಷಣೆ ವ್ಯಕ್ತಪಡಿಸಿದೆ.
...ಸ್ಯ ದೇಶಗಳು ಒಂದು ಸ್ವತಂತ್ರ 'ದಕ್ಷಿಣ
... ಬಡತನ ನಿವಾರಣೆ ಆಯೋಗ'ವನ್ನು
... ರಚಿಸಲು ನಿರ್ಧರಿಸಿದವು. ನೇಪಾಳ
...ರ ಸಂಯೋಜಕರು ಹಾಗೂ ಬಾಂಗ್ಲಾದೇಶ
... ಸಂಯೋಜಕರು. ಈ ಆಯೋಗ 'ಬಡತನ
...ರಣೆಯಲ್ಲಿ ಸಹಕಾರದ ಪ್ರಗತಿಯನ್ನು
...ಮರ್ಶಿಸುತ್ತದೆ ಮತ್ತು ಸೂಕ್ತ ಹಾಗೂ
...ಣಾಮಕಾರಿ ಕ್ರಮಗಳನ್ನು ಸೂಚಿಸುತ್ತದೆ'.

...ಲ ಆಶಯಗಳಾಗಿ ಉಳಿಯದಿರಲಿ

...ಸಾರ್ಕ್ ಶೃಂಗದಲ್ಲಿನ ಈ ಎಲ್ಲಾ
...ರ್ಧರಗಳನ್ನು ಪ್ರಾಮಾಣಿಕವಾಗಿ ಆಚರಣೆಗೆ
...ರೆ ಈ ಇಡೀ ಪ್ರದೇಶವನ್ನು ಹೊಸ
...ರಕ್ಕೆ ಏರಿಸಬಲ್ಲದು ಎಂಬುದು ಸ್ಪಷ್ಟ. ಆದರೆ
...ನ ಅನುಭವಗಳಿಂದ ಹೇಳುವುದಾದರೆ
... ಒಂದು ದೊಡ್ಡ 'ರೆ'. ದೊಡ್ಡ

ವಿಷಯಗಳನ್ನು ಬಿಡಿ, ಹಿಂದಿನ ಘೋಷಣೆಗಳ ಸಣ್ಣ ವಿಷಯಗಳೂ ಈಡೇರಲಿಲ್ಲ. ಉದಾಹರಣೆಗೆ, ಅನೈತಿಕ ವ್ಯವಹಾರಗಳಿಗೆ ಮಹಿಳೆಯರ, ಮಕ್ಕಳ ಸಾಗಾಟ ಬಹಳ ವರ್ಷಗಳಿಂದ ಆತಂಕದ ವಿಷಯವಾಗಿದೆ. ಆದರೆ ಅದನ್ನು ನಿಲ್ಲಿಸಲು ದೃಢ ಕ್ರಮಗಳು ಇನ್ನೂ ಬಂದಿಲ್ಲ.

ಅದೇನೇ ಇರಲಿ, ದಕ್ಷಿಣ ಏಶ್ಯಾದ ಮುಖಂಡರುಗಳು ಪ್ರೌಢತೆ, ಮುತ್ಸದ್ದಿತನ ಪ್ರದರ್ಶಿಸಿ ಕಾಠ್ಮಂಡು ಘೋಷಣೆಯನ್ನು ಆಚರಣೆಗೆ ತರಲು ಪರಿಣಾಮಕಾರಿ ಕ್ರಮಗಳನ್ನು ಕೈಗೊಳ್ಳುತ್ತಾರೆ ಎಂದು ಆಶಿಸಬೇಕು. ಯಾವುದೇ ಎರಡು ದೇಶಗಳ ನಡುವಿನ ದ್ವಿಪಕ್ಷೀಯ ಸಮಸ್ಯೆಗಳೇನೇ ಇದ್ದರೂ ಅವು ಸಾರ್ಕ್ ಪ್ರಕ್ರಿಯೆಯನ್ನು ಛಿದ್ರಗೊಳಿಸಲು ಬಿಡಬಾರದು.

ನಿರ್ದಿಷ್ಟವಾಗಿ ಭಾರತ ಮತ್ತು ಪಾಕಿಸ್ತಾನ ಪ್ರಾದೇಶಿಕ ಸಹಕಾರದ ಅಗತ್ಯಗಳಿಗೆ ವಿಶೇಷ ಗಮನ ನೀಡಬೇಕು. ಸಾರ್ಕ್ ಪ್ರಕ್ರಿಯೆಗೆ ನೇತೃತ್ವ ನೀಡಬೇಕು. ಈ ಅರ್ಥದಲ್ಲಿ ಭಾರತದ ಪ್ರಧಾನ ಮಂತ್ರಿಗಳು ಮತ್ತು ವಿದೇಶಾಂಗ ಮಂತ್ರಿಗಳ ವರ್ತನೆಗಳು ಅಲ್ಲಿ ಅನುಕೂಲಕರವಾಗಿರಲಿಲ್ಲ. ಪಾಕಿಸ್ತಾನದ ಅಧ್ಯಕ್ಷ ಮುಶರ್ರಫ್ ಶೃಂಗಸಭೆಯ ಹಿನ್ನೆಲೆಯಲ್ಲಿ ದ್ವಿಪಕ್ಷೀಯ ಮಾತುಕತೆಗಳಿಗೆ ಸಿದ್ಧವಿದ್ದರೂ ವಾಜಪೇಯಿ ಅವರೊಡನೆ ಮಾತನಾಡಲೂ ಸಿದ್ಧವಿರಲಿಲ್ಲ. ಮುಶರ್ರಫ್ ಕೈ ಮುಂದೆ ಮಾಡಿದ ಮೇಲಷ್ಟೇ ವಾಜಪೇಯಿ ಕೈ ಮುಂದೆ ಮಾಡಿ ಕುಲುಕಿದರು. ನಿರ್ದಿಷ್ಟವಾಗಿ ಏನೂ ನಡೆಯಲಿಲ್ಲ.

ಕಳೆದ ವಾರ ನಾವು ಹೇಳಿದಂತೆ ಈ ಪ್ರದೇಶದಲ್ಲಿ ಪರಿಸ್ಥಿತಿ ಗಂಭೀರವಾಗಿದೆ. ಆಕಾಶದಲ್ಲಿ ಯುದ್ಧದ ಮೋಡಗಳು ಆವರಿಸಿವೆ. ಖಂಡಿತಾ ಭಾರತ ಭಯೋತ್ಪಾದನೆಯ ಬೆದರಿಕೆಯನ್ನು ಎದುರಿಸುತ್ತಿದೆ. ಇದರ ವಿರುದ್ಧ ದೃಢ ಕ್ರಮಗಳನ್ನು ಕೈಗೊಳ್ಳುವ ಹಕ್ಕು ಅದಕ್ಕಿದೆ. ಆದರೆ ಮುಶರ್ರಫ್ ಕೂಡಾ ಸಂತೋಷಕರ ಸ್ಥಿತಿಯಲ್ಲೇನೂ ಇಲ್ಲ. ಅವರು ಒಂದೆಡೆ ದೇಶೀ ಮೂಲಭೂತವಾದಿಗಳನ್ನು ಎದುರಿಸುತ್ತಿದ್ದಾರೆ. ಇನ್ನೊಂದೆಡೆ ವಿಶ್ವಸಾರ್ವಜನಿಕಾಭಿಪ್ರಾಯವನ್ನು ಎದುರಿಸುತ್ತಿದ್ದಾರೆ. ಅವರು ಕಾಶ್ಮೀರದ ಬಗ್ಗೆ ಕೆಲವು ಮೂರ್ತ ಕ್ರಮಗಳನ್ನು ಕೈಗೊಳ್ಳಬಹುದು. ಅದರಿಂದ ಭಾರತ-ಪಾಕಿಸ್ತಾನ ಸಂಬಂಧಗಳಲ್ಲಿ ಒಂದು ಬದಲಾವಣೆ ಬರಬಹುದು ಎಂಬ ವರದಿಗಳಿವೆ. ಇಲ್ಲಿರುವ ಅಪಾಯವೆಂದರೆ ಮುಶರ್ರಫ್ ಪದಚ್ಯುತಿಯಾಗಿ ಒಂದು ಕಟ್ಟಾ ಮೂಲಭೂತವಾದಿ -ಪರ ಆಡಳಿತ ಪಾಕಿಸ್ತಾನದಲ್ಲಿ ಅಧಿಕಾರಕ್ಕೆ ಬಂದರೆ ಈ ಇಡೀ ಪ್ರದೇಶದಲ್ಲಿನ ಪರಿಸ್ಥಿತಿ ವಿಪರೀತ ಹದಗೆಡಬಹುದು. ಇದು ಭಾರತಕ್ಕೂ ಒಳ್ಳೆಯದಲ್ಲ. ಈ ಇಡೀ ಪ್ರದೇಶಕ್ಕೂ ಒಳ್ಳೆಯದಲ್ಲ. ಭಾರತ-ಪಾಕಿಸ್ತಾನ ಸಂಬಂಧಗಳು ಮತ್ತು ಪ್ರಾದೇಶಿಕ ಸಹಕಾರ ಕುರಿತಂತೆ ಒಂದು ಪ್ರಜ್ಞಾಶೀಲ ನಿಲುವು ವಿಕಾಸಗೊಳಿಸಲು ಭಾರತ ಸರಕಾರ ಈ ಎಲ್ಲಾ ಅಂಶಗಳನ್ನು ಪರಿಶೀಲಿಸಬೇಕಾಗುತ್ತದೆ.

ಇಲ್ಲಿ ವಿವಿಧ ವರ್ಗ ಮತ್ತು ಸಾಮೂಹಿಕ ಸಂಘಟನೆಗಳ ಪಾತ್ರ ಮಹತ್ವದ್ದಾಗುತ್ತದೆ. ನಿಜ ಸಂಗತಿಯೆಂದರೆ ಕಾಠ್ಮಂಡು ಘೋಷಣೆಯಲ್ಲಿ ಎತ್ತಿದ ವಿವಿಧ ಪ್ರಶ್ನೆಗಳನ್ನು ಆಯಾಯ ರಾಷ್ಟ್ರೀಯ ಸರಕಾರಗಳಿಗೇ ಬಿಟ್ಟರೆ ಏನಾದರೂ ಆಗುವ ಸಂಭವ ಕಡಿಮೆ. ಆದ್ದರಿಂದ ಜನಗಳು ಮತ್ತು ಅವರ ಸಂಘಟನೆಗಳು ಮಧ್ಯಪ್ರವೇಶಿಸಿ ಈ ಪ್ರಶ್ನೆಗಳನ್ನು ತಮ್ಮ ದೈನಂದಿನ ಕಾರ್ಯಾಚರಣೆ, ಕಾರ್ಯಕ್ರಮಗಳ ಭಾಗವಾಗಿರಬೇಕು. ಆಗ ಮಾತ್ರವೇ ಈ ಘೋಷಣೆಯಲ್ಲಿ ಎತ್ತಿದ ಪ್ರಶ್ನೆಗಳು ಕೇವಲ ಆಶಯಗಳಾಗಿಯೇ ಉಳಿದಯದಂತೆ ನೋಡಿಕೊಳ್ಳಬಹುದು. ○

...ಜೀವನಾಂಶ ಇಲ್ಲವಾಯ್ತು...

ಪುಟ 3 ರಿಂದ

ಮೀರಿಸುತ್ತಿದೆ.

ಅಧೇ ಜಿಲ್ಲೆಯ ಬೆಳಗುಪ್ಪಾ ಮಂಡಲದ ಗಂಗಾವರಂ ಹಳ್ಳಿಯ ಭೂರಹಿತ ಕುಟುಂಬದ ಮಂಜುಳಾರ ಕಥೆ ಇನ್ನೊಂದು. 10 ನೇ ತರಗತಿಯಲ್ಲಿ ಎಲ್ಲರಿಗಿಂತ ಹೆಚ್ಚು ಶೇ.68 ರಷ್ಟು ಅಂಕಗಳನ್ನು ಇಂಗ್ಲಿಷ್‌ನಲ್ಲಿ ಆಕೆ ಪಡೆದಿದ್ದಾಳೆ, ಒಟ್ಟಾರೆ ಪ್ರಥಮ ದರ್ಜೆಯಲ್ಲಿ ಉತ್ತೀರ್ಣಳಾಗಿದ್ದಾಳೆ. ಮುಂದೆ ಓದಬೇಕೆಂಬ ಹಂಬಲ, ಆದರೆ ಕುಟುಂಬವೇ ಭೂಹೀನ ಕೂಲಿಕಾರರ ಕುಟುಂಬ, ನಡುವೆ ತಂದೆ ತೀರಿಕೊಂಡರು, ಮನೆ ನಡೆಸುವ ತಾಯಿಯ ಕಾಯಕಕ್ಕೆ ಸಹಕರಿಸಲು ತಾನು ಸಹಾ ಕೂಲಿಗಿಳಿದಿದ್ದಾಳೆ. 9ನೇ ತರಗತಿಯಲ್ಲಿ ಓದುತ್ತಿರುವ ತಂಗಿ 'ಶೈಲಜಾ' ಚೆನ್ನಾಗಿ ಓದಲೆಂದು, ಸಹಕಾರಕ್ಕೆ ನಿಂತಿದ್ದಾಳೆ. ನಾನು ಓದಬೇಕು ಆದರೆ ಏನು ಮಾಡುವುದು? ಎಂಬ ಪ್ರಶ್ನೆ ಆಕೆಯದು.

ತೆಲಂಗಾಣದ ಮೆಹಬೂಬ್‌ನಗರದ ಪರಿಸ್ಥಿತಿ ಏನೂ ಭಿನ್ನವಲ್ಲ. ಮಂಡಲ ಕೇಂದ್ರವಾದ ಗನಪುರದ, ಬಿ.ತಿರುಪತಯ್ಯ, PUC ಹಂತದಲ್ಲಿ ಶಿಕ್ಷಣ ತ್ಯಜಿಸಿದ, ತಾನು ಓದುತ್ತಿದ್ದ ಸರ್ಕಾರಿ ಕಿರಿಯ ಕಾಲೇಜಿನ ಪ್ರತಿ ಮೂರರಲ್ಲಿ ಒಬ್ಬರು ತ್ಯಜಿಸಿದ್ದಾರೆ! ಎಂದು ಹೇಳುತ್ತಾನೆ ಆತ. ಶಾಲೆ ತ್ಯಜಿಸುವವರ ಸಂಖ್ಯೆಯೂ ಸುತ್ತಾ ಮುತ್ತಾ ಹೆಚ್ಚಳವಾಗಿದೆ, ಎಲ್ಲಾ ತಮ್ಮ ತಂದೆ-ತಾಯಿಗಳಿಗೆ ದುಡಿಮೆಯಲ್ಲಿ ಸಹಕರಿಸಲೆಂದು, ಕೃಷಿ ಸಂಕಷ್ಟದಲ್ಲಿರುವ ಕಾರಣ ಕೂಲಿಯೂ ಸಿಗುತ್ತಿಲ್ಲ. ಪರಿಣಾಮವಾಗಿ ಸ್ಕಾಲರ್‌ಶಿಪ್ ಪಡೆಯುತ್ತಿರುವ ವಿದ್ಯಾರ್ಥಿಗಳು ಸಹಾ ಶಾಲೆ ಬಿಡುತ್ತಿದ್ದಾರೆ.

ಗಾಣಪುರದ ಮಾಜಿ ಸರಪಂಚ ಕೆ.ರಮೇಶ್ ಹೇಳುವ ಪ್ರಕಾರ "ಬಹಳಷ್ಟು ಜನ ಕೃಷಿ-ಕಾರ್ಮಿಕರು, ಕೂಲಿ ಇಲ್ಲದ ಕಾರಣ ಬೇರೆ ಊರುಗಳಿಗೆ ಗುಳೆ ಹೋಗುತ್ತಿದ್ದಾರೆ. ಗುಳೆ ಹೋಗುವಾಗ ತಮ್ಮೊಂದಿಗೆ ದುಡಿಮೆಗೆಂದು ಹಿರಿ ಮಕ್ಕಳನ್ನು ಸಹಾ ಕರೆದೊಯ್ಯುತ್ತಾರೆ. ಹೆಂಡ್ತಿ, ಗಂಡ, ದೊಡ್ಡ ಮಕ್ಕಳು ಎಲ್ಲಾ ಹೋಗುವಾಗ ಸಣ್ಣ ಮಕ್ಕಳು ಹೇಗೆ ಊರಲ್ಲಿರುತ್ತಾರೆ? ಹಾಗಾಗಿ ಮಕ್ಕಳೆಲ್ಲಾ ಶಾಲೆ ಬಿಟ್ಟು, ತಂದೆ-ತಾಯಿಗಳೊಂದಿಗೆ ವಲಸೆ ಹೋಗುತ್ತಾರೆ.

ಗಾಣಪುರದ ದಲಿತ ಕೇರಿಯಲ್ಲಿ, 10ನೇ ತರಗತಿವರೆಗೆ ಓದುವವರೇ ವಿರಳ. 10ನೇ ತರಗತಿ ತಲುಪಿದ್ದ ಕೃಷ್ಣ, ಶಾಲೆ ಬಿಟ್ಟು ಅಪ್ಪನೊಂದಿಗೆ ಬೇರೆ ಊರಿಗೆ ಕೆಲಸಕ್ಕೆ ಹೋಗಿದ್ದಾನೆ. ಮನೆಗೆ ನನ್ನ ದುಡಿಮೆ ಅಗತ್ಯವಿಲ್ಲದಿದ್ದರೆ, ಹಿಂತಿರುಗಿ ಬರುತ್ತೇನೆ, ಶಾಲೆ ಸೇರುತ್ತೇನೆ ಎಂದರೂ ಮತ್ತೆ ಹಿಂದಿರುಗಿ ಬರುವುದು ಯಾವಾಗ? ಯಾರಿಗೆ ಗೊತ್ತು? ಕೃಷ್ಣನ ಪ್ರಕಾರ ಇತರೆ ಜಾತಿಯ ಹುಡುಗರು ಶಾಲೆ ಬಿಟ್ಟಿದ್ದಾರೆ. ಇವರೆಲ್ಲಾ ಸೇರಿ ಕಂಟ್ರಾಕ್ಟರ್ ಜೊತೆ ಮಹಾರಾಷ್ಟ್ರದ ಸತಾರಾದಲ್ಲಿ ಕಟ್ಟಡ ನಿರ್ಮಾಣ ಕೆಲಸ ಮಾಡುತ್ತಾರೆ. ದಿನಕ್ಕೆ 20 ರಿಂದ 25 ರೂಪಾಯಿ ಕೂಲಿ, ಅರೆಬರೆ ಊಟದೊಂದಿಗೆ.

ಅದೇ ಕೇರಿಯ ಕೊಂಡಯ್ಯನ ಪ್ರಕಾರ ಈ ಮೊದಲು ಗುಳೆ ಹೋಗಿದ್ದ 500 ಜನ ಹಿಂದಿರುಗಿದ್ದಾರೆ, ಮತ್ತೆ 500 ಜನ ಹೊರಟ್ಟಿದ್ದಾರಂತೆ. ಇಲ್ಲಿ ಒಂದು ದಿನವೂ ಕೂಲಿ ಸಿಗಲಿಲ್ಲವೆಂದರೆ ಮಕ್ಕಳೆಲ್ಲಿಂದ ಶಾಲೆಗೆ ಹೋಗುತ್ತಾರೆ? ಎಂಬುದು ಅವರ ಪ್ರಶ್ನೆ. ಅನಂತಪುರದ ಕಲ್ಯಾಣದುರ್ಗದ ಸರ್ಕಾರಿ ಪದವಿ ಕಾಲೇಜಿನ ಉಪನ್ಯಾಸಕ ಜೈರಾಮರೆಡ್ಡಿಯವರ ಪ್ರಕಾರ ಈ ಬಾರಿ 30 ಜನ ಕಾಲೇಜು ತ್ಯಜಿಸಿದ್ದಾರೆ. ಸ್ಕಾಲರ್‌ಶಿಪ್ ಸ್ವೀಕರಿಸಲು ಸಹಾ ಅವರು ಬಂದಿಲ್ಲವಂತೆ, ಮಾತ್ರವಲ್ಲ, ಸ್ಕಾಲರ್‌ಶಿಪ್ ಹಣ ರೂ. 28 ಸಾವಿರ ಪಡೆಯುವವರೆ ಇಲ್ಲದೆ ಹಿಂದಿರುಗಿ ಸರ್ಕಾರಕ್ಕೆ ಹೋಗಿದೆಯಂತೆ!

ಕೃಷಿ ಬಿಕ್ಕಟ್ಟಿನೊಂದಿಗೆ, ಶಿಕ್ಷಣದ ಖಾಸಗೀಕರಣ, ವಾಣಿಜ್ಯೀಕರಣದ ಕೂಸಾದ 'ಸ್ವಯಂ ಹಣಕಾಸು ಶಿಕ್ಷಣ' ನೀತಿ ಪರಿಸ್ಥಿತಿಯನ್ನು ಹದಗೆಡಿಸಿದೆ, ಈ ಉದಾರೀಕರಣದ ವರ್ಷಗಳು ಅನಂತಪುರದ ಶಿಕ್ಷಣದ ಮೇಲಿನ ತೀವ್ರ ದಾಳಿಯ ವರ್ಷಗಳು ಎಂಬುದು ಕಾಲೇಜಿನ ಪ್ರಾಂಶುಪಾಲರ ಅಭಿಪ್ರಾಯ.

ದಲಿತರು, ಆದಿವಾಸಿ ವಿದ್ಯಾರ್ಥಿಗಳು ತೀವ್ರತರ ಧಾಳಿಗೆ ಒಳಪಟ್ಟಿದ್ದಾರೆ. ಅನಂತಪುರದ ಒಂದು ಸ್ವಯಂಸೇವಾ ಸಂಘದ ಸರ್ವೆ ಪ್ರಕಾರ, 10 ದಲಿತ ಕೇರಿಗಳಿಂದ ಒಟ್ಟಾರೆ 63 ವಿದ್ಯಾರ್ಥಿಗಳು ಶಾಲೆ ತ್ಯಜಿಸಿದ್ದಾರೆ. ಅವರಲ್ಲಿ 30 ಜನ ಹಣಕಾಸು, ಬದುಕಿಗಾಗಿ ದುಡಿಯುವ ಕಾರಣಗಳಿಗಾಗಿ ಶಾಲೆ ಬಿಟ್ಟಿದ್ದಾರೆ.

ಅನುತ್ತೀರ್ಣರಾದವರ ಸಂಖ್ಯೆ 28 ಆದರೆ, ಅವರೆಲ್ಲಾ ಹಾಜರಾತಿಯ ಕೊರತೆಯಿಂದಾಗಿ, ಅನುತ್ತೀರ್ಣರಾಗಿದ್ದಾರೆ. ಗೈರುಹಾಜರಿಗೆ ಕಾರಣ ಅವರು ಕೂಲಿಗೆ ಹೋಗಿದ್ದು, ಇನ್ನೂ ಕೆಲವರು ದುಡಿಮೆ-ಓದು ಎರಡೂ ಒಟ್ಟಿಗೆ ಮಾಡಲಾಗದೆ ಶಾಲೆ ಬಿಟ್ಟಿದ್ದಾರೆ.

ಇಂತಹ ಶಾಲೆ ತ್ಯಜಿಸುವವರ ಸಂಖ್ಯೆ ವಾಸ್ತವವಾದರೆ, ಸರ್ಕಾರಕ್ಕೆ ಅಂಕಿ-ಅಂಶ ನೀಡಿದರೆ, ಶಿಕ್ಷಕರಿಗೆ ಶಿಕ್ಷೆ! ಮಕ್ಕಳನ್ನು ಶಾಲೆಗೆ ತರಲು ನೀವು ವಿಫಲರಾಗಿದ್ದೀರೆಂಬ ಹಣೆಪಟ್ಟಿ. ಹಾಗಾಗಿ ಸರ್ಕಾರವನ್ನು ಮೆಚ್ಚಿಸುವಂತೆ ಇತರೆ ಜಿಲ್ಲೆಗಳು ನೀಡುವ ರೀತಿಯಲ್ಲೇ ನಾವು ಅಂಕಿಅಂಶ ನೀಡಬೇಕಿದೆ ಎಂಬ ಅಳಲು ಜಿಲ್ಲೆಯ ಅಧಿಕಾರಿಯದು.

ಚಂದ್ರಬಾಬು ನಾಯ್ಡುರವರ ಹೈಟೆಕ್ ಸರ್ಕಾರದಡಿಯು, ಹಳ್ಳಿಗಳಲ್ಲಿನ ಕೃಷಿ ಬಿಕ್ಕಟು-ಶಿಕ್ಷಣದ ಮೇಲೆ ಇಂತಹ ಪರಿಣಾಮ ಬೀರಿದ್ದರೆ ನಾಯ್ಡು ಮೀರಿಸುವ ಪಟ್ಟಿಯಲ್ಲಿರುವ ಹೈಟೆಕ್ ಕೃಷ್ಣರ ಸರ್ಕಾರದಡಿಯ ಹಳ್ಳಿಗಳ ಪಾಡು ಕಡಿಮೆ ಏನಿಲ್ಲ ಎಂಬುದಕ್ಕೆ ಹೈದರಾಬಾದ್-ಕರ್ನಾಟಕ, ಉತ್ತರ ಕರ್ನಾಟಕದ ಶಾಲೆ ಬಿಡುವ ಮಕ್ಕಳ ಸಂಖ್ಯೆಯ ಪ್ರಮಾಣ ಸಾಕ್ಷಿಯಾಧರೆ ರಾಜ್ಯದಲ್ಲಿನ ರೈತರ ಆತ್ಮಹತ್ಯೆ ಪುರಾವೆಯಾಗಿದೆ. ತಂತ್ರಾಂಶದ (SOFTWARE) ಬೆನ್ನೇರಿರುವ ಸರ್ಕಾರಗಳ ಬೆನ್ನತ್ತಿ 'ತಂತ್ರಾಂಶ ಪದವಿ' ಪಡೆದಿರುವವರು, ಜೀವನಕ್ಕೆ ಬೇಕಿರುವ ದುಡಿಮೆಯು ಇಲ್ಲದೆ, ಜೀವನಾಂಶವು ಇಲ್ಲದೆ ಕಂಗಾಲಾಗುತ್ತಿದ್ದಾರೆ. ಜಾಗತೀಕರಣ, ಉದಾರೀಕರಣ, ಖಾಸಗೀಕರಣದ ಪರಿಣಾಮವಾಗಿ ಇಡೀ ಕೃಷಿ ದಿವಾಳಿ ಆದರೆ, ರೈತರ-ಕೂಲಿಕಾರರ ಬದುಕು ಬರಿದಾದರೆ, ಶಿಕ್ಷಣದ ಸುಧಾರಣಾ ಕ್ರಮಗಳಿಗೆ ಅರ್ಥಬಂದಿತೆ? ಚಿಣ್ಣ ಅಂಗಳ, ಸಮುದಾಯದ ಸಹಭಾಗಿತ್ವದಲ್ಲಿ ಶಿಕ್ಷಣ, ಸಮುದಾಯದತ್ತ ಶಾಲೆ, ಶಾಲೆ ಬಿಡುವವರ ಸಂಖ್ಯೆ, ತ್ಯಜಿಸುವವರ ಸಂಖ್ಯೆಗೆ ಕಡಿವಾಣವಾದೀತೆ? ಕೃಷಿಯನ್ನು ರಕ್ಷಿಸದೆ ಕೂಲಿಕಾರರಿಗೆ ದುಡಿಮೆ ನೀಡದೆ, ಗುಳೇ ಹೋಗುವುದನ್ನು ತಪ್ಪಿಸಲಾಗದು. ಅದು ನಿಲ್ಲದೆ ಶಾಲೆಗಳ ತ್ಯಜಿಸುವವರ ಸಂಖ್ಯೆ ನಿಲ್ಲದು.

ಆಧಾರ: ಡಿಸೆಂಬರ್ 23 ರ 'ದಿ ಹಿಂದೂ' ಪತ್ರಿಕೆಯ 'ಮ್ಯಾಗಜಿನ್'ನಲ್ಲಿ ಪ್ರಕಟವಾದ ಪಿ.ಸಾಯಿನಾಥ್‌ರ ಲೇಖನ 'From Sofwere to nowere'

'ವಿಜ್ಞಾನ ಪ್ರಸಾರ'ದಿಂದ 'ಬೆಳವಣಿಗೆ ಬದಲಿ ಹಾದಿ'ಯತ್ತ

ನೆನಗೂ ಜನ ವಿಜ್ಞಾನ ಬೆಳವಣಿಗೆಗೂ 15 ವರ್ಷಕ್ಕೂ ಹೆಚ್ಚಿನ ಸಂಬಂಧ. ಜನ ವಿಜ್ಞಾನ ಚಳುವಳಿಯು ಹಲವು ರಾಜ್ಯಗಳಲ್ಲಿ ಇನ್ನೂ ಹಳೆಯದು. ಉದಾಹರಣೆಗೆ ಕೇರಳ ಶಾಸ್ತ್ರ ಸಾಹಿತ್ಯ ಪರಿಷತ್ 60 ರ ದಶಕದಲ್ಲೇ ಆರಂಭವಾಗಿತ್ತು. ಈ ಚಳುವಳಿ ರಾಷ್ಟ್ರೀಯ ಸ್ವರೂಪ ಪಡೆದದ್ದು 1988 ರಲ್ಲಿ - ಹಲವು ರಾಜ್ಯ ಮತ್ತು ನಗರಗಳಲ್ಲಿ ಸಕ್ರಿಯವಾಗಿದ್ದ ಜನವಿಜ್ಞಾನ ಸಂಘಟನೆಗಳು 'ಅಖಿಲ ಭಾರತ ಜನ ವಿಜ್ಞಾನ ಜಾಲ'(ಎಐಪಿಎಸ್‌ಎನ್) ರಚಿಸಿದಾಗ, ಆಗಿನಿಂದ 2-3 ವರ್ಷಕ್ಕೊಮ್ಮೆ 'ಅಖಿಲ ಭಾರತ ಜನ ವಿಜ್ಞಾನ ಕಾಂಗ್ರೆಸ್' (ಎಐಪಿಎಸ್‌ಸಿ) ನಡೆಸುತ್ತಾ ಬಂದಿದೆ. ಈ 'ಕಾಂಗ್ರೆಸ್' (ಅಥವಾ ಮಹಾಧಿವೇಶನದಲ್ಲಿ) ಜನ ವಿಜ್ಞಾನ ಚಳುವಳಿ ಅನುಭವ- ಕನಸುಗಳನ್ನು ಹಂಚಿಕೊಂಡು, ಸಾಗಬೇಕಾದ ದಿಕ್ಕು ನಿರ್ಧರಿಸುತ್ತದೆ. ನಾನು ಬೆಂಗಳೂರಿನಲ್ಲಿ ನಡೆದ 4ನೇ ಕಾಂಗ್ರೆಸ್‌ನಂತರ ಭಾಗವಹಿಸಿದ್ದು ಇತ್ತೀಚೆಗೆ (ಡಿಸೆಂಬರ್ 19-22) ಚೆನ್ನೈನಲ್ಲಿ ನಡೆದ 9ನೇ ಕಾಂಗ್ರೆಸ್‌ನಲ್ಲಿ ನಮ್ಮರಾಜ್ಯದ ಜನ-ವಿಜ್ಞಾನ ಚಳುವಳಿಯ ಜತೆ ನಿಕಟ ಸಂಪರ್ಕವಿದ್ದರೂ, ನನಗೆ ಜನ-ವಿಜ್ಞಾನ ಚಳುವಳಿಯ ಸಮಗ್ರ ಪರಿಚಯ ದೊರೆತದ್ದು ಚೆನ್ನೈ ಕಾಂಗ್ರೆಸನಲ್ಲಿ - ಜನವಿಜ್ಞಾನ ಚಳುವಳಿಯ ಸುಮಾರು 10 ವರ್ಷಗಳ ಪ್ರಗತಿ ಸಹ ಗಮನಕ್ಕೆಬಂತು.

AIPSN 1998 ರಿಂದ 26 ಸಂಘಟನೆಗಳ ಜಾಲವಾಗಿ ಆರಂಭಗೊಂಡು, ಈಗ 40 ಕ್ಕೂ ಹೆಚ್ಚು ಸಂಘಟನೆಗಳ ಸಂಯೋಜಿತ ಜಾಲವಾಗಿ ಬೆಳೆದಿದೆ. ಈ ಜಾಲ 20 ರಾಜ್ಯಗಳ 100 ಕ್ಕೂ ಹೆಚ್ಚು ಜಿಲ್ಲೆಗಳಲ್ಲಿ, 15 ಸಾವಿರಕ್ಕೂ ಹೆಚ್ಚು ಹಳ್ಳಿಗಳಲ್ಲಿ ಬೇರೂರಿದೆ. ವಿಶ್ವಬ್ಯಾಂಕ್‌ನಿಂದ ಹಿಡಿದು ರಾಜ್ಯ ಸರ್ಕಾರಗಳ ವರೆಗೆ ಸರ್ಕಾರೇತರ ಸಂಘಟನೆಗಳ ಬಗ್ಗೆ ಒತ್ತು ಕೊಟ್ಟು, ಅವುಗಳಿಗೆ ಅನುದಾನ ಕೊಟ್ಟು ತಮ್ಮ ಜವಾಬ್ದಾರಿ ಕಳೆದುಕೊಳ್ಳುತ್ತಿವೆ. ಈ ದಾನ, ಅನುದಾನಗಳ ಎಂಜಲ ಮೇಲೆ ಬದುಕುತ್ತಿರುವ ನೂರಾರು ಸಂಘಟನೆಗಳಿವೆ. ಆದರೆ AIPSN ಸರ್ಕಾರದಿಂದ ಅಥವಾ ವಿದೇಶಿ ಸಂಘಟನೆಗಳ ಅನುದಾನ, ದಾನಗಳ ಮೇಲೆ ಅವಲಂಬಿಸಲು ನಿರಾಕರಿಸಿದ ಜನ ಚಳುವಳಿಯ ಜಾಲ. ನಿರ್ದಿಷ್ಟ ಕಾರ್ಯಕ್ರಮಗಳಿಗೆ ಸರ್ಕಾರದ ಅನುದಾನ ಮಾತ್ರ ತೆಗೆದುಕೊಳ್ಳುತ್ತದೆ.

ವಿದೇಶಿ ದಾನ, ಅನುದಾನ ಕಾರ್ಯಕ್ರಮಕ್ಕೂ ತೆಗೆದುಕೊಳ್ಳಬಾರದು ಎಂಬುದು AIPSN ನ ನಿಯಮ ಜನರ ಬೆಂಬಲದ ಮೇಲೆ ಆಧರಿಸಿ, ಸ್ವಂತ ಕಾಲ ಮೇಲೆ ನಿಂತಿವೆ AISPN ಸಂಘಟನೆಗಳು.

'ವಿಜ್ಞಾನ ಪ್ರಸಾರ'ದಿಂದ 'ಬೆಳವಣಿಗೆ ಬದಲಿ' ಮಾದರಿಯತ್ತ

ಹೆಚ್ಚಿನ ರಾಜ್ಯಗಳಲ್ಲಿ ಜನ-ವಿಜ್ಞಾನ ಚಳುವಳಿ ಆರಂಭವಾದದ್ದು ವಿಜ್ಞಾನದ ಜ್ಞಾನವನ್ನು ಸಾಮಾನ್ಯ ಜನರಿಗೆ ನಿಲುಕುವಂತೆ, ಸರಳವಾಗಿ ಭಾರತೀಯ ಭಾಷೆಗಳಲ್ಲಿ ಪ್ರಚಾರ ಮಾಡುವ ತವಕದಿಂದ. ಇದರಲ್ಲಿ ವಿಜ್ಞಾನಿಗಳು, ವಿಜ್ಞಾನ ಸಂಬಂಧ ಉದ್ಯೋಗಿಗಳು, ಶಿಕ್ಷಕರು, ವಿದ್ಯಾರ್ಥಿಗಳು ಉತ್ಸಾಹದಲ್ಲಿ ಪಾಲ್ಗೊಂಡಿದ್ದರು. ಆದರೆ ಈ ಚಟುವಟಿಕೆ ವ್ಯಾಪಕವಾದಂತೆ, ಅರ್ಥಪೂರ್ಣವಾದ ಮತ್ತು ಸಂಪೂರ್ಣ ಸಾಕ್ಷರತೆ ...

ಪೂರ್ಣ ಸಾಕ್ಷರತೆ ತರದೆ, ವಿಜ್ಞಾನದ ಜ್ಞಾನ ಹರಡುವುದು ಸಾಧ್ಯವಿಲ್ಲ ಎಂಬುದನ್ನು ಈ ಕಾರ್ಯಕರ್ತರು ಮನಗಂಡರು. ಸಂಪೂರ್ಣ ಸಾಕ್ಷರತೆ ಕನಸಲ್ಲ, ಕಾರ್ಯಸಾಧ್ಯ ಕಾರ್ಯಕ್ರಮ ಎಂದು ತೋರಿಸಿಕೊಟ್ಟ ಕೇರಳ ಶಾಸ್ತ್ರ ಸಾಹಿತ್ಯ ಪರಿಷತ್‌ನ ಸಾಕ್ಷರತಾ ಚಳುವಳಿಯ ಮಾದರಿಯನ್ನು ರಾಷ್ಟ್ರೀಯ ಮಟ್ಟದಲ್ಲಿ ವ್ಯಾಪಕವಾಗಿ ತೆಗೆದುಕೊಂಡು ಹೋಗಬೇಕೆಂಬ ಹಂಬಲದ ಫಲವೇ AIPSN. ಇದರ ಜತೆಗೆ ವಿಜ್ಞಾನ-ತಂತ್ರಜ್ಞಾನದ ಬಗ್ಗೆ ಮತ್ತು ಅದನ್ನು ಸಮಾಜದ ಸಮಗ್ರ, ಸಮಾನ ಬೆಳವಣಿಗೆಗೆ ಬಳಸುವ ನೀತಿ ಅಥವಾ ಅದರ ಅಭಾವದ ಬಗ್ಗೆ ಸಮಗ್ರ ಟೀಕೆಯನ್ನು ಜನ-ವಿಜ್ಞಾನ ಚಳುವಳಿ 4ನೇ ಕಾಂಗ್ರೆಸ್ ಹೊತ್ತಿಗೆ ತೆಗೆದುಕೊಂಡಿತ್ತು.

AIPSC 9th
SCIENCE FOR THE PEOPLE
SCIENCE FOR THE NATION
CHENNAI-2001

ಚೆನ್ನೈನಲ್ಲಿ 9ನೇ ಜನವಿಜ್ಞಾನ ಕಾಂಗ್ರೆಸ್

ಅಲ್ಲಿಂದೀಚೆಗೆ ವಿಜ್ಞಾನ ಪ್ರಸಾರ, ಸಾಕ್ಷರತೆ, ವಿಜ್ಞಾನ-ತಂತ್ರಜ್ಞಾನ ನೀತಿಗಳ ಪರಾಮರ್ಶೆಯ ಚಟುವಟಿಕೆಗಳನ್ನು ಮೀರಿ ಜನ-ವಿಜ್ಞಾನ ಚಳುವಳಿ ಬೆಳೆದಿದೆ. ಅದು ಮುಖ್ಯವಾಗಿ ಜನ-ಪರ ಬೆಳವಣಿಗೆಯ ಸರಿಯಾದ ಹಾದಿ ಬಗ್ಗೆ ಹುಡುಕಾಟಕ್ಕೆ ಸಂಬಂಧಿಸಿದ್ದು. ಬೆಳವಣಿಗೆಯಲ್ಲಿ ವಿಜ್ಞಾನ-ತಂತ್ರಜ್ಞಾನಗಳ ಬಳಕೆಯ ಅಭಾವ-ದುರ್ಬಳಕೆ-ಬಳಕೆಯ ರೀತಿಯ ಬಗ್ಗೆ ಪರಾಮರ್ಶೆ ಮಾಡುತ್ತಲೇ, ಅದರ ಸರಿಯಾದ ಬಳಕೆ ಮೇಲೆ ಆಧರಿಸಿದ ಜನಪರ ಬದಲಿ ತೋರಿಸಿ ಅದನ್ನು ಅಂಗೀಕರಿಸಲು ಒತ್ತಡ ಹೇರಲಾರಂಭಿಸಿದೆ ಚಳುವಳಿ. ಈ ನಿಟ್ಟಿನಲ್ಲಿ ಹಲವು ದಿಟ್ಟ ಕಾರ್ಯಕ್ರಮಗಳನ್ನು ಹಾಕಿಕೊಂಡು ಸಾಧನೆಗಳನ್ನು ಮಾಡಿದೆ. ಅದೇ ರೀತಿ ಮಹಿಳೆಯನ್ನು ಜನ-ವಿಜ್ಞಾನ ಚಳುವಳಿಯ ಎಲ್ಲಾ ಆಯಾಮಗಳಲ್ಲಿ ತೊಡಗಿಸುವುದರಲ್ಲಿ ಉತ್ತಮ ಪ್ರಗತಿ ಸಾಧಿಸಿದೆ.

'ಸಮತಾ' ದಿಂದ
ಜಿಲ್ಲಾ ಉಪಪ್ರಧಾನಳಾದ ಉಷಾ

ಇದು ಕಾಂಗ್ರೆಸ್‌ನ ಕಲಾಪದಲ್ಲಿ ಹೊಡೆದು ಕಾಣಿಸಿತ್ತು. ಒಂದು ದಶಕದ ಹಿಂದೆ ಮಹಿಳಾ ಸಾಕ್ಷರತೆಯ ವಿಶೇಷ ಕಾರ್ಯಕ್ರಮ 'ಸಮತಾ'ದ ಕಾರ್ಯಕರ್ತೆಯಾಗಿ ಪ್ರವೇಶಿಸಿದ ಬಿಹಾರದ ಉಷಾ ಇಂದು ಬೇಗೂಸರಾಯ್ ಜಿಲ್ಲಾ ಪಂಚಾಯತ್‌ನ ಉಪಪ್ರಧಾನಳಾಗಿ ಚುನಾಯಿತಳಾಗಿದ್ದಾಳೆ. ಜನ-ವಿಜ್ಞಾನ ಚಳುವಳಿಯ ಸುಮಾರು ನೂರು ಕಾರ್ಯಕರ್ತರು ಗ್ರಾಮದಿಂದ ಜಿಲ್ಲಾ ಪಂಚಾಯತ್‌ವರೆಗೆ ಹಲವು ಸ್ಥಳೀಯ ಸಂಸ್ಥೆಗಳಲ್ಲಿ ಸದಸ್ಯರಾಗಿ ಆಯ್ಕೆಯಾಗಿದ್ದಾರೆ. ಅಕ್ಷರಾಭ್ಯಾಸದಿಂದ ಏನು ಸಾಧಿಸಿದಂತಾಗುತ್ತದೆ ಎಂದು ಮೂಗು ಮುರಿದವರಿಗೆ ಉತ್ತರವಾಗಿದ್ದಾರೆ. ಸಾಕ್ಷರತಾ ಚಳುವಳಿಯಿಂದ ಈ ಜಿಲ್ಲೆಯಲ್ಲಿ ಆರಂಭವಾದ ಚಳುವಳಿ ಹಲವು ಆಯಾಮಗಳನ್ನು ಪಡೆದುಕೊಂಡಿದೆ. ನವ-ಸಾಕ್ಷರರ ನಿರಂತರ ಶಿಕ್ಷಣ, ಅದರಿಂದ ಎಚ್ಚೆತ್ತ ಜನ ಸಮುದಾಯದ ಶಿಕ್ಷಣ, ಆರೋಗ್ಯ ಮತ್ತು ಇತರ ಬೆಳವಣಿಗೆಯ ಅಗತ್ಯಗಳ ಪ್ರಶ್ನೆ ಎತ್ತಿ ಚರ್ಚೆ, ಹೋರಾಟದಲ್ಲಿ ತೊಡಗಿದರು. ತಮ್ಮ ಪ್ರಜಾಸತ್ತಾತ್ಮಕ ಹಕ್ಕು, ಕರ್ತವ್ಯಗಳನ್ನು ಅರಿತುಕೊಂಡು ತಮ್ಮ ನಿಜವಾದ ಪ್ರತಿನಿಧಿಗಳನ್ನು ಆರಿಸಬೇಕೆಂದು ಛಲ ತೊಟ್ಟರು. ಮಹಿಳೆಯರ ಸ್ವ-ಸಹಾಯ ಗುಂಪುಗಳು, ಸಾಲ ಸಹಕಾರಿ

ಶರತ್‌ಚಂದ್ರ

ಸಂಘಗಳು, ವಿಜ್ಞಾನ-ತಂತ್ರಜ್ಞಾನದ ಸಹಾಯ ಪಡೆದ ಸಣ್ಣ ಉದ್ಯಮಗಳು ಈ ರೀತಿ ಹಲವು ಆಯಾಮಗಳನ್ನು ಜನ-ವಿಜ್ಞಾನ ಚಳುವಳಿ ಪಡೆದಿತ್ತು.

ತಮಿಳುನಾಡಿನಲ್ಲಿ ಅತ್ಯಂತ ವ್ಯಾಪಕವಾಗಿ ಹರಡಿದ ಮಹಿಳಾ ಸ್ವ-ಸಹಾಯ ಗುಂಪುಗಳ ಚಳುವಳಿ 'ಮಲರ್' (Malar) ಸಹ ಎಲ್ಲರ ಗಮನ ಸೆಳೆದಿತ್ತು. ಸಾಲ ಕೊಡುವ ಸಹಕಾರಿ ಸಂಘಗಳಾಗಿ ಆರಂಭವಾದ ಮಹಿಳಾ ಗುಂಪುಗಳು ಹೆಂಡತಿಯನ್ನು ಸದಾ ಬಡಿಯುವ ಗಂಡನಿಗೆ ಬುದ್ಧಿ ಕಲಿಸುವುದರಿಂದ ಹಿಡಿದು ನೀರು-ಜಮೀನು-ಹಾದಿ ಕಿತ್ತುಕೊಳ್ಳುವ ಜಮೀನ್ದಾರನ ವಿರುದ್ಧ ಸೆಟೆದು ನಿಂತು ಗೆಲ್ಲುವವರೆಗೆ ಚಳುವಳಿ ಬೆಳೆದಿದೆ. ಹಲವು ಸಾಲ ಸಹಕಾರಗಳು ಸಣ್ಣ ಸಹಕಾರಿ ಉದ್ಯಮಗಳನ್ನು ಆರಂಭಿಸಿ ಹಲವು ಕುಟುಂಬಗಳಿಗೆ ಜೀವನಾಧಾರವಾಗಿವೆ. ಎಲ್ಲಾ ಸಹಕಾರಿಗಳ ಒಟ್ಟು ವಹಿವಾಟು 5 ಕೋಟಿ ರೂ.! ತಮಿಳುನಾಡಿನ 'ಮಲರ್' ಚಳುವಳಿ ಇತರ ರಾಜ್ಯಗಳಿಗೆ ಮಾದರಿಯಾಗಿದೆ. 'ಮಲರ್'ನ ಸ್ಫೂರ್ತಿದಾಯಕ ಉದಾಹರಣೆಯಿಂದ ಈಗ ದೇಶದಾದ್ಯಂತ 8 ಸಾವಿರ ಗುಂಪುಗಳು ಕೆಲಸ ಮಾಡುತ್ತಿವೆ.

ಏಳು ಉಪ-ಅಧಿವೇಶನಗಳು:

ಕಾಂಗ್ರೆಸ್ ಮುಖ್ಯವಾಗಿ ಏಳು ವಿಷಯಗಳ ಬಗ್ಗೆ ವಿಚಾರ-ಮಂಥನ ನಡೆಸಿತು. ಈ ಬಗ್ಗೆ ಏಳು ಗೋಷ್ಠಿಗಳು ನಡೆದವು. ಶಿಕ್ಷಣ, ಆರೋಗ್ಯ, ವೈಜ್ಞಾನಿಕ ದೃಷ್ಟಿಕೋನ, ಜೀವನೋಪಾಯಗಳಲ್ಲಿ ವಿಜ್ಞಾನ-ತಂತ್ರಜ್ಞಾನ, ಜಾಗತೀಕರಣ, ಪರಿಸರ ಮತ್ತು ಬೆಳವಣಿಗೆ. ಈ ವಿಷಯಗಳ ಬಗ್ಗೆ ಎಲ್ಲಾ ಪ್ರತಿನಿಧಿಗಳು ಭಾಗವಹಿಸಿದ ಸಾಮಾನ್ಯ ಗೋಷ್ಠಿಗಳಲ್ಲದೆ ಏಳು ಉಪ-ಮಹಾಧಿವೇಶನಗಳು ನಡೆದವು. ಈ ಏಳು ವಿಷಯಗಳನ್ನು ಸಮಾಂತರವಾಗಿ ನಡೆದ 24 ಕಾರ್ಯಾಗಾರಗಳಲ್ಲಿ ವಿವರವಾಗಿ ಚರ್ಚಿಸಲಾಯಿತು. ಗೋಷ್ಠಿ, ಕಾರ್ಯಾಗಾರಗಳಲ್ಲಿ - ವಿವಿಧ ಸಂಘಟನೆಗಳ ಅನುಭವ, ಎದುರಿಸಿದ ಸಮಸ್ಯೆಗಳು, ಸಾಧನೆಗಳು, ಅನುಭವದ ಒಟ್ಟಾರೆ ಅರ್ಥೈಸುವಿಕೆ, ಮುಂದಿನ ಹಾದಿ-ಯೋಜನೆಗಳ ಬಗ್ಗೆ ನಿರ್ಣಯಗಳು - ಇವುಗಳ ಬಗ್ಗೆ ಚರ್ಚಿಸಲಾಯಿತು. ಈ ಕಾರ್ಯಾಗಾರಗಳ ಒಟ್ಟು ಸಾರವನ್ನು ಸಾಮಾನ್ಯ ಗೋಷ್ಠಿಯೊಂದರಲ್ಲಿ ಎಲ್ಲಾ ಪ್ರತಿನಿಧಿಗಳ ಎದುರು ಮಂಡಿಸಲಾಯಿತು.

> **ಕಳೆದ 5 ವರ್ಷಗಳಲ್ಲಿ ಆಂಧ್ರಪ್ರದೇಶದ ಅನಂತಪುರ ಜಿಲ್ಲೆಯೊಂದರಲ್ಲೇ 2426 ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಆಂಧ್ರಪ್ರದೇಶದ ಪೋಲೀಸರ ಕ್ರಿಮಿನಲ್ ದಾಖಲೆ ಪ್ರಕಾರ (ಜೀವನ ದುರ್ಭರವಾದಾಗ ಆತ್ಮಹತ್ಯೆ ಮಾಡಿಕೊಳ್ಳುವ ಅಪರಾಧ ನಿಮಗೆ ಗೊತ್ತಿರಬೇಕಲ್ಲ!) ಎಲ್ಲರೂ ವಿಪರೀತ ಹೊಟ್ಟೆ ನೋವು ತಾಳಲಾರದೆ ಸಿಬಾ-ಗ್ಗಿಗಿ ಎಂಬ ಕಂಪನಿಯ ಕೀಟನಾಶಕ ನುಂಗಿ ಸತ್ತವರು. ಅವರ ಬೆಳೆಗಳನ್ನು ರಕ್ಷಿಸಲು ವಿಫಲವಾದ ಕೀಟನಾಶಕ ರೈತರನ್ನು ಕೊಲ್ಲುವುದರಲ್ಲಿ ಪರಿಣಾಮಕಾರಿಯಾಗಿತ್ತು.**
>
> - ಜಾಗತೀಕರಣದ ಪರಿಣಾಮ ಗ್ರಾಮೀಣ ಪ್ರದೇಶದಲ್ಲಿ ಎಂಬ ಬಗ್ಗೆ ಮಾತನಾಡುತ್ತಾ
> ಪಿ.ಸಾಯಿನಾಥ

ಶಿಕ್ಷಣದಲ್ಲಿ ಮುಖ್ಯವಾಗಿ ಸಾಕ್ಷರತೆಗೆ ಕಾರ್ಯಕ್ರಮಗಳಿಗೆ ಸರ್ಕಾರ ಎಲ್ಲಾ ಸಹಾಯ ನಿಲ್ಲಿಸಿದರೂ ಆ ಕೆಲಸವನ್ನು ಕೈಗೆತ್ತಿ ಮುಂದೆ ಹೋಗುವ ನಿರ್ಧಾರವನ್ನು ಕೈಗೊಳ್ಳಲಾಯಿತು. ಶಿಕ್ಷಣದ ಖಾಸಗೀಕರಣವನ್ನು ಎದುರಿಸುವ ಬಗೆಗೂ, ಶಿಕ್ಷಣವನ್ನು ಸಾರ್ವತ್ರಿಕಗೊಳಿಸುವ ಬಗ್ಗೆ ಸರ್ಕಾರದ ನಿರ್ಲಕ್ಷ್ಯದ ವಿರುದ್ಧ ಹೋರಾಡುವ, ಅದೇ ಸಮಯದಲ್ಲಿ ಶಾಲೆಯಿಂದ ಹೊರಗುಳಿದ ನಿರಂತರ ಶಿಕ್ಷಣ ಒದಗಿಸುವ 'ಜೀವನ ಶಾಲಾ' ದ ಅನುಭವದ ಆಧಾರದ ಮೇಲೆ ಮುಂದುವರಿಸುವ ಬಗ್ಗೆ ಕಾಂಗ್ರೆಸ್ ನಿರ್ಧರಿಸಿತು. ಸಾರ್ವತ್ರಿಕ ಶಿಕ್ಷಣದ ಬಗ್ಗೆ 93ನೇ ತಿದ್ದುಪಡಿಯ ಕೊರತೆಗಳನ್ನು ತೀಕ್ಷ್ಣವಾಗಿ ಟೀಕಿಸಿ, 'ಸಾರ್ವತ್ರಿಕ ಶಿಕ್ಷಣ' ದ ಬೇಡಿಕೆ ಮೇಲೆ ರಾಷ್ಟ್ರವ್ಯಾಪಿ ವ್ಯಾಪಕ ಜನಾಂದೋಲನಕ್ಕೆ ಕಾಂಗ್ರೆಸ್ ಕರೆ ನೀಡಿತು. ಕಳೆದ ಕಾಂಗ್ರೆಸ್ ನಂತರ AIPSN ಹಮ್ಮಿಕೊಂಡ ಅತ್ಯಂತ ಸಫಲವಾಗಿ ಜಾರಿ ಮಾಡಿದ ಕಾರ್ಯಕ್ರಮವೆಂದರೆ ರಾಷ್ಟ್ರೀಯ ಜನಾರೋಗ್ಯ ಸಭೆ ಮತ್ತು ವಿಶ್ವ

ಮಂತ್ರಿಗಳಿಗೆ ಹಿಮಾಚಲದವರು ಟೋಪಿ ಹಾಕಿದಾಗ!

ಹಿಮಾಚಲದ ತಂಡ ಇಡೀ ಕಾಂಗ್ರೆಸ್‌ನಲ್ಲಿ ಎಲ್ಲ ರೀತಿಯಲ್ಲೂ, ಎಲ್ಲಾ ರಂಗದಲ್ಲೂ ಗಮನ ಸೆಳೆದ ತಂಡ. ಉದ್ಘಾಟನಾ ಸಮಾರಂಭದಲ್ಲಿ ಮಂತ್ರಿಗೆ ಅಧಿಕೃತ 'ಉಡುಗೊರೆ' ಕೊಡುತ್ತಿದ್ದಂತೆ ಜಿಗಿದು ಹೋಗಿ ಹಿಮಾಚಲ 'ಟೋಪಿ' ಹಾಕಿಬಿಟ್ಟರು! ಆಮೇಲೂ ಎಲ್ಲಾ ಗೋಷ್ಠಿಗಳಲ್ಲಿ, ಮಧ್ಯ, ಹಾಡು ಹೇಳಲು ಮುಂದಾಗುವುದರಲ್ಲಿ, ಎಲ್ಲಾ ಗೋಷ್ಠಿ-ವರ್ಕ್‌ಶಾಪ್‌ಗಳಲ್ಲಿ ಭಾಗವಹಿಸುವುದರಲ್ಲಿ, ಬಸ್‌ನಲ್ಲೂ- ಛತ್ರದಲ್ಲೂ ಎಲ್ಲಾ ಕಡೆ ಅವರು ಎದ್ದು ಕಾಣುತ್ತಿದ್ದರು. ಅವರು ತಮ್ಮ ಜೀವನೋತ್ಸಾಹದಿಂದ. ಅವರಿಗೆ 'ಕಾಂಗ್ರೆಸ್‌ನ ಸ್ಫೂರ್ತಿ' ಎಂಬ ವಿಶೇಷ ಬಹುಮಾನ ನಿಜವಾಗಿಯೂ ಅರ್ಹವೇ ಆಗಿತ್ತು.

ಜನಾರೋಗ್ಯ ಸಭೆ. ಕಲ್ಕತ್ತಾ, ಢಾಕಾದಲ್ಲಿ ಅನುಕ್ರಮವಾಗಿ ನಡೆದ ಈ ಸಭೆಗಳು ಅಂಗೀಕರಿಸಿದ ಜನಾರೋಗ್ಯ ಕಾರ್ಯಕ್ರಮವನ್ನು ಮಂಡಿಸಿ ಅದನ್ನು ಮುಂದಕ್ಕೊಯ್ಯುವ ಬಗ್ಗೆ ಕಾಂಗ್ರೆಸ್ ನಿರ್ಧರಿಸಿತು. ಇದರ ತದ್ವಿರುದ್ಧವಾಗಿ ಸಾಮುದಾಯಿಕ ಆರೋಗ್ಯ ಕಾಪಾಡುವ ಜವಾಬ್ದಾರಿಯಿಂದ ನುಣುಚಿಕೊಳ್ಳುವ ಸರ್ಕಾರದ ಹೊಸ ಆರೋಗ್ಯನೀತಿಯ ಬಗ್ಗೆ ತೀಕ್ಷ್ಣ ವಿಮರ್ಶೆ ನಡೆಸಲಾಯಿತು. ಆರೋಗ್ಯ ಮತ್ತು ಔಷಧಿಗಳ ಲಭ್ಯತೆ ಮೇಲೆ ಜಾಗತೀಕರಣದ ಪ್ರಭಾವದ ಬಗ್ಗೆ, ಆರೋಗ್ಯ ಶಿಕ್ಷಣ, ಹೆಣ್ಣು ಭ್ರೂಣಹತ್ಯೆ, ಮಕ್ಕಳ ಪೌಷ್ಟಿಕತೆ ಈ ಬಗ್ಗೆ ವಿವರವಾಗಿ ಚರ್ಚೆ ನಡೆಸಲಾಯಿತು.


ವೈದಿಖ ಗಣಿತ, ವೈದಿಕ ಖಗೋಳ ಜ್ಞಾನದ ಬೊಗಳೆ ಬಯಲು ಮಾಡುವ, ವಿಜ್ಞಾನ ಮತ್ತು ವೈಜ್ಞಾನಿಕ ಮನೋಧರ್ಮದ ಮೇಲೆ ಕಾವಿ ಪಡೆಗಳ ಆಕ್ರಮಣದ ಬಗ್ಗೆ ಕಾಂಗ್ರೆಸ್ ವಿವರವಾಗಿ ಚರ್ಚಿಸಿತು. ಸಮಾಜದ ಮೂಲರಚನೆಗಳ (ವಿದ್ಯುತ್, ಟೆಲಿಸಂಪರ್ಕ, ಸಾಗಾಣಿಕೆ ಇತ್ಯಾದಿ) ಮತ್ತು ನಮ್ಮ ವಿಜ್ಞಾನ- ತಂತ್ರಜ್ಞಾನ ಸಂಶೋಧನೆ-ಅಭಿವೃದ್ಧಿ ವ್ಯವಸ್ಥೆ ಮೇಲೆ ಜಾಗತೀಕರಣದ ಪರಿಣಾಮಗಳ ಬಗೆಗೆ ಕೂಲಂಕುಷವಾಗಿ ಚರ್ಚಿಸಲಾಯಿತು. ಟ್ರೇಡ್ ಯೂನಿಯನ್‌ಗಳು, ಸರ್ಕಾರೇತರ ಸಂಘಟನೆಗಳು, ಸ್ವ-ಸಹಾಯ ಗುಂಪುಗಳು, ಸಾಮೂಹಿಕ ಸಂಘಟನೆಗಳು, ಸಹಕಾರಿ, ಸ್ಥಳೀಯ ಸರ್ಕಾರಿ ಸಂಸ್ಥೆಗಳು ಜಾಗತೀಕರಣದ ಬಗ್ಗೆ ತಳೆಯಬೇಕಾದ ಧೋರಣೆ, ಪ್ರತಿರೋಧ ಒಡ್ಡುವ ಬಗ್ಗೆ ವಿಚಾರ ವಿನಿಮಯವಾಯಿತು. ಎನ್ರೋನ್‌ನ್ನು ಜಾಗತೀಕರಣದ ದುಷ್ಪರಿಣಾಮದ ಉದಾಹರಣೆಯಾಗಿ ವಿಶ್ಲೇಷಿಸಲಾಯಿತು.

ಪರಿಸರ ಮತ್ತು ಬೆಳವಣಿಗೆಗಳ ನಡುವೆ ತಾಕಲಾಟ ಮತ್ತು ಈ ಬಗ್ಗೆ ಜನವಿಜ್ಞಾನ ಚಳುವಳಿಗಳು ತಳೆಯಬೇಕಾದ ನಿಲುವುಗಳ ಬಗ್ಗೆ ಬಿಸಿಬಿಸಿ ಚರ್ಚೆಯಾಯಿತು. ಮಾನವನ ಆರ್ಥಿಕ ಮುಂಬರಲಿರುವ ಭೂಪರಿಸರ ಶೃಂಗಸಭೆಯಲ್ಲಿ ಜನ-ವಿಜ್ಞಾನ ಚಳುವಳಿ ತೆಗೆದುಕೊಳ್ಳಬೇಕಾದ ನಿಲುವುಗಳನ್ನು ಸಿದ್ಧಪಡಿಸಲಾಯಿತು.

ಕೃಷಿ, ಕೈಗಾರಿಕೆಗಳಲ್ಲದೆ ಈಗ ಇರುವ ಕೈಕಸುಬುಗಳನ್ನು ವಿಜ್ಞಾನ- ತಂತ್ರಜ್ಞಾನಗಳಿಂದ ಇನ್ನಷ್ಟು ಶ್ರೀಮಂತಗೊಳಿಸುವ ಪ್ರಯತ್ನಗಳ ಬಗೆಗೂ ಚರ್ಚೆಯಾಯಿತು. ಕೈಕಸುಬುದಾರರ ಜಾಣ್ಮೆಯನ್ನು ವಿಜ್ಞಾನ-ತಂತ್ರಜ್ಞಾನದಿಂದಾಗಿ ಶ್ರೀಮಂತಗೊಳಿಸಿ ತಯಾರಿಸಿದ ಸರಕುಗಳನ್ನು ಆತನೇ ಪಡೆಯಬಹುದಾದ, ನಿಯಂತ್ರಿಸಬಹುದಾದ ಮಾರುಕಟ್ಟೆಗಳಿಗೆ ಮಾರುವಂತೆ ಮಾಡುವ ಬಗ್ಗೆ ಜಿಜ್ಞಾಸೆ ನಡೆಯಿತು. ಚರ್ಮ, ಹಣ್ಣು ಸಂಸ್ಕರಣ, ಸೋಪು, ಇತ್ಯಾದಿಗಳ ಕ್ಷೇತ್ರದಲ್ಲಿ ಈ ಬಗ್ಗೆ ನಡೆದ ಪ್ರಯತ್ನಗಳ ಅನುಭವದ ಸಾರದ ಮಂಥನವೂ ನಡೆಯಿತು.

'ಜಾಗತೀಕರಣ'ಕ್ಕೆ ಜನ ಬದಲಿ ರೂಪಿಸಿದ್ದಾರೆ

ಮಹಿಳಾ ಸಶಸ್ತ್ರೀಕರಣಕ್ಕಾಗಿ 'ಸಮತಾ' ವೇದಿಕೆಯನ್ನು ಬಲಪಡಿಸುವ ಪ್ರಯತ್ನದ ವಿಶ್ಲೇಷಣೆಗೆ ಪ್ರತ್ಯೇಕ ಗೋಷ್ಠಿ ಹಮ್ಮಿಕೊಳ್ಳಲಾಗಿತ್ತು. ಇದಲ್ಲದೆ ಎರಡು ಬಹಿರಂಗ ಗೋಷ್ಠಿಗಳು ನಡೆದವು. ಒಂದರಲ್ಲಿ ಪ್ರಸಿದ್ಧ ಪತ್ರಕರ್ತ ಪಿ.ಸಾಯಿನಾಥ ಜಾಗತೀಕರಣ ಬಡ ಭಾರತೀಯನ ಮೇಲೆ ಬೀರಿರುವ ದುಷ್ಪರಿಣಾಮಗಳನ್ನು ಇಡೀ ಕಾಂಗ್ರೆಸ್‌ಗೆ ಅತ್ಯಂತ ಸಮರ್ಥ ಮತ್ತು ಪರಿಣಾಮಕಾರಿ ಭಾಷಣದಲ್ಲಿ ಕಣ್ಣಿಗೆ ಕಟ್ಟುವಂತೆ ಹೇಳಿದರು. ಇನ್ನೊಂದು ಬಹಿರಂಗ ಗೋಷ್ಠಿಯಲ್ಲಿ ಅತ್ಯಂತ ಯಶಸ್ವಿಯಾದ 'ವಿಶ್ವ ಆರೋಗ್ಯ ಸಭೆ' ಚಳುವಳಿಯ ಇಬ್ಬರು ನಾಯಕರಾದ ಡಾ. ಕಾಸಿಮ್ ಮತ್ತು ಡಾ. ಮೀರಾ ಶಿವ ಆ ಚಳುವಳಿಯ ವ್ಯಾಪಕ ಅನುಭವಗಳನ್ನು ಹಂಚಿಕೊಂಡರು. ಒಟ್ಟು 60 ಪೇಪರುಗಳು ಚರ್ಚಿತವಾದ ಈ ಕಾಂಗ್ರೆಸ್ ಜಾಗತೀಕರಣ, ಅಗತ್ಯ ಔಷಧಿ, ಶಿಕ್ಷಣದ ಕಾವೀಕರಣ ಮುಂತಾದ ಹಲವು ನಿರ್ಣಯಗಳನ್ನು



ಚಟುವಟಿಕೆಗಳಿಂದ ಪರಿಸರಕ್ಕೆ ಪುನಃ ತುಂಬಿಕೊಡಲಾಗದ ಹಾನಿ ಆಗದಂತೆ, ಪ್ರಾಕೃತಿಕ ಸಂಪತ್ತುಗಳ ನಿರ್ವಹಣೆಯ ಸಾಧ್ಯತೆಗಳ ಬಗ್ಗೆ ಜನ-ವಿಜ್ಞಾನ ಸಂಘಟನೆಗಳು ತಮ್ಮ ಅನುಭವಗಳನ್ನು ಹಂಚಿಕೊಂಡವು. ದೊಡ್ಡ ಬೆಳವಣಿಗೆ ಯೋಜನೆಗಳ ಪರಿಸರ ಪರಿಣಾಮಗಳ ಹಲವು ಆಯಾಮಗಳ ಬಗೆಗೂ ತೀಕ್ಷ್ಣ ಚರ್ಚೆಯಾಯಿತು. ಪ್ರತಿ ದೊಡ್ಡ ಯೋಜನೆಗಳ ಪರಿಸರ ಹಾನಿಮಾಲಿನ್ಯ, ಸಂತ್ರಸ್ತರಿಗೆ ಪರಿಹಾರದ, ಜನರ ಜೀವನೋಪಾಯಗಳ ಮೇಲೆ ಪ್ರಹಾರ, ಇವೆಲ್ಲದರ ಒಟ್ಟು ಸಾಮಾಜಿಕ-ಆರ್ಥಿಕ ಲಾಭ-ನಷ್ಟದ ವಿಶ್ಲೇಷಣೆಯನ್ನು, ಆ ಯೋಜನೆಯಿಂದ ಜನರ ಪಾಲ್ಗೊಳ್ಳುವಿಕೆಯಿಂದ ನಿರ್ಧಾರವಾಗುವ ಚೌಕಟ್ಟು ಹೇಗೆ ಒದಗಿಸುವುದು ಎಂಬ ಬಗ್ಗೆ ಅಂಗೀಕರಿಸಿತು.

ಹಲವು ವರ್ಷಗಳ ನಂತರ ಜನ-ವಿಜ್ಞಾನ ಕಾಂಗ್ರೆಸ್‌ನಲ್ಲಿ ಬಾಗವಹಿಸಿದ ನನಗೆ ಜನ-ವಿಜ್ಞಾನ ಚಳುವಳಿ ಪ್ರಬುದ್ಧವಾಗಿ ಬೆಳೆದು, ದಾಪುಗಾಲಿನ ಹೆಜ್ಜೆ ಹಾಕುತ್ತಿರುವಂತೆ ಭಾಸವಾಯಿತು. ಸಾಕ್ಷರತೆ, ನಿರಂತರ ಶಿಕ್ಷಣ, ಜನಾರೋಗ್ಯ ಆಂದೋಲನ, ಸ್ವ-ಸಹಾಯ ಗುಂಪುಗಳು, ಸಹಕಾರಿಗಳು, ಮೈಕ್ರೋ ಉದ್ಯಮ, ಪರಿಸರ ಚಳುವಳಿ - ಹೀಗೆ ಹಲವು ಹತ್ತು ಆಯಾಮಗಳನ್ನು ಪಡೆದ ಚಳುವಳಿಗೆ ಈ ಎಲ್ಲದರ ಸಾಧ್ಯತೆ ಮತ್ತು ಮಿತಿ ಇವೆರೆಡರದ್ದೂ ಅರಿವು ಇರುವುದು ಕಂಡುಬಂತು. ಈಗಿರುವ ರಾಜಕೀಯ ಪಕ್ಷಗಳು ಸರ್ಕಾರ, ಕಂಪನಿಗಳು - ಇವೆಲ್ಲದರಿಂದ ದೂರ ನಿಂತು ಜನತಾ ಚಳುವಳಿಯಾಗಿ ಬೆಳೆಯುತ್ತಲೇ ವ್ಯಾಪಕ ಜನ-ಪರ ಕಂಡುಬಂತು. ಜನತೆಯನ್ನು ಹಲವು ಸ್ಥಳೀಯ-ಮಧ್ಯ ಪ್ರವೇಶ, ರಚನಾತ್ಮಕ ಕಾರ್ಯಕ್ರಮಗಳ ಮೂಲಕ ಕ್ರಿಯಾಶೀಲಗೊಳಿಸುತ್ತಾ, ಇಂದಿನ ಜನ-ವಿರೋಧಿ ಬೆಳವಣಿಗೆ- ಮಾದರಿಗಳನ್ನು ಪ್ರಶ್ನಿಸುತ್ತಾ ತನ್ನ ಬಹು-ಆಯಾಮ ಚಟುವಟಿಕೆಗಳ ಮೂಲಕ ಬದಲಿ ಜನಪರ ಬೆಳವಣಿಗೆಗೆ ಮಾದರಿ ನಿರ್ಮಿಸುತ್ತಾ ಜತೆಗೆ ಜನರಿಗೆ ಸಾಧ್ಯವಾದಷ್ಟು ಇಂದಿನ ಸಮಸ್ಯೆಗಳಿಗೆ ಪರಿಹಾರ ಒದಗಿಸುತ್ತಾ ಸಮಗ್ರ- ಸಾಮಾಜಿಕ- ಆರ್ಥಿಕ-ರಾಜಕೀಯ ಬೆಳವಣಿಗೆಗೆ ಹಾದಿ ಮಾಡಿಕೊಡುವುದು - ಜನ ವಿಜ್ಞಾನ ಚಳುವಳಿಯ ಹೆಗ್ಗಳಿಕೆ ಎನ್ನಬಹುದು. ಡಾ. ಇಕಬಾಲ್ ಅಂತಿಮ ಗೋಷ್ಠಿಯಲ್ಲಿ ಹೇಳಿದಂತೆ ಮೂರು ವರ್ಷಗಳ ಹಿಂದಿನ ಸಾಮ್ರಾಜ್ಯಶಾಹಿ-ಜಾಗತೀಕರಣವಲ್ಲದೆ 'ಬೇರೆ ದಾರಿ ಇಲ್ಲ' ಎಂಬ ಅನಿಸಿಕೆಯಿಂದ, ಬೆಳವಣಿಗೆಗೆ ಜನರ ಬದಲಿ ದಾರಿ ಇದೆ' ಎಂದು ತೋರಿಸಿಕೊಟ್ಟ ಮಹಾನ್ ಬೆಳವಣಿಗೆಗೆ ಜನವಿಜ್ಞಾನ ಚಳುವಳಿ ಸಹ ತನ್ನ

ಜನ ವಿಜ್ಞಾನ ಕಾಂಗ್ರೆಸ್‌ನಲ್ಲಿ ಕೇಳಿಬಂದ ದನಿಗಳು

- ವೈದಿಕ ಗಣಿತದಲ್ಲಿ ವೇದದ ಗಂಧವೂ ಇಲ್ಲ, ಗಣಿತದ ಗಾಳಿಯೂ ಇಲ್ಲ

- ಡಾ. ಕಪಿಲ್ ಪರಾಂಜಪೆ

* * *

- ಮೂಲಭೂತವಾದಿಗಳಿಗೆ ತಂತ್ರಜ್ಞಾನ ಕಂಡರೆ ಪ್ರಾಣ. ವಿಜ್ಞಾನ ಅಂದರೆ ಮಾತ್ರ ಅವರು ಕಿಡಿಕಾರುತ್ತಾರೆ. ಜೋಶಿ ಅವರಿಗೆ ಬಾಂಬು ತಯಾರಿಸುವ ತಂತ್ರಜ್ಞಾನ ಬೇಕು. ಅವರ ರೂಮಿಗೆ ಏರ್‌ಕಂಡಿಶನ್ ಬೇಕು, ಆದರೆ ಎಲ್ಲವನ್ನು ಮೂಲಭೂತವಾಗಿ ಅರ್ಥೈಸುವ ವಿಜ್ಞಾನ ಬೇಡ ಅವರಿಗೆ.

- ಡಾ. ಜಯರಾಮನ್

* * *

- 93ನೇ ತಿದ್ದುಪಡಿ ಇನ್ನಷ್ಟು ಹೆಚ್ಚು ಮಕ್ಕಳನ್ನು ಸ್ಕೂಲಿಗೆ ಕಳಿಸುವ ಬದಲು, ಹೆಚ್ಚು ಪಾಲಕರನ್ನು ಜೈಲಿಗೆ ಕಳಿಸಬಹುದು ಅಷ್ಟೇ!

- ವಿನೋದಿ ರೈನಾ

* * *

- ನಾವು 8ನೇ ಕಾಂಗ್ರೆಸ್‌ಗೆ ನಲಂದಾದಲ್ಲಿ ಮೂರು ವರ್ಷದ ಹಿಂದೆ ಸೇರಿದ್ದಾಗ ದೇಶದ, ಜಗದ ತುಂಬೆಲ್ಲಾ ಜಾಗತೀಕರಣಕ್ಕೆ 'ಬದಲಿ ಇಲ್ಲ' ಎಂಬ ಭಾವನೆ ಇತ್ತು (There is no Altranative - TINA) ಆದರೆ ನಾವು ಈಗ 9ನೇ ಕಾಂಗ್ರೆಸ್‌ಗೆ ಚೆನ್ನೈನಲ್ಲಿ ಸೇರಿರುವಾಗ ಜಾಗತೀಕರಣಕ್ಕೆ 'ಜನತೆಯೇ ಬದಲಿ ರೂಪಿಸಿದ್ದಾರೆ' (There is people Altranative - TIPA) TINA ದಿಂದ TIPA ಈ ಮೂರು ವರ್ಷಗಳ ಜನವಿಜ್ಞಾನ ಮತ್ತು ಜನರ ಎಲ್ಲಾ ಚಳುವಳಿಗಳ ಸಾರಾಂಶ ಮತ್ತು ಸಾಧನೆ ಕೂಡಾ

- ಡಾ. ಬಿ.ಇಕ್‌ಬಾಲ್

* * *

- ಕೇರಳದಲ್ಲಿ ನಮ್ಮ ಚಳುವಳಿ ಸೋಪು ಮಾಡುವ 'ಕಿಟ್'ಗಳನ್ನು ಮನೆ ಮನೆಗೆ ತಲುಪಿಸಿದೆ. ಸಾವಿರಾರು ಮಹಿಳೆಯರಿಗೆ ಸೋಪು 'ಕಿಟ್'ಗಳನ್ನು ತಯಾರು ಮಾಡಲು ತರಬೇತಿ ನೀಡಿದೆ. ಜಾಗತೀಕರಣಕ್ಕೆ ಪ್ರತಿರೋಧ ಒಡ್ಡಲು, ನಾವು ಈ 'ಸೋಪು ಕಿಟ್'ಗಳನ್ನು ಬಳಸಿಕೊಂಡಿದ್ದೇವೆ. 'ಸೋಪು ಕಿಟ್' ನಮ್ಮ ಚಳುವಳಿಯ 'ಚರಖಾ' (ಸ್ವಾತಂತ್ರ್ಯ ಚಳುವಳಿಯಲ್ಲಿ 'ಚರಖಾ' ಪ್ರತಿರೋಧದ ಪ್ರತೀಕವಾದಂತೆ) ಆಗಿದೆ.

- ಪುಷ್ಪಾ

ಉಳಿದು ಹೋದ ಮಾತು.....

ಪುಟ 12 ರಿಂದ

'ನಲ್ವತ್ತೊಂದನೆಯವ' ನೆನಪಾಯಿತು. ಪುಟ್ಟ ಕ್ಯೂಬಾ ಆರ್ಥಿಕ ದಿಗ್ಬಂಧನದಿಂದಾಗಿ ತನ್ನ ಎದೆಯಾಳದ ಭಾವನೆಗಳನ್ನು ಸುಡಬೇಕಾಗಿ ಬಂದಿತ್ತು.

ಇದು ಪ್ರತೀ ಹೆಜ್ಜೆಗೂ ಅರಿವಿಗೆ ಬಂದಿತು. ಕ್ಯೂಬಾ ಹಾಡು, ಕುಣಿತ, ಕಾವ್ಯವನ್ನು ಹುಚ್ಚರಂತೆ ಪ್ರೀತಿಸುವವರ ದೇಶ. ಪ್ರತಿಯೊಬ್ಬರಿಗೂ ಸಾಕ್ಷರರು ಮಾತ್ರವಲ್ಲ ಜ್ಞಾನ ಪಿಪಾಸುಗಳು. ಹಾಗಾಗಿ ಇನ್ನಷ್ಟು ಮತ್ತಷ್ಟು ಓದಲು ಬಂಡಿಗಟ್ಟಲೆ ಪುಸ್ತಕಗಳು ಬೇಕು. ಆದರೆ ಕ್ಯೂಬಾ ನೊಂದು ಹೋಗಿತ್ತು.

ಕ್ಯೂಬಾ ಸಕ್ಕರೆಯನ್ನೂ ಅಂತೆಯೇ ಗಿಟಾರ್ ತಂತಿಗಳನ್ನೂ ನೀಡಿತು. ಕ್ಯೂಬಾ ಔಷಧಿಯನ್ನು ಅಂತೆಯೇ ಪುಟ ಪುಟಗಳಲ್ಲಿ ಕಾವ್ಯ ಪ್ರತಿಮೆಯನ್ನೂ ನೀಡಿತು.

'ಕ್ಯೂಬಾದ ಕವನ ಸಂಕಲಗಳಲ್ಲಿ ನಾನು ಪ್ರತಿಮೆಗಳ ದೋಣಿಯಲ್ಲಿ ತೇಲಿಹೋದೆ. ಕಥೆಗಳ ನದಿಗಳಲ್ಲಿ ಮುಳುಗಿ ಎದ್ದೆ' ಎಂದು ನಿಕರಾಗುವಾದ ಸ್ಯಾಂಡಿನಿಸ್ಟಾ ನ್ಯಾಷನಲ್ ಲಿಬರೇಶನ್ ಫ್ರಂಟ್‌ನ ಸ್ಥಾಪಕ ಟಾಮಸ್ ಬೋರ್ಜ್ ಬಣ್ಣಿಸಿದ್ದರು.

ಕ್ಯೂಬಾದ ಸಕ್ಕರೆ ಅಂತೆಯೇ ಪುಸ್ತಕ, ಹಾಡು, ಕುಣಿತ ಎಲ್ಲದರ ಮೇಲೆ ದಿಗ್ಬಂಧನದ ತೂಗುಕತ್ತಿ ತೂಗಾಡುತ್ತಿತ್ತು ಕಾಗದದ ಅಭಾವದಿಂದಾಗಿ ಪುಸ್ತಕಗಳು. ಪತ್ರಿಕೆಗಳು ಮುದ್ರಣಗೊಳ್ಳುವುದೇ ದುಸ್ತರವಾಗಿತ್ತು.

ಕ್ಯೂಬಾ ಪುಸ್ತಕ ಪ್ರಿಯ ದೇಶ. ಹೀಗಾಗಿಯೇ ಕ್ಯೂಬಾ ಸರ್ಕಾರ ಅತ್ಯಂತ ಕಡಿಮೆ ಬೆಲೆಯಲ್ಲಿ ಪುಸ್ತಕಗಳು ಜನರ ಕೈಗೆಟುಕುವಂತೆ ನೋಡಿಕೊಂಡಿತ್ತು. ಒಂದು ಪೇಸೋ ನೀಡಿದರೆ ಒಂದು ಮಹಾಕೃತಿ ಕ್ಯೂಬನ್ನರಿಗೆ ಸಿಗುತ್ತಿತ್ತು. ಸರ್ವಾಂಟಿಸ್‌ನ 'ಡಾನ್ ಕ್ವಿಕ್ಸೋಟ್' ಕ್ಯೂಬನ್ನರ ಅತ್ಯಂತ ಪ್ರೀತಿಯ ಪುಸ್ತಕ. ಇದು ಹಾಗೂ ವಿಶ್ವದ ಮಹತ್ವದ ಕೃತಿಗಳು ಸಬ್ಸಿಡಿ ಪಡೆದು ಸುಲಭ ಬೆಲೆಗೆ ಮಾರಾಟವಾಗುತ್ತಿದ್ದವು. ಪ್ರತೀ ವರ್ಷ ಪುಸ್ತಕದ ಜಾತ್ರೆ ಜರುಗಲೇ ಬೇಕು.

ಕ್ಯೂಬಾದಲ್ಲಿ ರಸ್ತೆ ಬದಿ ಅಂಗಡಿ ಎಂದರೆ ಅದು ಪುಸ್ತಕಗಳದ್ದೇ ಎಂದು ಕಣ್ಣುಮುಚ್ಚಿ

ಹೇಳಬಹುದು. ಪುಸ್ತಕಗಳ ಜೊತೆಗೆ ಮನೆಗೆ ಹೋಗಲು ತಯಾರಾಗಿ ನಿಂತಕಲಾಕೃತಿಗಳು. ಹವಾನಾದ ಚರ್ಚ್ ಮುಂದಿರಲಿ, ಬೀಚ್‌ನ ಪಕ್ಕವಿರಲಿ, ಕ್ಯಾಸಿನೋಗಳ ಬಳಿಯಾಗಲಿ ಪುಸ್ತಕಗಳ ರಾಶಿ ಇದ್ದ ಕಾಲವೊಂದಿತ್ತು.

ಅಮೇರಿಕಾ ತಲಾ ಜನಸಂಖ್ಯೆಗೆ ಹೋಲಿಸಿದರೆ ಎಷ್ಟು ಪುಸ್ತಕವನ್ನು ಪ್ರಕಟಿಸುತ್ತಿತ್ತೋ ಅಷ್ಟೇ ಪುಸ್ತಕವನ್ನು ಕ್ಯೂಬಾ ಸಹಾ ಪ್ರಕಟಿಸುತ್ತಿತ್ತು. ಮೂರನೇ ಜಗತ್ತಿನ ದೇಶಗಳಲ್ಲಂತೂ ಕ್ಯೂಬಾ ಸದಾ ಮೊದಲ ಸ್ಥಾನದಲ್ಲಿರುತ್ತಿತ್ತು.

ಕ್ಯೂಬಾದ ಮೇಲೆ ವಿಧಿಸಿರುವ ದಿಗ್ಬಂಧನ ಶಿಕ್ಷಣ, ವಿಜ್ಞಾನ ಎತ್ತಿ ತೋರಿಸಿತು.

ಯಾವುದೇ ಪುಸ್ತಕದ 20 ಸಾವಿರ ಪ್ರತಿಗಳನ್ನು ಮುದ್ರಿಸುತ್ತಿದ್ದ ಪ್ರಕಾಶಕರು ಈ ಹೊಡೆತದಿಂದಾಗಿ 2 ಸಾವಿರ ಪ್ರತಿಗೆ ಇಳಿದರು.

ಕ್ಯೂಬಾದ ಸಾಹಿತ್ಯವನ್ನೂ ಸಹಾ ಅಮೇರಿಕಾ ನಿಷೇಧಿಸಿದೆ. ಅಂತೆಯೇ ಅಮೇರಿಕಾದ ಯಾವುದೇ ಮುದ್ರಿತ ಕೃತಿ ಕ್ಯೂಬಾಗೆ ಬರುವಂತಿಲ್ಲ. ಇದರೊಂದಿಗೇ ಅಮೇರಿಕಾದಲ್ಲಿ ನಡೆಯುವ ಸಾಹಿತ್ಯ, ಸಾಂಸ್ಕೃತಿಕ ಸ್ಪರ್ಧೆಗಳಲ್ಲಿ, ಉತ್ಸವಗಳಲ್ಲಿ ಭಾಗವಹಿಸಲು ಸಹಾ ವೀಸಾ ನಿರಾಕರಿಸಲಾಗುತ್ತಿದೆ. ಆಸ್ಕರ್ ಬಹುಮಾನ ಸಮಾರಂಭದಲ್ಲಿ ಕ್ಯೂಬಾ ಬ್ಯಾಲೆ ಪ್ರದರ್ಶಿಸಲು ಆಹ್ವಾನ ಬಂದರೂ ಸಹಾ ಕಲಾವಿದರಿಗೆ ವೀಸಾ ನಿರಾಕರಿಸಲಾಯಿತು. ಕ್ಯೂಬಾದ ಜಾನಪದ ಕಲಾವಿದರಿಗೆ ಅಮೇರಿಕಾದಲ್ಲಿ ವ್ಯಾಪಕ ಬೇಡಿಕೆ ಇದ್ದರೂ ಸಹಾ ವೀಸಾ ಅಡ್ಡಗೋಡೆಯಾಗಿದೆ. ಈ ಧೋರಣೆಯ ವಿರುದ್ಧ ಅಮೇರಿಕಾ ಸರ್ಕಾರದ ವಿರುದ್ಧ ಸಂಗೀತ ತಂಡ 'ಮೆಜ್ನಾ' ನ್ಯಾಯಾಲಯದ ಕಟ್ಟೆ ಹತ್ತಿದೆ.

ಅಮೇರಿಕಾದ ಸಾಹಿತಿಗಳು, ಕಲಾವಿದರೂ ಕ್ಯೂಬಾಗೆ ಹೋಗಬಾರದು ಇರಬಾರದು ಎಂದು ನಿಷೇಧವನ್ನು ಹೇರಿದ್ದರೂ ಸಹಾ ಜೇನ್‌ಫಾಂಡಾರಂತಹ ಹಲವು ಕಲಾವಿದರು ಅಮೇರಿಕಾದ ಕಾನೂನು ಬದಿಗೆ ತಳ್ಳಿ ಕ್ಯೂಬಾಗೆ ಬಂದಿದ್ದಾರೆ. ಹೆಮ್ಮಿಂಗ್ವೇಯವರಂತೂ ಕ್ಯೂಬಾದಲ್ಲಿಯೇ ಮನೆ ಮಾಡಿ ಕ್ಯೂಬನ್ನರಾಗಿ ಹೋಗಿದ್ದಾರೆ. ಮಾತ್ರವಲ್ಲ ಹೆಮ್ಮಿಂಗ್ವೇ ಬಾಯಿಂದ ಕ್ಯೂಬಾ ಸರ್ಕಾರದ ವಿರುದ್ಧ ಮಾತನಾಡಿಸಲು ಹೋದ ಪತ್ರಕರ್ತರು 'ಕ್ಯೂಬಾ ಹಾಗೂ ಅಲ್ಲಿನ ಕ್ರಾಂತಿಯ ಪರವಾಗಿ ನಾನಿದ್ದೇನೆ' ಎಂಬ ಉತ್ತರ ಪಡೆದರು.

ರಾಜಕೀಯ ಮತ್ತು ಜನಚಳುವಳಿ ಜಿಲ್ಲೆಯಾದ್ಯಂತ ಹಬ್ಬಿಸಲು ನಿರ್ಧಾರ


ವರ್ಣರಂಜಿತ ಮೆರವಣಿಗೆ

ಈ ಅವಧಿಯಲ್ಲಿ ಸಿಪಿಐ(ಎಂ) ಪಕ್ಷವು ಉದಾರಕೀರಣದ ಆರ್ಥಿಕ ನೀತಿಗಳು, ಜನತೆಯ ಸಂಕಷ್ಟಗಳ ವಿರುದ್ಧ ಹಾಗೂ ಕೋಮುವಾದ, ಕೇಂದ್ರ-ರಾಜ್ಯ ಸರ್ಕಾರಗಳ ನೀತಿಗಳ ವಿರುದ್ಧ ಹಲವಾರು ಹೋರಾಟಗಳನ್ನು ನಡೆಸಿದೆ. ಇವು ಒಂದೆರೆಡು ನಡೆದರೆ ಸಾಲದು. ಇನ್ನಷ್ಟು ಆಳವಾಗಿ ವಿಶಾಲವಾಗಿ ಮತ್ತು ಜಿಲ್ಲೆಯಾದ್ಯಂತ ರಾಜಕೀಯ ಹಾಗೂ ಜನತೆಯ ಚಳುವಳಿಯಾಗಿ ಬೆಳೆಸಬೇಕಿದೆ ಎಂದು ಗುರುತಿಸಲಾಗಿದೆ. ಉದಾರೀಕರಣದ ಹಿನ್ನಲೆಯಲ್ಲಿ ಕೋಲಾದ ಪರಿಸ್ಥಿತಿ, ವಿಶ್ಲೇಷಣೆ ಇಲ್ಲಿದೆ.

ಸಿಪಿಐ(ಎಂ) ಕೋಲಾರ ಜಿಲ್ಲಾ ಸಮ್ಮೇಳನ

ಸಿಪಿಐ(ಎಂ) ಕೋಲಾರ ಜಿಲ್ಲಾ 11ನೇ ಸಮ್ಮೇಳನವು ಕೋಲಾರದ ಕೆ.ವಿ.ಆರ್.ಸಿ. ಸಭಾಂಗಣದಲ್ಲಿ 2002 ಜನವರಿ 8 ರಿಂದ 10 ರವರೆಗೆ ಜರುಗಿತು. ಈ ಪ್ರದೇಶಕ್ಕೆ ಕಾಂ. ಪಿ.ರಾಮಚಂದ್ರರಾವ್ ನಗರ ಎಂದೂ, ಕಾಂ. ಎನ್.ಕೆ.ಉಪಾಧ್ಯಾಯ ವೇದಿಕೆಯೆಂದು ಹೆಸರಿಸಲಾಗಿತ್ತು. ಆರಂಭದಲ್ಲಿ ಹಿರಿಯ ಸಂಗಾತಿ ಕಾಂ.ಸವರಿದಾಸ್ ಧ್ವಜಾರೋಹಣ ಮಾಡಿದರು. ಸಮ್ಮೇಳನಕ್ಕೆ ಮುನ್ನ ಕೋಲಾರ ನಗರದಲ್ಲಿ ಅತ್ಯಂತ ಆಕರ್ಷಕವಾದ ಸುಮಾರು 3000 ಕ್ಕೂ ಅಧಿಕವಿದ್ದ ಬೃಹತ್ ಮೆರವಣಿಗೆ ಮತ್ತು ಬಹಿರಂಗ ಸಭೆ ಜರುಗಿತು. ಬಹಿರಂಗಸಭೆಯನ್ನುದ್ದೇಶಿಸಿ ಕಾಂ. ಸೂರಿ, ವಿ.ಜೆ.ಕೆ.,ಶ್ರೀರಾಮರೆಡ್ಡಿ, ಬಯ್ಯಾರೆಡ್ಡಿ ಮುಂತಾದವರು ಮಾತನಾಡಿದರು. ಈ ಸಮ್ಮೇಳನದಲ್ಲಿ ಪಕ್ಷದ ರಾಜ್ಯ ಕಾರ್ಯದರ್ಶಿ ಮಂಡಳಿಯಿಂದ ಸೂರಿ, ವಿ.ಜೆ.ಕೆ., ಜಿ.ಎನ್.ನಾಗರಾಜ್ ಉಪಸ್ಥಿತರಿದ್ದು ಮಾರ್ಗದರ್ಶನ ಮಾಡಿದರು. 21 ಜನರ ನೂತನ ಜಿಲ್ಲಾ ಸಮಿತಿಯನ್ನು ಆಯ್ಕೆ ಮಾಡಲಾಗಿದ್ದು ಜಿ.ವಿ.ಶ್ರೀರಾಮರೆಡ್ಡಿಯವರು ಕಾರ್ಯದರ್ಶಿಗಳಾಗಿ ಮರು ಆಯ್ಕೆಯಾದರು.

ಜಿಲ್ಲೆಯ ಆರ್ಥಿಕ ಪರಿಸ್ಥಿತಿ

ಕೋಲಾರ ಜಿಲ್ಲೆ ಕೃಷಿ ಪ್ರಧಾನ ಜಿಲ್ಲೆ. ಈ ಜಿಲ್ಲೆಯ ಒಟ್ಟು ಜನಸಂಖ್ಯೆಯ ಶೇಕಡಾ 85 ರಷ್ಟು ಜನರು ಕೃಷಿಯ ಮೇಲೆ ಅವಲಂಬಿತರಾಗಿದ್ದಾರೆ. ಜಿಲ್ಲೆಯಲ್ಲಿ ಬಹಳ ಪ್ರಮುಖವಾದ ಮತ್ತು ಪ್ರತಿಷ್ಠಿತವಾದ ಎರಡು ಸಾರ್ವಜನಿಕ ಕ್ಷೇತ್ರದ ಕಾರ್ಖಾನೆಗಳಾದ ಬಿಜಿಎಂಎಲ್ ಮತ್ತು ಬಿಇಎಂಎಲ್ ಕಾರ್ಖಾನೆಗಳಿದ್ದು, ಅದರಲ್ಲಿ ಹಳೆಯದಾದ ಮತ್ತು ಪ್ರತಿಷ್ಠಿತ ಜಗತ್ ಪ್ರಸಿದ್ಧ ಚಿನ್ನದ ಗಣಿ ಕಾರ್ಖಾನೆಯು ಈಗ ಮುಚ್ಚಲ್ಪಡುತ್ತಿದೆ. ಹಾಗೆಯೇ ಇನ್ನೊಂದು ಬಹಳ ಮುಖ್ಯವಾದ ಬಿಇಎಂಎಲ್ ಕಾರ್ಖಾನೆಯೂ ಸಹ. ಕೇಂದ್ರ ಸರ್ಕಾರಗಳ ಧೋರಣೆಗಳಿಂದಾಗಿ ಹಂತಹಂತವಾಗಿ ಸಂಕಷ್ಟಕ್ಕೊಳಗಾಗುತ್ತಿದೆ. ಹಿಂದಿನ ಮತ್ತು ಇಂದಿನ ಕೇಂದ್ರ ಸರ್ಕಾರಗಳು ಅನುಸರಿಸಿದ ಮತ್ತು ಅನುಸರಿಸುತ್ತಿರುವ ಖಾಸಗೀಕರಣ ಮತ್ತು ಉದಾರೀಕರಣ ನೀತಿಗಳಿಂದಾಗಿ ಈ ಪ್ರತಿಷ್ಠಿತ ಕಾರ್ಖಾನೆಗಳು ಈ ದುಸ್ಥಿತಿಗೆ ಇಳಿದಿವೆ. ಇನ್ನು ಕೋಲಾರ ಮತ್ತು ಇದರ ಸುತ್ತಮುತ್ತಲಿದ್ದ ಸಣ್ಣಪುಟ್ಟ ಕಾರ್ಖಾನೆಗಳು ಸಹ ವಿಶ್ವವ್ಯಾಪಾರ ಸಂಘಟನೆಯ ಕೂಸುಗಳಾದ ಜಾಗತೀಕರಣ, ಉದಾರೀಕರಣ ಮತ್ತು ಖಾಸಗೀಕರಣಗಳಿಂದಾಗಿ ಸಂಪೂರ್ಣ ನಾಶವಾಗಿದೆ. ಜಿಲ್ಲೆಯ ಗೌರಿಬಿದನೂರಿನ ಸಕ್ಕರೆ, ಸನ್‌ಸಿಲ್ಕ್ , ಮಾಲೂರಿನ ಹಂಚಿನ ಕಾರ್ಖಾನೆಗಳು ಮತ್ತು ಸಣ್ಣಪುಟ್ಟ ಇತರೆ ಕಾರ್ಖಾನೆಗಳಾದ ರೇಷ್ಮೆ ಕೈಗಾರಿಕೆ ತಾಲ್ಲೂಕು ಕೇಂದ್ರಗಳಲ್ಲಿರುವ ಆಟೋ ಇಂಜನಿಯರಿಂಗ್ ಇವೆಲ್ಲವೂ ಅವಸಾನದ ಅಂಚಿನಲ್ಲಿವೆ. ಹಿಂದೆ ಕೈಗಾರಿಕೀಕರಣವೇ ಕಾಣದಾಗಿದ್ದ ಈ ಜಿಲ್ಲೆ ಇಂದು ಇದ್ದ ಹಲವು ಸಣ್ಣ ಮತ್ತು ದೊಡ್ಡ ಕಾರ್ಖಾನೆಗಳನ್ನು ಕಳೆದುಕೊಂಡು ರಾಜ್ಯದ ಹಿಂದುಳಿದ ಜಿಲ್ಲೆಗಳ ಪಟ್ಟಿಗೆ ಸೇರ್ಪಡೆಯಾಗಿದೆ.

ಜಿಲ್ಲೆಯಲ್ಲಿ ಶೇಕಡಾ 85 ರಷ್ಟು ಭಾಗದಷ್ಟು ಜನರು ಕೃಷಿಯ ಮೇಲೆ ಅವಲಂಬಿತರಾಗಿದ್ದಾರೆ. ಜಿಲ್ಲೆಯಲ್ಲಿ ಭೂಮಿಯ ಹಂಚಿಕೆ, ಅಸಮಾನವಾಗಿದೆ. ಆದರೂ ಭೂಹೀನರ ಸಂಖ್ಯೆ ಕಡಿಮೆ. ಇದೇ ರೀತಿಯಲ್ಲಿ ಭೂಮಾಲೀಕರು ಕಡಿಮೆ ಇದ್ದು ಮಧ್ಯಮವರ್ಗದವರೇ ಹೆಚ್ಚು. ಸಾವಿರಾರು ಕುಟುಂಬಗಳು ಸರ್ಕಾರಿ ಬಂಜರು ಭೂಮಿ, ಅರಣ್ಯ ಭೂಮಿಯನ್ನು ಸ್ವಾಧೀನಪಡಿಸಿಕೊಂಡು ಹತ್ತಾರು ವರ್ಷಗಳಿಂದ ಸಾಗುವಳಿ ಮಾಡುತ್ತಿದ್ದಾರೆ. ಇದರಲ್ಲಿ ಇನ್ನೂ ಗಣನೀಯ ಸಂಖ್ಯೆಯಷ್ಟು ಜನರು ಭೂಮಿಯನ್ನು ಪಡೆಯಲಿಕ್ಕೆ ಕಮ್ಯುನಿಸ್ಟ್ ಪಕ್ಷ ಮತ್ತು ರೈತ ಮತ್ತು ಕೃಷಿಕೂಲಿಗಾರರ ಸಂಘಟನೆಗಳ ನಾಯಕತ್ವದಲ್ಲಿ 1950-70 ರ ದಶಕದಲ್ಲಿ ನಡೆಸಿದ ಹೋರಾಟಗಳೇ ಕಾರಣವಾಗಿದೆ. ಆದರೂ ಭೂಹೀನರು ಕೂಲಿಕಾರರು ಗಣನೀಯ ಸಂಖ್ಯೆಯಲ್ಲಿ ಇದ್ದು, ಇವರಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಕ್ಕೆ ಸೇರಿದವರೇ ಹೆಚ್ಚು.

ಜಿಲ್ಲೆಯಲ್ಲಿ ಯಾವುದೇ ನೀರಾವರಿ ಯೋಜನೆಗಳಿಲ್ಲ. ಇಲ್ಲಿ ಬಹುತೇಕ ಕೃಷಿಯು ಮಳೆಯಾಧಾತವಾಗಿದ್ದು, ರೈತಾಪಿ ಜನರ ಜೀವನ ಬಹುತೇಕ ಸಂದರ್ಭಗಳಲ್ಲಿ ಅನಿಶ್ಚತತೆಗೆ ದೂಡಲ್ಪಟ್ಟಿದೆ. ಅಂತರ್ಜಲ ತೀರ ಕೆಳಕ್ಕೆ ಹೋಗಿದ್ದು ಬಾವಿಗಳು ನಿರುಪಯುಕ್ತವಾಗಿವೆ. ಕೃಷಿಕರು ನೀರಿಗಾಗಿ ಮಳೆ ಅಥವಾ ಕೊಳವೆಬಾವಿಗಳನ್ನು ಆಶ್ರಯಿಸಬೇಕಾಗಿದೆ. ಕೊಳವೆಬಾವಿ ತೆಗೆದು ಕೃಷಿ ಮಾಡಬೇಕಾದರೆ ಲಕ್ಷಾಂತರ ರೂ.ಗಳ ಖರ್ಚು ಮಾಡಬೇಕಾಗಿದೆ. ಇದು ಮಧ್ಯಮ ಮತ್ತು ಶ್ರೀಮಂತ ರೈತರಿಗೆ ಮಾತ್ರ ಸಾಧ್ಯ. ಕೊಳವೆಬಾವಿಗಳನ್ನು ಜಿಲ್ಲೆಯಲ್ಲಿ ವಿಪರೀತವಾಗಿ ತೋಡುತ್ತಿರುವುದರಿಂದ ಅಂತರ್ಜಲ ಮಟ್ಟ ತೀರಾ ಕೆಳಮಟ್ಟಕ್ಕೆ ಹೋಗಿ ಕುಡಿಯುವ ನೀರು ವಿಷಪೂರಿತವಾಗಿ, ಇನ್ನೊಂದೆಡೆಪ್ರಕೃತಿಯ ಮೇಲೆ ಗಂಭೀರ ಪರಿಣಾಮಗಳಾಗುತ್ತಿವೆ. 1995 ರಲ್ಲಿ ಈ ಜಿಲ್ಲೆಯನ್ನು ಉಪಗ್ರಹಗಳ ಮುಖಾಂತರ ಮಾಡಿರುವ ಸರ್ವೆ ಪ್ರಕಾರ ಕೋಲಾರ ಜಿಲ್ಲೆಯಲ್ಲಿ ಈಗಿನ ಪ್ರಮಾಣದಲ್ಲಿ ಅಂತರ್ಜಲವನ್ನು ಇನ್ನೂ 10-15 ವರ್ಷಗಳ ಕಾಲತೆಗೆದರೆ ಇಡೀ ಕೋಲಾರ ಜಿಲ್ಲೆ ಬರಡು ಮತ್ತು ಮರುಭೂಮಿ ಆಗುತ್ತದೆ. ಈ ಅಂತರ್ಜಲದ ಶೋಷಣೆಯ ಪ್ರಮಾಣವನ್ನು ತಡೆದು ಜಿಲ್ಲೆಯ ನೀರಾವರಿಯ ಬಗ್ಗೆ ಪರ್ಯಾಯವನ್ನು ಹುಡುಕದಿದ್ದರೆ ಇಡೀ ಜಿಲ್ಲೆ ಶಾಶ್ವತ ಕ್ಷಾಮ ಜಿಲ್ಲೆಯಾಗಿ ಜನರ ಜೀವನವೇ ದುರ್ಬರವಾಗುತ್ತದೆ.

ಬದುಕಿನ ಆಸೆಯಿಂದಾಗಿ ಲಕ್ಷಾಂತರ ರೂ.ಗಳ ಸಾಲಸೋಲ ಮಾಡಿ ಕೊಳವೆ ಬಾವಿ ತೆಗೆದರೆ ಅದರಿಂದ ಬರುವ ಫಸಲಿಗೆ ಸರಿಯಾದ ಬೆಲೆ ಸಿಗದೆ ರೈತರು ದಿವಾಳಿ ಆಗುತ್ತಿದ್ದಾರೆ. 1998 ರ ನಂತರ ಪ್ರತ್ಯೇಕವಾಗಿ ಬಿಜೆಪಿ ನೇತೃತ್ವದ ಎನ್‌ಡಿಎ ಸರ್ಕಾರ ಕೇಂದ್ರದಲ್ಲಿ ಅಧಿಕಾರಕ್ಕೆ ಬಂದ ಮೇಲೆ ವಿಶ್ವ ವ್ಯಾಪಾರ ಸಂಘಟನೆಯ ಎಲ್ಲಾ ಷರತ್ತುಗಳನ್ನು ಸಾರಾಸಗಟಾಗಿ ಜಾರಿ ಮಾಡಲು ಪ್ರಾರಂಭಿಸಿದ ನಂತರ ಜಿಲ್ಲೆಯ ರೈತರ ಸ್ಥಿತಿ ತೀರಾ ಗಂಭೀರವಾಗತೊಡಗಿದೆ. ವಿದೇಶಿ ವಸ್ತುಗಳ ರಫ್ತಿನ ಮೇಲೆ ಇದ್ದ ಪ್ರಮಾಣಾತ್ಮಕ ನಿರ್ಬಂಧವನ್ನು ತೆಗೆದುಹಾಕಿದ ಮೇಲೆ ಜಿಲ್ಲೆಯ ರೈತರ ಬುಕಿಗೆ ಬರೆ ಎಳೆದಂತೆ ಆಗಿದೆ. ಈ ಜಿಲ್ಲೆಯ ಪ್ರಮುಖ ಬೆಳೆಗಳಾದ ತರಕಾರಿ, ರೇಷ್ಮೆ ಮತ್ತು ಹೈನುಗಾರಿಕೆ ಮೇಲೆ ಗಂಭೀರ ಪರಿಣಾಮ ಬೀರಿದ್ದು, ಲಕ್ಷಾಂತರ ರೈತ ಕುಟುಂಬಗಳು ಕಂಗಾಲಾಗಿವೆ. ಕೇಂದ್ರ ಸರ್ಕಾರ ಕೃಷಿರಂಗಕ್ಕೆ ನೀಡುತ್ತಿದ್ದ ಸಬ್ಸಿಡಿಗಳನ್ನು ತೆಗೆದು ರೈತರ ಗಾಯದ ಮೇಲೆ ಬರೆ ಎಳೆದಂತಾಗಿದೆ. ಇದರ ಜೊತೆಗೆ ಜಿಲ್ಲೆಯು ತೀವ್ರ ವಿದ್ಯುತ್ ಕ್ಷಾಮ ಎದುರಿಸುತ್ತಿದೆ, ಇಡೀ ರಾಜ್ಯದಲ್ಲೇ ಅತಿ ಹೆಚ್ಚು ಕೊಳವೆ ಬಾವಿಗಳನ್ನು ಹೊಂದಿರುವ ಜಿಲ್ಲೆಯೆಂಬ ಹೆಗ್ಗಳಿಕೆಗೆ ಪಾತ್ರವಾಗಿರುವ ಈ ಜಿಲ್ಲೆಯ ಕೃಷಿಗೆ ವಿದ್ಯುತ್ ಆಧಾರ. ಆದರೆ ವಿದ್ಯುತ್ ಸರಬರಾಜಿನಲ್ಲಿರುವ ಅಸಮತೋಲನ ಅನಿಶ್ಚತತೆ, ಕಡಿಮೆ ವೋಲ್ಟೇಜ್‌ನಿಂದಾಗಿ ಅಲ್ಪಸ್ವಲ್ಪ ನೀರಿದ್ದರೂ ಬೆಳೆಯನ್ನು ತೆಗೆಯಲಾರದೆ ರೈತರು ಪರಿತಪಿಸುತ್ತಿದ್ದಾರೆ. ಇತ್ತೀಚೆಗೆ ರಾಜ್ಯ ಸರ್ಕಾರವು ವಿದ್ಯುತ್ ದರಗಳನ್ನು ಏರಿಸಿ ರೈತರ ಪಂಪ್‌ಸೆಟ್ ಗಳಿಗೆ ಮೀಟರ್‌ಗಳನ್ನು ಅಳವಡಿಸಬೇಕೆಂಬ ನಿರ್ಧಾರದಿಂದ ಇಡೀ ಜಿಲ್ಲೆಯ ರೈತ ಸಮುದಾಯ ಗಂಭೀರ ಆತಂಕಕ್ಕೆ ಒಳಗಾಗಿದೆ. ಕೃಷಿ ಮಾರುಕಟ್ಟೆಯ ಮಾಯಾ ಜಾಲ ಮತ್ತು ಅಶ್ಚಿತತೆ ಇವು ಜಿಲ್ಲೆಯ ರೈತರ ದಿನನಿತ್ಯದ ಜೀವನ ಈ ಎಲ್ಲಾ ಸಮಸ್ಯೆಗಳನ್ನು ಎದುರಿಸಿ ನಿಲ್ಲುವಂತಹ ಕೆಲವೇ ಮಂದಿ ಶ್ರೀಮಂತ ರೈತರು ಮತ್ತು ಭೂಮಾಲೀಕರು ಮಾತ್ರ ಇಲ್ಲಿದ್ದಾರೆ.

ಹೈನುಗಾರಿಕೆ ಮತ್ತು ರೇಷ್ಮೆ ಕೃಷಿ ಇಷ್ಟು ದಿವಸಗಳ ಕಾಲ ಮಾರುಕಟ್ಟೆಯ ವೈಪರೀತ್ಯಗಳಿಂದ ಹೊರತಾಗಿದ್ದು, ರೈತರಿಗೆ ಸ್ವಲ್ಪಮಟ್ಟಿಗೆ ನೆಮ್ಮದಿಯನ್ನು ನೀಡುತ್ತಿತ್ತು. ಆದರೆ ಹಾಲು ಮತ್ತು ರೇಷ್ಮೆಯ ಆಮದು ಮೇಲೆ ಇದ್ದ ನಿರ್ಬಂಧ ತೆಗೆದು ಹಾಕಿದ ಮೇಲೆ ರೈತರ ಬದುಕಿಗೆ ತೀರಾ ಗಂಭೀರವಾದ ಹೊಡೆದ ಬಿದ್ದಂತಾಗಿದೆ. ವಿಪರೀತ ಬಂಡವಾಳ ವಿದ್ಯುತ್ ಸಮಸ್ಯೆ ಮತ್ತು ಮಾರುಕಟ್ಟೆಯ ಏರುಪೇರು ಇತ್ಯಾದಿ ಕಾರಣಗಳಿಂದಾಗಿ ಹೆಚ್ಚು ಭೂಮಿ ಹೊಂದಿರುವವರು ತೋಟಗಾರಿಕೆಯತ್ತ ಮುನ್ನಡೆಯುತ್ತಿದ್ದಾರೆ. ಕಪ್ಪು ಹಣದ ಬಂಡವಾಳಗಾರರು ಉನ್ನತ ಅಧಿಕಾರಿಗಳು ಬಡವರ ಜಮೀನುಗಳನ್ನು ಕೊಂಡು ವ್ಯಾಪಾರಿ ಬೆಳೆ ಬೆಳೆಯಲು ಪ್ರಾರಂಭಿದ್ದಾರೆ. ಸರ್ಕಾರದ ನೀತಿಗಳು ಇದಕ್ಕೆ ಉತ್ತೇಜನಕಾರಿಯಾಗಿದ್ದು ಸಣ್ಣ ಮತ್ತು ಬಡರೈತರ ಜಮೀನುಗಳು ಇವರ ಪಾಲಾಗುತ್ತಿವೆ.

ಅಗತ್ಯ ವಸ್ತುಗಳ ಬೆಲೆ ಏರಿಕೆ, ಅಸಮರ್ಪಕ ರೇಷನ್ ವ್ಯವಸ್ಥೆ ವರ್ಷವಿಡೀ ಕೂಲಿ ಸಿಗದ ಕಾರಣದಿಂದ ಕೃಷಿ ಕಾರ್ಮಿಕರ ಬದುಕು ಅಸಹನೀಯವಾಗುತ್ತಿದೆ. ಇತ್ತೀಚೆಗೆ ಕೂಲಿ ಸ್ವಲ್ಪಮಟ್ಟಿಗೆ ಹೆಚ್ಚಾಗಿದ್ದರೂ ಬೆಲೆಯೇರಿಕೆಗೆ ಅನುಗುಣವಾಗಿ ಕೂಲಿ ಹೆಚ್ಚಳವಾಗುತ್ತಿಲ್ಲ. ಬಂಡವಾಳಶಾಹಿ ಮಾರುಕಟ್ಟೆಯ ಅರಾಜಕ ಸ್ವರೂಪದಿಂದಾಗಿ ಮತ್ತು ಆಳುವ ವರ್ಗಗಳು ಅನುಸರಿಸುತ್ತಿರುವ ಕೃಷಿ ನೀತಿಗಳಿಂದಾಗಿ ದಿವಾಳಿ ಆಗುತ್ತಿರುವ ರೈತರು ತಮ್ಮ ಕಷ್ಟಗಳಿಗೆ ಮತ್ತು ನಷ್ಟಗಳಿಗೆ ಕೃಷಿ ಕಾರ್ಮಿಕರಿಗೆ ಹೆಚ್ಚಿನ ಕೂಲಿ ಕೊಡುತ್ತಿರುವುದಿರಂದಲೇ ನಾವು ದಿವಾಳಿ ಆಗುತ್ತಿರುವುದೆಂಬ ತಪ್ಪು ಗ್ರಹಿಕೆಯಲ್ಲಿದ್ದಾರೆ. ಇದು ಒಂದು ಅವೈಜ್ಞಾನಿಕ ಚಿಂತನೆ ಆಗಿದೆ. ಈ



ನಿಕರಾಗುವ ಚುನಾವಣೆಯಲ್ಲಿ ಅಮೆರಿಕ ಅಟ್ಟಹಾಸ

ಲ್ಯಾಟಿನ್ ಅಮೆರಿಕಾದಲ್ಲಿ ನಿಕರಾಗುವ ಪುಟ್ಟ ದೇಶ. 1979 ರಲ್ಲಿ ಸ್ಯಾಂಡಿನಿಸ್ಟಾ ನೇತೃತ್ವದಲ್ಲಿ ಪ್ರಜಾಪ್ರಭುತ್ವ ಕ್ರಾಂತಿಯಾಯಿತು. ಡೇನಿಯಲ್ ಒರ್ಟೆಗಾ ನಿಕರಾಗುವ ಅಧ್ಯಕ್ಷರಾದರು. 1979 ರಿಂದ 1989 ರವರೆಗೆ ಭೂಸುಧಾರಣೆ ಸೇರಿದಂತೆ ಹಲವಾರು ಜನಪರ ಕಾರ್ಯಗಳು ನಡೆದವು. ಹೆಚ್ಚುವರಿ ಭೂಮಿಯನ್ನು ಬಡಜನರಿಗೆ, ಭೂಹೀನರಿಗೆ ಹಂಚಲಾಯ್ತು.

ಕ್ರಾಂತಿಗಿಂತ ಮೊದಲು

ದೇಶದ ಶೇ 41 ರಷ್ಟು ಭೂಮಿ ಭೂಮಾಲಕರ ಕೈಯಲ್ಲಿತ್ತು. ನಂತರ ಭೂಮಾಲಕರ ಕೈಯಲ್ಲಿ ಶೇ 7 ರಷ್ಟು ಮಾತ್ರ ಭೂಮಿ ಉಳಿಯಿತು. ದೇಶದ ಪಟ್ಟಭದ್ರ ಹಿತಾಸಕ್ತಿಗಳು ಸೋತರು. ಅವರಿಗೆ ಕುಮ್ಮಕ್ಕು ನೀಡುತ್ತಿದ್ದ ಅಮೆರಿಕಾ ಮಧ್ಯ ಪ್ರವೇಶ ಮಾಡಿತು. ಪ್ರತಿಕ್ರಾಂತಿಕಾರಿ ಶಕ್ತಿಗಳಾದ 'ಕೊಂಟ್ರಾಸ್' ಗೆ ಬೆಂಬಲ ನೀಡಿದ್ದು ಮಾತ್ರವಲ್ಲದೆ ಭಯೋತ್ಪಾದಕರ ಮೂಲಕ 'ಸ್ಯಾಂಡಿನಿಸ್ಟಾ'ರನ್ನು ಸೋಲಿಸಲು ವಿವಿಧ ಸಂಚುಗಳನ್ನು ರೂಪಿಸುತ್ತಲೇ ಬಂದರು.

ಈ ಬಾರಿ ನವೆಂಬರ್‌ನಲ್ಲಿ ನಡೆದ ಚುನಾವಣೆಯಲ್ಲೂ ಅಮೆರಿಕಾ ತನ್ನ ಪ್ರಜಾಪ್ರಭುತ್ವ ವಿರೋಧಿ ನೀತಿಯನ್ನು ಪ್ರದರ್ಶಿಸಿತು. ಅಮೆರಿಕಾದ ಅಧ್ಯಕ್ಷರ ಸಹೋದರ ಜೆಜ್ ಬುಶ್, ನಿಕರಾಗುವ ಚುನಾವಣೆಯಲ್ಲಿ ಸ್ಯಾಂಡಿನಿಸ್ಟರನ್ನು ಸೋಲಿಸಲು ಕರೆ ನೀಡಿದ್ದ. ಈತ ಜಾರ್ಜ್ ಬುಶ್‌ರವರ ಅಧ್ಯಕ್ಷೀಯ ಚುನಾವಣೆಯಲ್ಲಿ ಫ್ಲೋರಿಡಾದಲ್ಲಿ ನಡೆದ ಚುನಾವಣೆಯಲ್ಲಿ 'ರಿಗ್' ಮಾಡಿದ ಕುಖ್ಯಾತಿಯನ್ನು ಹೊಂದಿದ್ದಾತ.

ರೇಗನ್ ಆಡಳಿತದ ಸಂದರ್ಭದಲ್ಲಿ ನಿಕರಾಗುವ ವಿರುದ್ಧ ಭಯೋತ್ಪಾದನೆಯ ಪ್ರಚಾರವನ್ನು ನಡೆಸಿದ ಅಧಿಕಾರಿಯೇ ಈಗ ಬುಶ್ ಆಡಳಿತದಲ್ಲಿ ವಿಶ್ವಸಂಸ್ಥೆಯಲ್ಲಿ ಖಾಯಂ ಪ್ರತಿನಿಧಿ. ಈತ 1980 ರ ದಶಕದಲ್ಲಿ ನಿಕರಾಗುವದ ನೆರೆಯ ದೇಶ ಹೊಂಡುರಾಸ್‌ನಲ್ಲಿ ರಾಯಭಾರಿಯಾಗಿದ್ದು ಪ್ರತಿಗಾಮಿಗಳಾದ 40,000 ಕಾಂಟ್ರಾಸ್‌ಗಳಿಗೆ ತರಬೇತಿ ನೀಡುವುದರಲ್ಲಿ ಸಂಪೂರ್ಣ ಸಹಕಾರಿಯಾಗಿದ್ದ. ಅಂತಹ ಹಲವಾರು ಅಧಿಕಾರಿಗಳು ಬುಶ್ ಆಡಳಿತದಲ್ಲಿ ಇದ್ದಾರೆ. ಅವರ ಕೆಲಸವೇ ಪ್ರತಿಕ್ರಾಂತಿಗಳಿಗೆ ಸಹಾಯ ಮಾಡುವುದು, ಪ್ರಜಾಪ್ರಭುತ್ವ ಶಕ್ತಿಗಳನ್ನು ಸೋಲಿಸುವುದು.

ನಿಕರಾಗುವಾ ಚುನಾವಣೆಯಲ್ಲಿ ಡೇನಿಯಲ್ ಒರ್ಟೆಗಾ ವಿರುದ್ಧ ಸ್ಪರ್ಧಿಸಿದ ಅಮೆರಿಕಾ ಬೆಂಬಲಿತ ಅಭ್ಯರ್ಥಿ -ಎನ್ರಿಕ್ ಬೊಲೊನೊಸ್. ಈತನ ಪರ ನಡೆದ ಚುನಾವಣಾ ಪ್ರಚಾರದ ಸಂದರ್ಭದಲ್ಲಿ ಅಮೆರಿಕದ ರಾಯಭಾರಿ ಒಂದೇ ವೇದಿಕೆಯಲ್ಲಿದ್ದ! (ಪ.ಬಂಗಾಳ ಚುನಾವಣೆಯ ಸಂದರ್ಭದಲ್ಲಿ ಅಮೆರಿಕಾ ನೀಡಿದ ಆಹಾರವನ್ನು ಮತದಾರರಿಗೆ ನೇರವಾಗಿ ನೀಡಲಾಗಿತ್ತು.) ಪ್ರಚಾರದ ಸಂದರ್ಭದಲ್ಲೇ. ಇದನ್ನು ಮಾಡಲು ಬಲಪಂಥೀಯ ಮತಗಳು ಹರಿದುಹಂಚಿ ಹೋಗದಂತೆ ನೇರ ಸ್ಪರ್ಧೆಗೆ ಅನುಕೂಲವಾಗುವಂತೆ, ಚುನಾವಣೆಯಲ್ಲಿದ್ದ ಮೂರನೇ ಅಭ್ಯರ್ಥಿಯನ್ನು ಹಿಂದೆ ಸರಿಯುವಂತೆ ಮಾಡಲಾಯ್ತು. ಈ ಚುನಾವಣೆಯಲ್ಲಿ ಅಮೆರಿಕದ ಮಧ್ಯಪ್ರವೇಶ ಎಷ್ಟರ ಮಟ್ಟಿಗೆ ಇತ್ತೆಂದರೆ, ನಿಕರಾಗುವಕ್ಕೆ ಚುನಾವಣಾ ಸಂದರ್ಶನಕಾರರಾಗಿ ತೆರಳಿದ್ದ ಅಮೆರಿಕದ ಮಾಜಿ ಅಧ್ಯಕ್ಷ ಜಿಮ್ಮಿ ಕಾರ್ಟರ್ ಅವರೇ ಅಮೆರಿಕಾದ ನೀತಿಯನ್ನು ಖಂಡಿಸಬೇಕಾಯ್ತು.

ಅತ್ತ ಅಫಘಾನಿಸ್ತಾನದ ಯುದ್ಧದಲ್ಲಿ ಅಮೆರಿಕಾದ 'ಬಿಸಿ'ಯಾಗಿದೆ. ಇತ್ತ ಮಧ್ಯ ಅಮೆರಿಕಾದ ಪುಟ್ಟ ದೇಶದ ಚುನಾವಣೆಯಲ್ಲೂ ಚೆಲ್ಲಾಟವಾಡುವುದನ್ನು ಮುಂದುವರಿಸಿದೆ.

ನಿಕರಾಗುವ ಸೇರಿದಂತೆ ಲ್ಯಾಟಿನ್ ಅಮೆರಿಕಾ ದೇಶಗಳಲ್ಲಿ ಪ್ರಜಾಪ್ರಭುತ್ವ ಶಕ್ತಿಗಳ ಮುನ್ನಡೆಯು ಅಮೆರಿಕಾಕ್ಕೆ ನುಂಗಲಾರದ ತುತ್ತು. ಅದಕ್ಕೆಂದೇ ಮೊಳಕೆಯಲ್ಲೇ ಕಿತ್ತೆಸೆಯುವ ತಂತ್ರ ಹಲವು ದಶಕಗಳಿಂದಲೂ ಅನುಸರಿಸುತ್ತಿದೆ.

ಇತ್ತೀಚಿಗಿನ ಚುನಾವಣೆಗಳಲ್ಲಿ ಅಮೆರಿಕಾ ನಗ್ನ ಆಕ್ರಮಣ ನಡೆಸಿದೆ. ಆದರೂ ಡೇನಿಯಲ್ ಒರ್ಟೆಗಾರ ಸ್ಯಾಂಡಿನಿಸ್ಟ್ ಕೂಟ ಶೇ 42 ಮತಗಳನ್ನು ಪಡೆದುದು ಸಾಮಾನ್ಯ ವೇನಲ್ಲ. ಅಮೆರಿಕಾ ನೇತೃತ್ವದ ವಿಶ್ವವ್ಯಾಪಾರ ಸಂಘಟನೆ, ಐಎಂಎಫ್, ಜಾಗತೀಕರಣ ನೀತಿಗಳು ನಿಕರಾಗುವ ನಾಗರಿಕರನ್ನು ತತ್ತರಿಸುವಂತೆ ಮಾಡಿದೆ. ಅಂತೆಯೇ ಸಾಮ್ರಾಜ್ಯಶಾಹಿ ಅಮೆರಿಕಾದ ಒತ್ತಡದ ನಡುವೆಯೂ ಸ್ಯಾಂಡಿನಿಸ್ಟ್ ಅಭ್ಯರ್ಥಿ ಡೇನಿಯಲ್ ಒರ್ಟೆಗಾ ಅವರಿಗೆ ಸಾಕಷ್ಟು ಮತಗಳು ಬಂದುದು ಮಾತ್ರವಲ್ಲದೇ ಹೊಸ ಸಂಸತ್ತಿನಲ್ಲಿ ಪ್ರಭಾವ ಬೀರುವಂಥ ಸಂಖ್ಯೆಯಲ್ಲಿದ್ದಾರೆ.


- ಬಾಲ

ಹಿಂದಿನ ಪುಟದಿಂದ

ಬೆಳವಣಿಗೆಗಳು ಜಿಲ್ಲೆಯಾದ್ಯಂತ ಏಕರೂಪವಾಗಿಲ್ಲದೆ, ತಾಲ್ಲೂಕಿನಿಂದ ತಾಲ್ಲೂಕಿಗೆ ವಿಭಿನ್ನವಾಗಿದೆ. ಒಟ್ಟಾರೆಯಾಗಿ ಕೃಷಿಯಲ್ಲಿ ಬಂಡವಾಳಶಾಹಿ ಪದ್ಧತಿ ಪ್ರವೇಶವಾಗುತ್ತಿದ್ದು ರೈತರಲ್ಲಿ ವಿಭಜನೆ ಪ್ರಾರಂಭವಾಗಿದೆ ಕೇಂದ್ರ ಸರ್ಕಾರದ ಕೃಷಿ ನೀತಿಯಿಂದಾಗಿ ಇಡೀ ಜಿಲ್ಲೆಯ ಕೃಷಿ ಕ್ಷೇತ್ರ ಗಂಭೀರ ಸವಾಲನ್ನು ಎದುರಿಸುತಿದೆ. ಜಿಲ್ಲೆಯ ಕೃಷಿ ಉಳಿಯಬೇಕಾದರೆ ಪಶ್ಚಿಮಾಭಿಮುಖವಾಗಿ ಹರಿಯುತ್ತಿರುವ ನೇತ್ರಾವತಿ, ಕುಮಾರಧಾರ ನದಿಗಳ ನೀರನ್ನು ಪೂರ್ವ ದಿಕ್ಕಿಗೆ ತಿರುಗಿಸಿ ಅದರ ಜೊತೆಯಲ್ಲಿ ಕೃಷ್ಣಾ ಕೊಳದ ನೀರಿನಲ್ಲಿ 'ಬಿ' ಸ್ಕೀಂನಲ್ಲಿ ನಮ್ಮ ರಾಜ್ಯದ ಪಾಲಿಗೆ ಬರುವ ನೀರಿನಲ್ಲಿ 80 ಟಿಎಂಸಿ ನೀರನ್ನು ಪಡೆದು ಬರಗಾಲ ಪೀಡಿತವಾದ 7 ಜಿಲ್ಲೆಗಳಿಗೆ (ಕೋಲಾರ ಜಿಲ್ಲೆಯು ಸೇರಿಸಿ) ನೀರು ಕೊಡುವುದರಿಂದ ಮಾತ್ರ ಕೋಲಾರ ಜಿಲ್ಲೆಯ ಕೃಷಿ ಉಳಿಸಬಹುದು. ಕೃಷಿ ಆಧಾರಿತ ಕಾರ್ಖಾನೆಗಳನ್ನು ಪ್ರಾರಂಭ ಮಾಡುವುದರ ಮುಖಾಂತರ ಜಿಲ್ಲೆಯ ಕೃಷಿ ಉಳಿಸಿ ಉದ್ಯೋಗಾವಕಾಶ ಹೆಚ್ಚಿಸಲು ಸಾಧ್ಯ. ಇದಕ್ಕೆ ದೀರ್ಘಕಾಲದ ಸಮರಶೀಲ ಹೋರಾಟಗಳನ್ನು ಸಂಘಟಿಸಬೇಕಾಗಿದೆ.

ಸಾಮಾಜಿಕ ಪರಿಸ್ಥಿತಿ:

ದೀರ್ಘಕಾಲದ ಕಮ್ಯುನಿಸ್ಟ್ ಚಳುವಳಿಯ ಪ್ರಭಾವದಿಂದಾಗಿ ಜಾತಿ ಮತ್ತು ಕೋಮುಗಲಭೆಗಳು ತೀರಾ ಕಡಿಮೆಯಾಗಿದ್ದ ಜಿಲ್ಲೆಯಲ್ಲಿ ಪಾಳೇಗಾರಿ ಮೌಲ್ಯಗಳ ಪ್ರಭಾವ ಹೆಚ್ಚಾಗಿದ್ದರೂ ಜಾತಿಯ ದಬ್ಬಾಳಿಕೆ ಮತ್ತು ಶೋಷಣೆಗಳು ತೀರಾ ಅತಿರೇಕಕ್ಕೆ ಹೋಗಿರಲಿಲ್ಲ. ಆದರೆ ಇತ್ತೀಚಿನ ವರ್ಷಗಳಲ್ಲಿ ಅಂದರೆ 1991 ರಿಂದೀಚೆಗೆ ಕೋಮುಗಲಭೆಗಳು ಮತ್ತು ಜಾತೀಯ ಗಲಭೆಗಳು ಹೆಚ್ಚಾಗತೊಡಗಿವೆ. ಇಡೀ ದೇಶದ ಗಮನ ಸೆಳೆದು ಟೀಕೆಗೊಳಗಾದ ಕಂಬಾಲಪಲ್ಲಿ ಮತ್ತು ಬಿಲ್ಲಾಂಡಹಳ್ಳಿ ಘಟನೆಗಳು ಜಿಲ್ಲೆಯ ಜಾತಿ ವೈರುಧ್ಯಗಳ ಕ್ರೂರ ಸ್ವರೂಪವನ್ನು ತೆರೆದಿಟ್ಟಿವೆ. ಇತ್ತೀಚಿನ ದಿನಗಳಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ಸೇರಿದ ಜನವಿಭಾಗದಲ್ಲಿ ತಮ್ಮ ಹಕ್ಕುಗಳ ಕುರಿತು ಹೆಚ್ಚುತ್ತಿರುವ ಪ್ರಜ್ಞೆಯಿಂದಾಗಿ ಪಾಳೇಗಾರಿ ಮೌಲ್ಯಗಳನ್ನು ಪ್ರತಿಗಾಮಿ ಶಕ್ತಿಗಳು ಬದಲಾವಣೆಯನ್ನು ಅರಗಿಸಿಕೊಳ್ಳಲು ಸಾಧ್ಯವಾಗದ ಪರಿಸ್ಥಿತಿಯಲ್ಲಿ ಜಾತಿ ದಬ್ಬಾಳಿಕೆಗಳನ್ನು ಪ್ರಾರಂಭ ಮಾಡಿವೆ. ಇದೇ ಸಂದರ್ಭದಲ್ಲಿ ಕೆಲವು ದಲಿತ ಸಂಘಟನೆಗಳು ಮತ್ತು ಅದರ ಮುಖಂಡರು ಅನುಸರಿಸುತ್ತಿರುವ ತಪ್ಪು ಧೋರಣೆಗಳು, ಭ್ರಷ್ಟ ಮತ್ತು ಸ್ವಾರ್ಥ ನಡವಳಿಕೆಗಳಿಂದಾಗಿ ಈ ಮೇಲ್ಜಾತಿ ಪ್ರತಿಗಾಮಿ ಶಕ್ತಿಗಳಿಗೆ ಒಂದು ರೀತಿಯ ಕುಮ್ಮಕ್ಕು ಕೊಟ್ಟಂತಾಗುತ್ತಿದೆ. ದಲಿತ ಚಳುವಳಿಯನ್ನು ವಿಶಾಲವಾದ ಸಾಮಾಜಿಕ, ಸಾಂಸ್ಕೃತಿಕ ಹೋರಾಟವನ್ನಾಗಿ ರೂಪಿಸುವುದರಲ್ಲಿ ವಿಫಲವಾಗಿರುವ ಈ ಸಂಘಟನೆಗಳು, ನಾಯಕರು ತಮ್ಮ ಸ್ವಾರ್ಥ ದಿವಾಳಿಕೋರ ನೀತಿಗಳಿಂದಾಗಿ ಕೆಳಜಾತಿಯ ಇತರೆ ಬಡವರು ಸಹ ಈ ಪ್ರತಿಗಾಮಿ ಶಕ್ತಿಗಳ ಜೊತೆ ಸೇರಿಕೊಳ್ಳುವ ಪ್ರವೃತ್ತಿ ಬೆಳೆಯುತ್ತಿದೆ. ಜಾತಿ ವಿನಾಶದ ಚಳುವಳಿಯನ್ನಾಗಸಬೇಕಿದ್ದ ದಲಿತ ಚಳುವಳಿ ಜಾತಿ ಸಂಘಟನೆಗಳಾಗಿ ಪರಿವರ್ತನೆಗೊಳ್ಳುತ್ತಿರುವುದು ಒಂದು ದುರಂತ ವಿಪರ್ಯಾಸವಾಗಿದೆ. ಈ ವಿಪರ್ಯಾಸಗಳಿಂದಾಗಿಯೇ ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಮಧ್ಯೆ ತೀವ್ರ ರೀತಿಯ ವೈರುಧ್ಯ ಮತ್ತು ವೈಷಮ್ಯಗಳು ಬೆಳೆಯತೊಡಗಿದೆ.



ಜಿಲ್ಲಾ ಕಾರ್ಯದರ್ಶಿ
ಜಿ.ವಿ.ಶ್ರೀರಾಮರೆಡ್ಡಿ

ಜೊತೆಗೆ ಸರ್ಕಾರ ತನ್ನ ಎಲ್ಲಾ ಯೋಜನೆ ಮತ್ತು ಹಣವನ್ನು ಮೀಸಲಾತಿಯ ಮೂಲಕ ಉದ್ಯೋಗಾವಕಾಶಗಳನ್ನು ಪರಿಶಿಷ್ಟ ಜಾತಿ ಮತ್ತು ಪಂಗಡಗಳಿಗೆ ನೀಡಲಾಗುತ್ತಿದೆ ಎಂದ ಹುಸಿ ಭ್ರಮೆಯು ಇತರೆ ಬಡವರಲ್ಲಿ ಮೂಡಿ ಅವರಲ್ಲಿ ದಲಿತ ವಿರೋಧಿ ಭಾವನೆ ಮೂಡಿಬರುತ್ತಿದೆ. ಇವೆಲ್ಲದರ ಪ್ರತಿಫಲವೆ ಮೇಲುಜಾತಿ ಸಂಘಟನೆಗಳ ರಚನೆ ಮತ್ತು ಇರುವ ಜಾತಿ ಸಂಘಟನೆಗಳ ಸಕ್ರಿಯತೆ, ಈ ಪ್ರಕ್ರಿಯೆ ಫಲವಾಗಿ ಮತ್ತು ತಮ್ಮ ಸಮಸ್ಯೆಗಳ ಪರಿಹಾರಕ್ಕೆ ತಮ್ಮ ಜಾತಿ ಸಂಘಗಳ ಮೂಲಕ ಪರಿಹಾರ ಸಾಧ್ಯವೆನ್ನುವ ಪರಿಣಾಮವಾಗಿ ಜಾತಿಯ ಸಂಘಟನೆಗಳನ್ನು ಕಟ್ಟುವ ಸಕ್ರಿಯಗೊಳಿಸುವ ಪ್ರಕ್ರಿಯೆ ನಡೆಯುತ್ತಿದೆ. ಇದಕ್ಕೆ ಭೂಮಾಲೀಕ ಬಂಡವಾಳಶಾಹಿ ಪಕ್ಷಗಳು ಕೋಮುವಾದದ ಅಪಾಯವಿರುವಾಗಲೇ ಜಾತಿ ಪ್ರಶ್ನೆ ಒಂದು ಪ್ರಮುಖ ಪ್ರಶ್ನೆಯಾಗಿ ರೂಪುಗೊಳ್ಳುತ್ತಿದೆ. ಒಂದು ಸಣ್ಣ ಸಮಸ್ಯೆಯು ಸಹಾ ಬೃಹತ್ ಘಟನೆಯಾಗಿ ರೂಪುಗೊಂಡು ಸಾಮಾಜಿಕ ಅಶಾಂತಿ ಮೂಡಿಸುವ ಸ್ಥಿತಿ ತಲುಪಿದೆ. ಇವುಗಳ ಪರಿಣಾಮವಾಗಿ ದಲಿತ ವಿರೋಧಿ ಪ್ರತಿಭಟನೆಗಳು ನಡೆಯುತ್ತಿದೆ. ಆದರೆ ಕಂಬಾಲಪಲ್ಲಿಯ ಅಮಾನವೀಯ ಘಟನೆಯ ನಂತರ ಈ ಜಾತಿ ಸಂಘಟನೆಗಳ ಚಟುವಟಿಕೆಗಳು ಸ್ವಲ್ಪಮಟ್ಟಿಗೆ ಮೇಲ್ನೋಟಕ್ಕೆ ಸ್ಥಗಿತಗೊಂಡಂತೆ ಕಾಣುತ್ತಿದೆ. ಆದರೆ ಇದು ಬೂದಿ ಮುಚ್ಚಿದ ಕೆಂಡವಾಗಿಯೇ ಇದೆ.

ರಾಜಕೀಯ ಪರಿಸ್ಥಿತಿ

ಕಾಂಗ್ರೆ ರಾಜ್ಯ ಮತ್ತು ಜಿಲ್ಲೆಯಲ್ಲಿ ಎಲ್ಲಾ ಅಧಿಕಾರಗಳನ್ನು ತನ್ನ ತೆಕ್ಕೆಗೆ ಹಾಕಿಕೊಂಡು ಎರಡು ವರ್ಷಗಳಾದರೂ ಜಿಲ್ಲೆಯಲ್ಲಿ ಹೇಳಿಕೊಳ್ಳುವಂತಹ ಯಾವುದೇ ಅಭಿವೃದ್ಧಿ ಕಾರ್ಯಗಳಾಗಿಲ್ಲ. ಕಾಂಗ್ರೆಸ್ ಅಧಿಕಾರಕ್ಕೆ ಬಂದ ಮೇಲೆ ಜಿಲ್ಲೆಯ ಇಡೀ ಆಡಳಿತ ಯಂತ್ರಾಂಗ ನಿಷ್ಕ್ರಿಯೆಗೊಂಡು ಕಾಂಗ್ರೆ ಕಛೇರಿಗಳ ರೀತಿಯಾಗಿದೆ. ಜನರ ಯಾವುದೇ ಸಮಸ್ಯೆಗಳಿಗೂ ಅಧಿಕಾರವರ್ಗ ಸ್ಪಂದಿಸುತ್ತಿಲ್ಲ. ಮಿತಿಮೀರಿದ ಭ್ರಷ್ಟಾಚಾರ, ನಿರ್ಲಕ್ಷ್ಯ, ಅಧಿಕಾರಿಗಳಲ್ಲಿ ತುಂಬಿ ತುಳುಕಾಡುತ್ತಿದೆ. ಸರ್ಕಾರಿ ಕಛೇರಿಗಳಲ್ಲಿ ಅಧಿಕಾರಿಗಳು ಸಾಮಾನ್ಯ ಜನರಿಗೆ ಲಭ್ಯರುವುದೇ ದುರ್ಲಭ್ಯವಾಗಿದೆ. ಪೋಲಿಸ್ ಸ್ಟೇಷನಗಳು ಮತ್ತು ಪೋಲಿಸ್ ಅಧಿಕಾರಿಗಳ ದರ್ಪ ಹೆಚ್ಚಾಗಿ ಕಾಂಗ್ರೆಸ್ ವಿರೋಧಿಗಳನ್ನು ದಮನ ಮಾಡಲು ಕಾಂಗ್ರೆ ಪೋಲೀಸರನ್ನು ಮತ್ತು ಅಧಿಕಾರಿಗಳನ್ನು ನಗ್ನವಾಗಿ ಉಪಯೋಗಿಸಿಕೊಳ್ಳುತ್ತಿದೆ. ಜಿಲ್ಲೆಯ ಅಧಿಕಾರ ಸೂತ್ರವನ್ನು ಕಾಂಗ್ರೆ ಹಿಡಿದ ಮೇಲೆ ಜಿಲ್ಲೆಯಲ್ಲಿ ಎಂದೂ ನಡೆಯದ ದುರಂತಗಳು ನಡೆದಿವೆ. ಒಂದು ಕಡೆ ಇಡೀ ರಾಜ್ಯವೇ ತಲೆತಗ್ಗಿಸುವಂತೆ ಮಾಡಿದ ಕಂಬಾಲಪಲ್ಲಿಯಲ್ಲಿ 7 ಜನ ದಲಿತರ ಜೀವಂತ ದಹನ ಒಂದು ಕಡೆಯಾದರೆ, ಜಿಲ್ಲೆಯ ಇತಿಹಾಸದಲ್ಲೇ ಸಾಲದ ಭಾರವನ್ನು ತಾಳಲಾರದೆ 12 ಜನ ರೈತರು ಆತ್ಮಹತ್ಯೆಯ ಮಾಡಿಕೊಂಡಿದ್ದು, ಇವೆಲ್ಲಾ ನಡೆದರು ರೀತಿಯಲ್ಲಿ ಕಾಂಗ್ರೆ ವರ್ತಿಸುತ್ತಿದೆ. ಇದು ರೈತರ ಕೃಷಿಕಾರ್ಮಿಕರ ಮತ್ತು ಇತರಜನತೆಯ ಯಾವುದೇ ಸಮಸ್ಯೆಯಯನ್ನು ಪರಿಹರಿಸಲು ಪ್ರಾಮಾಣಿಕ ಪ್ರಯತ್ನ ಮಾಡುತ್ತಿಲ್ಲ. ಜಿಲ್ಲಾ ಪಂಚಾಯಿತಿಯಂತೂ ಸಂಪೂರ್ಣ ನಿಷ್ಕ್ರಿಯೆ ಆಗಿದ್ದು, ಜಿಲ್ಲಾ ಪಂಚಾಯಿತಿ ಇದೆಯೋ ಇಲ್ಲವೋ ಎಂಬ ಅನುಮಾನ ಹುಟ್ಟಿಸುತ್ತಿದೆ. ಒಂದು ಕಡೆ ಅತಿವೃಷ್ಟಿ, ಇನ್ನೊಂದು ಕಡೆ ಅನಾವೃಷ್ಟಿಯಾಗಿ ಜನ ಕಂಗಾಲಾಗಿದ್ದಾರೆ. ಯಾವುದೇ ಪರಿಹಾರವನ್ನು ಸರ್ಕಾರ ನೀಡಿಲ್ಲ. ಬದಲು ಈ ಎರಡು ಸಮಸ್ಯೆಗಳಿಗೆ ಸರ್ಕಾರದಿಂದ ಭರವಸೆಗಳು ಬಂದವೇ ಹೊರತು ಪರಿಹಾರಗಳಿಲ್ಲ. ಜಿಲ್ಲೆಯ ಉಸ್ತುವಾರಿ ಸಚಿವರು ಬರಿ ಸುಳ್ಳು ಅಂಕಿಅಂಶ ಗಳನ್ನು ನೀಡಿ ಜನರನ್ನು ತಪ್ಪು ದಾರಿಗೆಳೆಯಲು ಪ್ರಯತ್ನ ಮಾಡುತ್ತಿದ್ದಾರೆ.

ಪಶ್ಚಿಮ ದಿಕ್ಕಿಗೆ ಹರಿಯುವ ನೇತ್ರಾವತಿ ಮತ್ತು ಕುಮಾರಾಧಾರ ನದಿಗಳ ನೀರನ್ನು ಪೂರ್ವಕ್ಕೆ ಹರಿಸುವ ಒಂದು ವರದಿ ರಾಜ್ಯ ಸರ್ಕಾರಕ್ಕೆ ಕೊಡಲಾಗಿದ್ದು. ಅದರ ಆದಾರದ ಮೇಲೆ ರಾಜ್ಯ ಸರ್ಕಾರ ಸರ್ವೇ ಮಾಡಲು 5 ಕೋಟಿಗಳನ್ನು ಅಯವ್ಯಯದಲ್ಲಿ ಸೇರಿಸಿದ್ದರೆ ಈ ಎರಡು ನದಿಗಳ ನೀರು ಇನ್ನೇನು ಕೋಲಾರ ಜಿಲ್ಲೆಗೆ ಬಂದೇ ಬಿಟ್ಟಿತು ಅನ್ನುವ ರೀತಿಯಲ್ಲಿ ಹೇಳಿಕೆ ನೀಡಿ ಜಿಲ್ಲೆಯ ಜನತೆಯಲ್ಲಿ ಭ್ರಮೆ ಮೂಡಿಸುತ್ತಿದ್ದಾರೆ. ವಾಸ್ತವವಾಗಿ ನಮ್ಮ ಜಿಲ್ಲೆಗೆ ನೀರು ಬರಬೇಕಾದರೆ ಭದ್ರಾ ಮೇಲ್ದಂಡೆ ಯೋಜನೆಯಲ್ಲಿ ಜಿಲ್ಲೆಗೆ ನೀರು ದೊರಕಿಸಿ ಕೊಡಲು ಸಾಧ್ಯವಿದೆ. ಇದರ ಬಗ್ಗೆ ಸರ್ಕಾರದ ಮೇಲೆ ಒತ್ತಾಯ ತರುವುದನ್ನು ಬಿಟ್ಟು ಜಿಲ್ಲೆಯ ಜನತೆಗೆ ತಪ್ಪು ಮಾಹಿತಿ ನೀಡುತ್ತಿದ್ದಾರೆ. ಆದುದರಿಂದ ಸಿಪಿಐ(ಎಂ) ಪಕ್ಷ ಮುಂಬರುವ ದಿನಗಳಲ್ಲಿ ಕೇಂದ್ರದ ಎನ್‌ಡಿಎ ನೀತಿಗಳ ವಿರುದ್ಧವಾಗಿ ಹಾಗೂ ಕಾಂಗ್ರೆಸ್ಸಿನ ಜನ ವಿರೋಧಿ, ಭ್ರಷ್ಟಾಚಾರ ಮತ್ತು ನಿಷ್ಕ್ರಿಯತೆ ವಿರುದ್ಧ ಒಂದು ಬಲಿಷ್ಟವಾದ ಮತ್ತು ವಿಶಾಲವಾದ ಸಂಘಟಿತ ಸಮರಶೀಲ ಹೋರಾಟಗಳನ್ನು ನಡೆಸಬೇಕಾಗಿದೆ. ಇದರ ಜೊತೆಯಲ್ಲಿಯೇ ಜಿಲ್ಲೆಯ ಅಭಿವೃದ್ಧಿ ಪ್ರಶ್ನೆಗಳನ್ನು ತೆಗೆದುಕೊಂಡು ಶಾಶ್ವತ ನೀರಾವರಿ ಯೋಜನೆಗಳಿಗಾಗಿ, ಅಂತರ್ಜಲ ಹೆಚ್ಚಿಸುವ ಕಾರ್ಯಗಳಿಗಾಗಿ ಜಿಲ್ಲೆಯಾದ್ಯಂತ ಒಂದು ನಿರಂತರ ಸಮರಶೀಲ ಹೋರಾಟ್ಟಗಳನ್ನು ಸಂಘಟಿಸಬೇಕಾಗಿದೆ.

ಸೌಹಾರ್ದತೆ, ಹೋರಾಡುವ ಸ್ಫೂರ್ತಿ ಸದಾ ಜಿನುಗುವ

'ನನ್ನೊಳಗಿನ ಹಾಡು ಕ್ಯೂಬಾ'


ಹವಾನಾದ ಪ್ಲಾಯದಲ್ಲಿ ನಾನಿದ್ದ ಮನೆಯ ಇಲಿಯಾನ, ಹೆಕ್ತೋರ್ ಯುವದಂಪತಿಗಳು, ಇಬ್ಬರೂ ವೈದ್ಯರು. ಪ್ರೀತಿಸಿ ಮದುವೆಯಾದವರು. ಇಲಿಯಾನರನ್ನು ಮೆಚ್ಚಿದ ಹೆಕ್ತೋರ್ ಮದುವೆಯಾಗುವ ಇಂಗಿತತೋರಿದ. ನೃತ್ಯಪಾರ್ಟಿಗೆ ಆಹ್ವಾನಿಸಿದ. ಇಲಿಯಾನ ಇರುವ ಬಗ್ಗೆ ಆತನಿಗೆ ಅನುಮಾನವಿತ್ತು. ಈ ಮದುವೆ ಪ್ರಸ್ತಾವವನ್ನು ತನ್ನ ತಂದೆ ಫರ್ನಾಂಡೀಜ್ ಹಾಗೂ ತಾಯಿಯೊಂದಿಗೆ ಚರ್ಚಿಸಿದಳು ಇಲಿಯಾನ. ತಂದೆ ಈ ಪ್ರಸ್ತಾವವನ್ನು ಅಷ್ಟಾಗಿ ಇಷ್ಟಪಡಲಿಲ್ಲ. ಆದರೆ ತನ್ನ ಅಭಿಪ್ರಾಯವನ್ನೇ ಹಿಡಿದು ಹಠ ಸಾಧಿಸಲಿಲ್ಲ. ಮನೆಮಂದಿಯೆಲ್ಲಾ ಹಲವು ಸುತ್ತಿನ ಮಾತುಕತೆಗಳ ನಂತರ ಎಲ್ಲರೂ ಮಗಳ ಇಷ್ಟವನ್ನೇ ಒಪ್ಪಿದರು. ಹೆಕ್ತೋರನ ಪಾರ್ಟಿಗೆ ಇಲಿಯಾನ ಹಾಜರಾದಳು. ಇಬ್ಬರೂ ನರ್ತಿಸಿದರು. ನಂತರ ಮದುವೆ.... ಹೆಕ್ತೋರ್ ನೀಗ್ರೊ..... ಇಲಿಯಾನ ಸ್ಪಾನಿಷ್. ಆದರೆ 'ವರ್ಣ' ಪ್ರೀತಿಗೆ ಅಡ್ಡಿ ಬರಲಿಲ್ಲ. ಹಾಗಿಯೇ ಇಂತಹ ಅನೇಕ ಲಕ್ಷಾಂತರ ಕುಟುಂಬಗಳು ಕ್ಯೂಬಾದ ತುಂಬಾ ಇವೆ. ಆದರೆ ಅವರ ನಡುವೆ ಯಾವುದೇ ತಕರಾರು ಒಂದಿನಿತೂ ಈ ವಿಷಯದಲ್ಲಿ ಸುಳಿದಿಲ್ಲ. ಹೀಗಾಗಿ ಅಲ್ಲಿನ ಅವರ ಮಕ್ಕಳು ಸಹ ಈ ಎರಡು 'ರೇಸ್'ಗಳ ವಿಶಿಷ್ಟತೆ ಹೊಂದಿರುವುದು ಎದ್ದು ಕಾಣುತ್ತದೆ. ಅವರದ್ದು ಸೌಹಾರ್ದತೆಯ ಬದುಕು. ಜಗತ್ತಿನ ದೇಶಗಳಲ್ಲಿ ಅನೇಕ ಭಾರಿ ಬಡಾಯಿ ಕೊಚ್ಚಿಕೊಳ್ಳುವ ಅಮೆರಿಕಾದಲ್ಲೇ ಜನಾಂಗೀಯ ಭೇದ, ಘರ್ಷಣೆ ಸ್ಫೋಟಗೊಳ್ಳುತ್ತಿರುವಾಗ ಕ್ಯೂಬಾದಲ್ಲಿನ ಈ ಬೆಳವಣಿಗೆ ನಿಜಕ್ಕೂ ಅದ್ಭುತ ಸಾಧನೆ. ಆದ್ದರಿಂದಲೇ ಸಂಗೀತ, ಹಾಡು, ಸಂಸ್ಕೃತಿಯಲ್ಲಿಯೂ ಇದರದ್ದೇ ರೂಪು, ಛಾಪು.

ಹಾಗೆ ಹೆಕ್ತೋರ್ - ಇಲಿಯಾನರ ಮುದ್ದಿನ ಮಗಳು ಗೆಬ್ರಿಯೇಲಾ... ಎರಡು ವ್ಯಕ್ತಿತ್ವಗಳ ಹೊಸ ಸ್ವರೂಪ. ಅತ್ಯಂತ ಚುರುಕಿನ ಹುಡುಗಿ. ಸದಾ ಕುಣಿಯುವ ಆಕೆಗೆ ಉತ್ಸವದ ಸಂದರ್ಭದಲ್ಲಿ ಮೂರು ವರುಷಗಳು.

'ಎತ್ತಮಿಯಾ?' ಎಂದು ನನ್ನನ್ನು ಕರೆಯುತ್ತಿದ್ದ, ಕೆಣಕುತ್ತಿದ್ದ, ಕೈ ಬೆರಳಿನಿಂದ ಊಟ ಮಾಡಬಾರದು, ಚಮಚೆ ಬಳಸಲು ಹೇಳಮ್ಮಾ ಎನ್ನುತ್ತಿದ್ದ ಗೆಬ್ರಿಯಲಾ ಈಗ ಹೇಗಿರಬಹುದು? ಅವಳು ಕ್ಯಬಾದ ಜೊತೆ ಜೊತೆಯಲ್ಲೇ ಬೆಳೆಯುತ್ತಿದ್ದಾಳಲ್ಲವೇ?

ಕ್ಯೂಬಾ ಇಂದು ಅನುಭವಿಸುತ್ತಿರುವ, ಎದುರಿಸುತ್ತಿರುವ ದಿಗ್ಬಂದನದ ಪರಿಣಾಮಗಳನ್ನು ಆ ನಾಡಿನ ಉದ್ದಗಲಕ್ಕೂ ಕಂಡೆವು. ಯಾವಾಗ ಬೇಕಾದರೂ ಅಮೆರಿಕ ಧಾಳಿ ನಡೆಸಿಬಿಡಬಹುದು. ಈ ರಸ್ತೆಗಳು ಯುದ್ಧಕಣಗಳಾಗಿಬಿಡಬಹುದು... ಅಲ್ಲಿಯ ಜನತೆಯ ಮೇಲೆ ಅದೆಂತಹ ಒತ್ತಡ! ಎಂತೆಂತಹ ಕಠಿಣ ಸಮಸ್ಯೆಗಳು, ಸಂಕಷ್ಟಗಳು.. ಇಂತಹ ಸನ್ನಿವೇಶವನ್ನು ಬೇರೆ

ಕರ್ನಾಟಕ ಸಾಹಿತ್ಯ ಅಕಾಡೆಮಿಯ 2001 ನೇ ಸಾಲಿನ ಅತ್ಯುತ್ತಮ ಪ್ರವಾಸ ಕಥನದ ಪ್ರಶಸ್ತಿ ಈ ಬಾರಿ 'ನನ್ನೊಳಗಿನ ಹಾಡು ಕ್ಯೂಬಾ'ಕ್ಕೆ



ಯಾರಾದರೂ ಎದುರಿಸುತ್ತಿದ್ದಲ್ಲಿ ಆ ದೇಶ ಹುಚ್ಚರ ಸಾಮ್ರಾಜ್ಯವಾಗಿ, ಮತಿಹೀನ ಸಮಾಜವಾಗಿ ಪರಿವರ್ತಿತವಾಗುತ್ತಿತ್ತು ಎನ್ನಿಸುತ್ತದೆ. ಆದರೆ ಕ್ಯೂಬಾದ ಜನತೆ ಅವುಗಳನ್ನು ಎದುರಿಸಿ ನಿಂತಿದ್ದಾರೆ. ಇಂದು-ನಾಳೆ ಎಂತಹ ಸ್ಥಿತಿ ಎದುರಾದರೂ ಎದ್ದು ನಿಂತು ಹೋರಾಡುವ ಕೆಚ್ಚೆದೆಯೊಂದಿಗೆ ಬಾಳುತ್ತಿದ್ದಾರೆ. ವಿಶ್ವದ ಎಲ್ಲೆಡೆಗಳಲ್ಲೂ ಸೌಹಾರ್ದತೆಯ ಸ್ನೇಹ ಬಳ್ಳಿ ಬೆಳೆಸುತ್ತಿದ್ದಾರೆ. ಕ್ರಾಂತಿಕಾರಿ ರಾಜಕೀಯ ಪ್ರಜ್ಞೆ, ಬದ್ಧತೆ, ಸ್ಫೂರ್ತಿ ಎದ್ದು ಕಾಣುತ್ತದೆ.

ವಿಶ್ವ ವಿದ್ಯಾರ್ಥಿ ಯುವಜನ ಉತ್ಸವ ಮುಗಿದು ಇನ್ನೇನು ವಾಪಸಾಗಬೇಕೆಂದು ಲಗೇಜ್ ಹಿಡಿದು ಮಹಡಿಯಿಂದ ಕೆಳಗಿಳಿಯುವಾಗ ಹೆಕ್ತೋರ್, ಇಲಿಯಾನರ, ಕುಟುಂಬ ಹಾಗೂ ನೆರೆಹೊರೆಯವರನ್ನು ಅಗಲುವ ಸ್ಥಿತಿ ನೆನೆದು ದುಃಖ ತಡೆಯಲಾಗಲಿಲ್ಲ. ಸದಾ ಹಾಸ್ಯ, ಒರಟುತನಗಳಿದ್ದ ಹೆಕ್ತೋರ್ ಬೆಳಗನಿಂದಲೇ ಗಂಭೀರವಾಗಿದ್ದ. ಅಲ್ಲಿಂದ ಕದಲುವುದು ನನಗೆ ಕಷ್ಟವಾಯಿತು. ಟ್ಯಾಕ್ಸಿ ಬಂದಿದೆ, ಕಾಯುತ್ತಿದೆ ಬಾರಪ್ಪ, ಎಂದು ಮೋಹನ ಹೇಳಿದ. ನಾನು ಮೆಟ್ಟಿಲಿಳಿಯುತ್ತಿದ್ದಂತೆ ಹೆಕ್ತೋರ್ ದುಃಖ ಉಮ್ಮಳಿಸಿ ನಿಲ್ಲಲಾಗದೇ ಒಳಗೆ ಹೋದ.... ಇಲಿಯಾನ, ಮಗು ಗೆಬ್ರಿಯೇಲಾ ಮ್ಲಾನ ಮುಖಹೊತ್ತು ತೆರದ ಕಣ್ಣು ಮುಚ್ಚದೆ ಹಾಗೇ ನೋಡುತ್ತಿದ್ದರು. ಆಗ ನನಗನ್ನಿಸಿತು. ಈ ಸ್ನೇಹ, ಇಷ್ಟೊಂದು ಗಾಢತೆ ಯಾಕೇ? ಅದಾವ ನಂಟು ನಮಗೆ? ಅದು ನಾನೆಂದೂ ಮತ್ತೆ ಭೇಟಿಯಾಗಲು ಅಸಾಧ್ಯವಾಗಿರುವಾಗ? ಈ ಸ್ನೇಹ ಹೀಗೆ ಅಗತ್ಯವೇ? ಎಂದು ನನ್ನ ಮನಸ್ಸಿನಲ್ಲಿ ಪ್ರಶ್ನೆಯೆದ್ದಿತು. ಅನಿವಾರ್ಯವಾಗಿ ಈ ಎಲ್ಲಾ ಸೆಳೆತದ ಭಾವನೆಗಳನ್ನು ಅಲ್ಲೇ ಬಿಟ್ಟು ಬರಬೇಕೇ ಎಂದು ನನ್ನ ಮನಸ್ಸು ಚಡಪಡಿಸಿತು. ಆದರೆ 'ನನ್ನೊಳಗಿನ ಹಾಡು ಕ್ಯೂಬಾ' ಅವೆಲ್ಲ ನೆನಪು, ಸ್ನೇಹ-ಹೋರಾಟದ ಶಕ್ತಿಯನ್ನು ಚಿರಂತನವಾಗಿ ಬೆಸೆದು ಬಿಟ್ಟಿದೆ, ಬೆಳೆಸುತ್ತಿದೆ, ಸದಾ ನವೀಕರಿಸುತ್ತಿದೆ. ಯಾವುದೂ ಮಾಸದಂತೆ, ಕಡಿದಷ್ಟು ಚಿಗುರುವ ವಿಯೆಟ್ನಾಂನ 'ಕ್ಷನು' ಮರಗಳಂತೆ ಚಿಗುರುತ್ತಲೇ ಇದೆ. ಜಗದೊಳಗಿನ ಅನ್ಯಾಯಗಳ ವಿರುದ್ಧ ನೀನು ಸಿಡಿದೆದ್ದರೆ ನಾನು ನೀನು ಸಂಗಾತಿ ಎಂದ 'ಚೆ' ವಾಕ್ಯ ಮತ್ತೆ ಮತ್ತೆ ಎಲ್ಲರನ್ನೂ, ಎಲ್ಲವನ್ನು ಹತ್ತಿರ ತರುತ್ತಿದೆ.

'ನನ್ನೊಳಗಿನ ಹಾಡು ಕ್ಯೂಬಾ' ಕ್ಕೆ 2001 ಸಾಲಿನ ಕರ್ನಾಟಕ ಸಾಹಿತ್ಯ ಅಕಾಡೆಮಿಯ ಪ್ರವಾಸ ಕಥನದ ಅತ್ಯುತ್ತಮ ಪ್ರಶಸ್ತಿ ಸಿಕ್ಕಿರುವುದು ಒಂದು ವಿಶಿಷ್ಟ ಸನ್ನಿವೇಶದಲ್ಲೇ. ಕ್ಯೂಬಾ ಈ ಜನವರಿ 1 ಕ್ಕೆ 42ನೇ ಕ್ರಾಂತಿಯ ಉತ್ಸವ ಆಚರಿಸುತ್ತಿದೆ. ಅದೂ ವಿಶ್ವದೆಲ್ಲೆಡೆ ಅಮೆರಿಕಾದ ಆತಂಕ, ದಿಗ್ಬಂದನಗಳನ್ನು ಸೋಲಿಸುತ್ತಾ, ಗೆಲ್ಲುತ್ತಾ ಸಾಗುತ್ತಿದೆ, ವಿಶ್ವಮಾನ್ಯವಾಗುತ್ತಿದೆ. ವಿಶ್ವದ ವೇದಿಕೆಗಳಲ್ಲಿ ಅಮೆರಿಕಾ ಈಗ ಕ್ಯೂಬಾದ ವಿಷಯದಲ್ಲಿ ಮೂಲೆಗೊತ್ತಲ್ಪಟ್ಟು ಒಂಟಿತನ ಅನುಭವಿಸುತ್ತಿದೆ.

ಹೆಜ್ಜೆ ಹೆಜ್ಜೆಗೂ ಗೆಲ್ಲುತ್ತಾ ಸಾಗಿರುವ ಕ್ಯೂಬಾಕ್ಕೆ ಈ ಪ್ರಶಸ್ತಿ ಕನ್ನಡ ನಾಡಿನ, ಭಾರತದ ಜನತೆಯ ಹಲವು ದಶಕಗಳ ಸೌಹಾರ್ದತೆಯ ಬಳ್ಳಿಯನ್ನು ಬೆಸೆದುಬಿಟ್ಟಿದೆ. ದೃಢವಾಗಿಸಿದೆ. ನಾಡಿನ ಓದುಗರನ್ನು ಗೆದ್ದು ಬಿಟ್ಟಿದೆ. ಕ್ಯೂಬಾ ಎಂದರೆ ಅದೆಲ್ಲೋ ಎಂಬ ಅಂತರ ದೂರಗೊಳಿಸಿದೆ. ಜನರನ್ನು ಹತ್ತಿರಕ್ಕೆ ತಂದಿದೆ. ಕನ್ನಡನಾಡಿನ ಪ್ರಜ್ಞಾವಂತರ ಎದೆಗಳಲ್ಲಿ ಹೊತ್ತಿ ಬೆಳಗುವ, ಕತ್ತಲೆಯೊಡನೆ ಹೋರಾಡುವ ಛಲದ ಬೆಳಗು ಈ ಪುಟ್ಟ ಹಣತೆ. ಇದನ್ನು ಸಾಧ್ಯವಾಗಿಸಿದ ಕವಿ ಮೋಹನನಿಗೆ, ಆ ನೆನಪು, ಸ್ಫೂರ್ತಿ ಹಂಚಲು ಮುಂದಾದ ಬಳ್ಳಾರಿಯ ಲೋಹಿಯಾ ಪ್ರಕಾಶನಕ್ಕೂ ಅಭಿನಂದನೆಗಳು. ಹಾಗೇ ಈ ಮಿನುಗುವ ದೀಪವನ್ನು ಗುರುತಿಸಿ ಜಾಗತಿಕ ನಂಟಿನ ಎಳೆಗಳ ನೇಯ್ಗೆಯನ್ನು ಹಾಸುಹೊಕ್ಕಾಗಿಸಿದ ಸಾಹಿತ್ಯ ಅಕಾಡೆಮಿಗೂ

- ಗುರ್ಜೀವ್

ಉಳಿದಿದು ಹೋದ ಪುಟ

ಕ್ಷಮಿಸು ನಿನ್ನ ಎದೆಯ ಭಾವನೆಗಳನ್ನು ಸುಡುತ್ತಿದ್ದೇನೆ'-

ಸೇನೆಯಲ್ಲಿ ಕೆಲಸ ಮಾಡಬೇಕು ಎಂಬ ಕನಸು ಕಂಡ ಹುಡುಗಿ ತನ್ನ ಧೈರ್ಯ ತೋರಿ ಸೇನೆಯೊಳಗೆ ಸೇರಿದಳು. ಆ ಹುಡುಗಿಗೆ ಕವನ ಬರೆಯುವ ಹುಚ್ಚು. ಬಂದೂಕು ಪಕ್ಕಕ್ಕಿಟ್ಟಾಗಲೆಲ್ಲಾ ಸಿಕ್ಕ ಸಿಕ್ಕ ಹಾಳೆಯ ಮೇಲೆ ಪೆನ್ಸಿಲ್ ಕಡ್ಡಿಯಿಂದ ತನ್ನೊಳಗೆ ಉಕ್ಕುತ್ತಿದ್ದ ಭಾವನೆಗಳಿಗೆಲ್ಲಾ ಮಾತು ಕೊಡುತ್ತಿದ್ದಳು. ಆಗ ಸೆರೆಸಿಕ್ಕವನು ಎರಗಿ ಬಂದ ನೆರೆಯ ದೇಶದ ಶತ್ರು ಸ್ಫುರದ್ರೂಪಿ ತರುಣ. ಆಕೆ ಹಿಡಿದ ಬಂದೂಕಿನ ಎದುರಿಗೆ ಚಳಿ ತಡೆಯಲಾಗದೆ ಗಡ ಗಡ ನಡುಗತ್ತಿದ್ದ ತರುಣ ಇನ್ನೇನು ಸತ್ತೇ ಹೋಗುತ್ತಾನೆ ಎನಿಸಿತು. ಬೆಂಕಿ ಹಚ್ಚಲು ಒಂದಿಷ್ಟು ತರಗೆಲೆಗಳೂ ಇಲ್ಲ. ಕಡ್ಡಿಯೂ ಇಲ್ಲ. ಆಗ ನೆನಪಾಯಿತು. ತನ್ನ ಬಳಿ ಇರುವ ಕವನಗಳ ಹಾಳೆಗಳು. ಅದನ್ನು ಹೊರತೆಗೆದವಳೇ ಬೆಂಕಿ ಇಟ್ಟಳು. ನಡುಗುತ್ತಿದ್ದ ತರುಣ ಬೆಂಕಿಯ ಮುಂದೆ ನಿಂತು ಹೇಳಿದ 'ಕ್ಷಮಿಸು, ನಿನ್ನ ಎದೆಯ ಭಾವನೆಗಳನ್ನು ಸುಡುತ್ತಿದ್ದೇನೆ'. ರಷ್ಯನ್ ಭಾಷೆಯ 'ನಲ್ವತ್ತೊಂದನೆಯವ' ಕಥೆ ಇದು. ಕವಿತೆಗೆ ಮನಸ್ಸು ಕೊಟ್ಟಿದ್ದ ದಿನಗಳಲ್ಲಿ ಓದಿದ ಈ ಕಥೆ ತಲೆಯೊಳಗೆ ನಾಟಿತ್ತು.

ಇದು ಮತ್ತೆ ನೆನಪಾದದ್ದು ಹವಾನಾದ ಪ್ಲಾಯಾದಲ್ಲಿ ನಾವಿದ್ದ 19 ನೇ ಬೀದಿಯ ಅಂಗಡಿಯ ಮುಂದೆ ನಿಂತಾಗ, ಯಾವುದಾದರೂ ಪತ್ರಿಕೆ ಓದಿಯೇ ಬೆಳಗು ಬರಮಾಡಿಕೊಳ್ಳುವ ನನಗೆ ಮನೆಯಲ್ಲಿ ಕೇಳಿದಾಗ ಪತ್ರಿಕೆ ಸಿಕ್ಕಿರಲಿಲ್ಲ. ಉತ್ತರ ಪಡೆಯಲು ಇಂಗ್ಲಿಸ್ ಬಿಡಲಿಲ್ಲ. ಇಂತಹ ಸಮಯದಲ್ಲೆಲ್ಲಾ ನನಗೆ ತೋರುತ್ತಿದ್ದ ದಾರಿ ಬಂದೇ. ನಾನು ಕೇಳುತ್ತಿರುವುದನ್ನು ಹುಡುಕುತ್ತಾ ಹೊರಡುವುದು. ಹಾಗೆ ಹುಡುಕುತ್ತಾ ಬೀದಿಯ ಕೊನೆಗೆ ಬಂದಾಗ ಸಿಕ್ಕಿದ್ದು ಗೂಡಂಗಡಿ. ಅಲ್ಲಿಕ ತೂಗುತ್ತಿತ್ತು ಪತ್ರಿಕೆ. ಭಾಷೆ ಸ್ಪಾನಿಯೋಲ್. ಯಾವುದಾದರಾಗಲೀ ಸುಮ್ಮನೇ ಕಣ್ಣಾಡಿಸುವ ಎಂದು ಕೈಗೆತ್ತಿಕೊಂಡಾಗ ಟ್ಯಾಬ್ಲಾಯ್ಡ್ ಆಕಾರದಲ್ಲಿ ಎಂಟುಪುಟ ಮಾತ್ರ. ಹೆಸರು ನೋಡಿದೆ - ಗ್ರಾನ್ಮಾ.

ಯಾವ ಪುಟಾಣಿ ನೌಕೆಯಲ್ಲಿ ಕ್ಯೂಬಾವನ್ನು ವಿಮೋಚನೆಗೊಳಿಸಲು 86 ಮಂದಿ ಕ್ರಾಂತಿಕಾರರು ಕುಳಿತು ಮೆಕ್ಸಿಕೋದಿಂದ ಬಂದರೋ ಆ ನೌಕೆಯ ಹೆಸರು ಹೊತ್ತ 'ಗ್ರಾನ್ಮಾ' ಪತ್ರಿಕೆ. ಗ್ರಾನ್ಮಾ ರಾಷ್ಟ್ರೀಯ ಪತ್ರಿಕೆ. ಹಲವಾರು ಪುಟಗಳಿಂದ ಜಗತ್ತಿನ ಆಳ ಅಗಲವನ್ನು ಒಂದು ಕಾಲಕ್ಕೆ ಅಳೆಯುತ್ತಿದ್ದ ಗ್ರಾನ್ಮಾ ಈಗ ರೆಕ್ಕೆ ಮುದುಡಿದ ಗುಬ್ಬಚ್ಚಿಯಂತಾಗಿ ಹೋಗಿತ್ತು. ಅಂಗಡಿಯಲ್ಲಿದ್ದದ್ದೂ ಬೆರಳೆಣಿಕೆಯ ಪ್ರತಿ. ಮನೆಗಳಿಗೆ ಕೊಳ್ಳುವವರೂ ಕಡಿಮೆ. ಕಾಲು ಡಾಲರ್ ಕ್ಯೂಬಾಕ್ಕೆ ಸುಲಭದ ಮೊತ್ತವೇನಲ್ಲ. ಗ್ರಾನ್ಮಾ ಸೊರಗಿದ್ದು ಏಕೆ ಎಂದು ಹತ್ತು ಹಲವರಲ್ಲಿ ಕೇಳಿದೆ. ಆರ್ಥಿಕ ದಿಗ್ಬಂಧನ. ನ್ಯೂಸ್‌ಪ್ರಿಂಟ್ ದುಬಾರಿಯಾಗಿದೆ ಎಂದರು.

ಪುಟ 9ಕ್ಕೆ

ಪ್ರವಾಸಕಥನದಲ್ಲಿ ಪುಟ್ಟಕ್ರಾಂತಿ

ಫಿಡೆಲ್‌ಕ್ಯಾಸ್ಟ್ರೋ, ಚೆಗೆವಾರ ಅವರ ಅದ್ವಿತೀಯ ಕ್ಯೂಬಾದ ಕ್ರಾಂತಿಯ ದರ್ಶನ ಮಾಡಿಸಿ, ಪ್ರವಾಸಕಥನ ಲೋಕದಲ್ಲೊಂದು ಪುಟ್ಟ ಕ್ರಾಂತಿಯನ್ನು ಉಂಟುಮಾಡಿದ ಕೃತಿ - ನನ್ನೊಳಗಿನ ಹಾಡು ಕ್ಯೂಬಾ

-ಸಿ.ಯು.ಬೆಳ್ಳಕ್ಕಿ
ನಿರ್ದೇಶಕರು, ಆಕಾಶವಾಣಿ

★

ಜನರಿಗೆ ಕ್ಯೂಬಾದಂತಹ ವಿದ್ಯಮಾನವನ್ನು ಅಷ್ಟು ಲಲಿತವಾಗಿ ತಿಳಿಸಿಕೊಟ್ಟಿರುವುದಕ್ಕಾಗಿ ವಂದನೆಗಳು. ನನಗೂ ಹಾಗೆ ಬರೆಯುವ ಸಾಮರ್ಥ್ಯ ಇದ್ದಿದ್ದರೆ.. ಎಂದು ಹೊಟ್ಟೆಕಿಚ್ಚು ಹುಟ್ಟಿಸುವಷ್ಟು ಚೆನ್ನಾಗಿದೆ ನಿಮ್ಮ ಬರವಣಿಗೆ

-ಡಾ.ಜಿ.ರಾಮಕೃಷ್ಣ

★

ತುಂಬಾ ದಿನಗಳ ನಂತರ ಒಂದು ಒಳ್ಳೆಯ ಪ್ರವಾಸ ಕಥನ ಓದಿದ ಅನುಭವ ನನ್ನಾದಾಯಿತು. ನಾನೆ ಕ್ಯೂಬಾ ಸುತ್ತಿದ ಅನನ್ಯತೆಯನ್ನು ನಿನ್ನ ಬರಹ ನೀಡಿತು.

-ಸಿ.ಬಸವಲಿಂಗಯ್ಯ

★

ನಾನು ಬರೋಬರಿ 120 ನಿಮಿಷಗಳಲ್ಲಿ ಕ್ಯೂಬಾ ಸುತ್ತುಹೊಡೆದ ಪುಟ ತೆರೆದೊಡನೆ ಪ್ರವಾಸ ಆರಂಭವಾಗಿ, ಕಣ್ಣಂಚು ಒದ್ದೆಯಾದಾಗ ಓದು ಮುಗಿಯಿತು.

-ಟಿ.ಎಲ್.ಕೃಷ್ಣೇಗೌಡ

★

ಹಿಡಿದರೆ ಓದಿಯೇ ಕೆಳಗಿಡಬೇಕು-ಪುಸ್ತಕ ನನ್ನೊಳಗಿನ ಹಾಡು ಕ್ಯೂಬಾ

- ಡಾ.ಆರ್.ವಿ.ಭಂಡಾರಿ

★

ಇಡೀ ಪ್ರವಾಸ ಕಥನ ಓದಿ ಮುಗಿಸಿದಾಗ ಕ್ಯೂಬಾದ ಆತ್ಮವಿಶ್ವಾಸ, ಎದ್ದು ನಿಲ್ಲುವ ಕನಸುಗಾರಿಕೆ ನಮ್ಮ ದೇಶದಲ್ಲಿಯೂ ಇರಬಾರದೇ ಎಂದೆನ್ನಿಸುತ್ತದೆ. ಮೋಹನ್ ಇದನ್ನೂ ಬರೆದು ಉಪಕರಿಸಿದ್ದಾರೆ. ಕ್ಯೂಬಾದ ಬಗ್ಗೆ ಹೇಳಲು ಒಂದು ಪುಸ್ತಕ ಸಿಕ್ಕಂತಾಯಿತು.

- ಡಾ.ಕೆ.ಕೇಶವಶರ್ಮ

★

ಇತಿಹಾಸ ಕಷ್ಟವೆಂದು ನಂಬಿದ್ದ ನನಗೆ ಮೋಹನ್ ಅಂಥವರು ಇತಿಹಾಸ ಬರೆದರೆ ಸುಲಭವಾಗಿ ಅರ್ಥಮಾಡಿಕೊಳ್ಳಬಹುದು ಎಂದು ನನಗನಿಸಿತು. ಇದೊಂದು ಅರ್ಥಪೂರ್ಣ ಪ್ರವಾಸ ಕಥನ.

-'ಗಾಂಧಿಬಜಾರ್' ಪತ್ರಿಕೆ

★

ಇದು ಬರೀ ಪ್ರವಾಸ ಕಥನವಲ್ಲ. ಕ್ಯೂಬಾದ ಇತಿಹಾಸ-ವರ್ತಮಾನದ ಮನಮಿಡಿಯುವ ವಿವರಗಳು ಈ ಪುಸ್ತಕದಲ್ಲಿದೆ. ಕಾವ್ಯಸ್ಪರ್ಶವಿರುವ ಶೈಲಿಯಿಂದಾಗಿ ಕೃತಿ ಓದಿಸಿಕೊಂಡು ಹೋಗುತ್ತದೆ.

-ಉದಯವಾಣಿ

★

ಪುಟ್ಟ ರಾಷ್ಟ್ರವೊಂದು ಸಂಘರ್ಷದ ನಡುವೆಯೂ ಇಟ್ಟ ದಿಟ್ಟ ಹೆಜ್ಜೆಗಳು ಇಲ್ಲಿವೆ. ಇದನ್ನು ನೋಡಿಯಾದರೂ ಭಾರತ ಪಾಠ ಕಲಿಯಬೇಕಾಗಿದೆ.

- ವಿಜಯ ಕರ್ನಾಟಕ

PRB DECR 319-79/79 AIKYARANGA WEEKLY Reg. No. 17015/64 KRNM/BGS-405 MAG(2)

... (ಮಾರ್ಕ್ಸ್‌ವಾದಿ), ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಎಸ್.ಸೂರ್ಯನಾರಾಯಣ ರಾವ್